ಶನಿವಾರ, ಜೂನ್ 26, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಲ್ಪಾ ನಗು
ಬಾಲಿವುಡ್ ನಟಿ
ಶಿಲ್ಪಾ ಶೆಟ್ಟಿ ಅವರು
ಮುಂಬೈನಲ್ಲಿ ಶುಕ್ರವಾರ
ಕಾಣಿಸಿಕೊಂಡಿದ್ದು ಹೀಗೆ



ಖಾಸಗಿ ಶಾಲೆಗಳ ವಿರುದ್ಧ ಪೋಷಕರ ಅಸಮಾಧಾನ– ಪ್ರತಿಭಟನೆ • ಸ್ಥಳದಲ್ಲಿ ಪೊಲೀಸರ ನಿಯೋಜನೆ

ಆನ್‌ಲೈನ್ ತರಗತಿಗೆ ನಿರ್ಬಂಧ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣ ಶುಲ್ಕ ಪಾವತಿಸದ ವಿದ್ಯಾರ್ಥಿಗಳ ಫಲಿತಾಂಶ ತಡೆಹಿಡಿದಿರುವ ಮತ್ತು ಆನ್‌ಲೈನ್ ತರಗತಿ ನಿರ್ಬಂಧಿಸುತ್ತಿರುವ ನಗರದ ಕೆಲವು ಖಾಸಗಿ ಶಾಲೆಗಳ ವಿರುದ್ಧ ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜಾಜಿನಗರದಲ್ಲಿರುವ ಶ್ರೀವಾಣಿ ಪ್ರೌಢಶಾಲೆಯ ಎದುರು ಪೋಷಕರು ಶುಕ್ರವಾರ ಪ್ರತಿಭಟನೆ ನಡೆಸಿದರು. ಇಂತಹ ಶಾಲೆಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಿದ್ದು ಕೂಡ ಪೋಷಕರ ಆಕ್ರೋಶಕ್ಕೆ ಕಾರಣವಾಯಿತು.

‘ನನ್ನ ಇಬ್ಬರು ಮಕ್ಕಳು ಶ್ರೀವಾಣಿ ಶಾಲೆಯಲ್ಲಿ ಓದುತ್ತಿದ್ದಾರೆ. ಅದರಲ್ಲಿ ಒಬ್ಬ ಎಸ್ಸೆಸ್ಸೆಲ್ಸಿಯಲ್ಲಿ ಓದುತ್ತಿದ್ದಾನೆ. ₹63 ಸಾವಿರ ಶುಲ್ಕದ ಪೈಕಿ, ₹43 ಸಾವಿರ ಪಾವತಿಸಿದ್ದೇನೆ. ಅಂದರೆ, ಶೇ 80ರಷ್ಟು ಹಣ ಕಟ್ಟಿದ್ದೇನೆ. ಆದರೂ, ಮಕ್ಕಳ ಹಿಂದಿನ ತರಗತಿಯ ಫಲಿತಾಂಶ ನೀಡುತ್ತಿಲ್ಲ. ಆನ್‌ಲೈನ್ ತರಗತಿ ನಿರ್ಬಂಧಿಸಿದ್ದಾರೆ. ಪೂರ್ತಿ ಶುಲ್ಕ ಪಾವತಿಸಲು ಒತ್ತಡ ಹೇರಲಾಗುತ್ತಿದೆ. ನೋಟ್ಸ್‌ಗಳನ್ನು ಹಂಚಿಕೊಳ್ಳದಂತೆ ಬೇರೆ ಮಕ್ಕಳಿಗೂ ಸೂಚನೆ ನೀಡಲಾಗಿದೆ’ ಎಂದು ಪೋಷಕರೊಬ್ಬರು ದೂರಿದರು.

‘ಈ ಬಗ್ಗೆ ವಿಚಾರಿಸೋಣ ಎಂದರೆ ಪ್ರಾಚಾರ್ಯರು, ಶಿಕ್ಷಕರು ಸೇರಿದಂತೆ ಆಡಳಿತ ಮಂಡಳಿಯ ಎಲ್ಲರ ಫೋನ್ ಸ್ವಿಚ್ಡ್ ಆಫ್ ಆಗಿವೆ. ಎಲ್ಲವನ್ನೂ ಇ–ಮೇಲ್‌ನಲ್ಲಿ ಹೇಳುತ್ತಾರೆ. ನಾವು ಕಳುಹಿಸಿದ ಮೇಲ್‌ಗಳಿಗೆ ಪ್ರತಿಕ್ರಿಯಿಸುವುದಿಲ್ಲ. ಶಾಲೆಗೆ ಬಂದರೆ ಬಾಗಿಲು ಬಂದ್ ಮಾಡಿರುತ್ತಾರೆ. ಶುಲ್ಕ ಕಟ್ಟಿಸಿಕೊಳ್ಳುವ ಕೌಂಟರ್ ಮಾತ್ರ ತೆರೆಯಲಾಗಿದೆ’ ಎಂದು ವಿದ್ಯಾರ್ಥಿಯ ತಾಯಿಯೊಬ್ಬರು ಹೇಳಿದರು.

‘ಖಾಸಗಿ ಶಾಲೆಗಳು ಶೇ 70ರಷ್ಟು ಬೋಧನಾ ಶುಲ್ಕ ತೆಗೆದುಕೊಳ್ಳಲು ಸರ್ಕಾರ ಸೂಚಿಸಿದೆ. ಈ ಆದೇಶ ನಮಗೆ ಅನ್ವಯವಾಗುವುದಿಲ್ಲ, ಪೂರ್ತಿ ಶುಲ್ಕ ಪಾವತಿಸಿ ಎಂದು ಶಾಲೆಗಳು ಹೇಳುತ್ತಿವೆ. ಈ ಬಗ್ಗೆ ಅಧಿಕಾರಿಗಳಿಗೆ ಕೇಳಿದರೆ, ನ್ಯಾಯಾಲಯದ ಆದೇಶಕ್ಕೆ ಕಾಯುತ್ತಿದ್ದೇವೆ ಎನ್ನುತ್ತಾರೆ. ಎಲ್ಲದಕ್ಕೂ ನ್ಯಾಯಾಲಯವೇ ಮಧ್ಯಪ್ರವೇಶಿಸಬೇಕು ಎಂದರೆ ಶಿಕ್ಷಣ ಸಚಿವರು ಏಕೆ ಬೇಕು’ ಎಂದೂ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಶಾಲಾ ಆಡಳಿತ ಮಂಡಳಿಯ ಮುಖ್ಯಸ್ಥರು ಮತ್ತು ಕ್ಷೇತ್ರದ ಶಿಕ್ಷಣಾಧಿಕಾರಿ ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.



ಶಾಲೆಯ ವಿರುದ್ಧ ಪೋಷಕರು ಶುಕ್ರವಾರ ನಡೆಸಿದ ಪ್ರತಿಭಟನೆಗೆ ಎಐಡಿಎಸ್‌ಒ ಸದಸ್ಯರು ಬೆಂಬಲ ನೀಡಿದರು

> ಸರ್ಕಾರ ಯಾವುದೇ ಆದೇಶ ನೀಡಿದರೂ ಖಾಸಗಿ ಶಾಲೆಗಳು ನ್ಯಾಯಾಲಯದ ಮೆಟ್ಟಿಲೇರುತ್ತಿವೆ. ಶಾಲಾ ಶುಲ್ಕ ಸಮಸ್ಯೆ ಬಗೆಹರಿಸಲು ಉಚ್ಚ ನ್ಯಾಯಾಲಯವೇ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿ ರಚಿಸಬೇಕು
>
> **ಎಸ್. ಸುರೇಶ್‌ಕುಮಾರ್,** ಶಿಕ್ಷಣ ಸಚಿವ

ಜುಲೈ 31ರೊಳಗೆ ದ್ವಿತೀಯ ಪಿಯು ಫಲಿತಾಂಶ

ರಾಜ್ಯ ಪಠ್ಯಕ್ರಮದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಜುಲೈ 31ರೊಳಗೆ ಫಲಿತಾಂಶ ನೀಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳ 12ನೇ ತರಗತಿ ಮಕ್ಕಳಿಗೆ ಜು.31ರೊಳಗೆ ಫಲಿತಾಂಶ ನೀಡಲು ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ರಾಜ್ಯದಲ್ಲೂ ಅಷ್ಟರೊಳಗೆ ಫಲಿತಾಂಶ ನೀಡುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಎಸ್ಸೆಸ್ಸೆಲ್ಸಿ ವೇಳಾಪಟ್ಟಿ ಶೀಘ್ರ: ‘ಶೀಘ್ರದಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳಿಗೆ ಯಾವುದೇ ಗೊಂದಲ ಬೇಡ, ಅತ್ಯಂತ ಸುರಕ್ಷತಾ ಕ್ರಮಗಳೊಂದಿಗೆ ಪರೀಕ್ಷೆ ನಡೆಸಲು ಕೋವಿಡ್ ಕಾರ್ಯಪಡೆ ನೀಡಿರುವ ಮಾರ್ಗಸೂಚಿ ಅನುಸಾರ ಸಿದ್ಧತೆಗಳನ್ನು ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪರೀಕ್ಷೆ ಸಂಬಂಧ ಅಧಿಕಾರಿಗಳ ಕರ್ತವ್ಯಗಳ ಬಗ್ಗೆಯೂ ಆದೇಶ ಮಾಡಲಾಗಿದೆ. ಪರೀಕ್ಷೆಗೆ ಕೆಲ ದಿನಗಳು ಬಾಕಿ ಇರುವಾಗಲೇ ವೇಳಾಪಟ್ಟಿ ಪ್ರಕಟಿಸಲಾಗುವುದು’ ಎಂದು ಸಚಿವರು ತಿಳಿಸಿದರು.

ಸುದ್ದಿ 2 ನಿಮಿಷ

ತ್ಯಾಗ ಮಾಡಿದ್ದು ಏನು?: ಪ್ರೊ.ಬಿಕೆಸಿ

ಬೆಂಗಳೂರು: ‘ಎರಡು ವರ್ಷದ ಹಿಂದೆ ಜೆಡಿಎಸ್, ಕಾಂಗ್ರೆಸ್ ತೊರೆದು ವಲಸಿಗರಾಗಿ ಬಂದು ಈ ಸರ್ಕಾರದಲ್ಲಿ ಶಾಸಕರು, ಮಂತ್ರಿಗಳಾದವರು ‘ತ್ಯಾಗಕ್ಕೆ ತಕ್ಕ ಬೆಲೆ ಸಿಕ್ಕಿಲ್ಲ’ ಎಂದು ವಿಲವಿಲ ಒದ್ದಾಡುತ್ತಿದ್ದಾರೆ. ಇವರು ತ್ಯಾಗ ಮಾಡಿದ್ದಾದರೂ ಏನು’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.



‘ಒಂದು ರಾಜಕೀಯ ಅನಿಶ್ಚಿತತೆಯ ಮುಳ್ಳು ಬೇಲಿಯ ಮೇಲೆ ನಿರಂತರವಾಗಿ ಕುಳಿತು ಬಟ್ಟೆ ಹರಿದ ನಂತರ ಬಿಜೆಪಿ ಜತೆ ರಹಸ್ಯ ಒಪ್ಪಂದ ಮಾಡಿಕೊಂಡು ತ್ಯಾಗಕ್ಕೆ ಮುಂದಾದರಲ್ಲವೆ? ಒಬ್ಬ ವ್ಯಕ್ತಿ ಅಧಿಕಾರದಲ್ಲಿ ಇರಲು ಯೋಗ್ಯನೆ? ಅಲ್ಲವೆ? ಎಂಬುದನ್ನು ನಿರ್ಧರಿಸಬೇಕಾಗಿರುವುದು ಆತ ಅಲ್ಲಿಗೆ ತಲುಪಲು ದಾರಿಯಲ್ಲವೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ಕೇಳಿದ್ದಾರೆ.

‘ಇವರ ತ್ಯಾಗದ ಬಾಬ್ತಿಗೆ ಆಳುವ ಪಕ್ಷಕ್ಕೆ ತಗುಲಿದ ವೆಚ್ಚವನ್ನು ಹೇಳುವಂತಿಲ್ಲ. ಹೀಗೆ ಹಪಹಪಿಸುವ ರಾಜಕಾರಣಿಗಳು ತ್ಯಾಗ ಮಾಡಿರುವುದು ಏನು ಎಂಬುದು ನನ್ನಂತಹ ಸಾಮಾನ್ಯ ಜನರಿಗೆ ಅರ್ಥವಾಗದ ವಿಷಯ’ ಎಂದಿದ್ದಾರೆ.

ಮಾಜಿ ಸೈನಿಕರಿಗೆ ಜಮೀನು: ಅರ್ಜಿ ವಿಲೇವಾರಿಗೆ ಸುತ್ತೋಲೆ

ಬೆಂಗಳೂರು: ಮಾಜಿ ಸೈನಿಕರು ಜಮೀನು ಮಂಜೂರಾತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಎಲ್ಲ ಜಿಲ್ಲಾಧಿಕಾರಿಗಳಿಗೂ ಗುರುವಾರ ಸುತ್ತೋಲೆ ಹೊರಡಿಸಿದ್ದಾರೆ.

ಜಮೀನು ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಗಳನ್ನು ದೀರ್ಘ ಕಾಲದಿಂದ ಬಾಕಿ ಇರಿಸಿಕೊಂಡಿರುವುದನ್ನು ಪ್ರಶ್ನಿಸಿ ಮಾಜಿ ಸೈನಿಕರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ವೇಳೆ ಹೈಕೋರ್ಟ್ ಗಂಭೀರವಾದ ಸೂಚನೆಗಳನ್ನು ನೀಡಿತ್ತು. ಅದನ್ನು ಆಧರಿಸಿ ಈ ಸುತ್ತೋಲೆ ಹೊರಡಿಸಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಎಲ್ಲ ಜಿಲ್ಲಾಧಿಕಾರಿಗಳೂ ತಮ್ಮ ವ್ಯಾಪ್ತಿಯಲ್ಲಿ ಮಾಜಿ ಸೈನಿಕರಿಗೆ ಮಂಜೂರು ಮಾಡಬಹುದಾದ ಜಮೀನುಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಬೇಕು. ಕೃಷಿ ಜಮೀನು ಲಭ್ಯವಿರದಿದ್ದರೆ ಕಂದಾಯ ಇಲಾಖೆಯ ಜಮೀನುಗಳನ್ನೇ ಗುರುತಿಸಬೇಕು. ಜಮೀನಿನ ಲಭ್ಯತೆ ಕುರಿತು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಮೂಲಕ ಮಾಜಿ ಸೈನಿಕರಿಗೆ ಮಾಹಿತಿ ನೀಡಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಾಜಿ ಸೈನಿಕರು ಜಮೀನು ಮಂಜೂರಾತಿ ಕೋರಿ ಸಲ್ಲಿಸುವ ಅರ್ಜಿಗಳ ಕಡತವನ್ನು ನಿರ್ವಹಿಸಬೇಕು. ಜೇಷ್ಠತೆಯ ಆಧಾರದಲ್ಲಿ ಅರ್ಜಿಗಳ ವಿಲೇವಾರಿ ಮಾಡಬೇಕು. ಅರ್ಜಿದಾರರನ್ನು ಖುದ್ದಾಗಿ ವಿಚಾರಣೆ ನಡೆಸದೇ ಅರ್ಜಿಗಳನ್ನು ವಿಲೇವಾರಿ ಮಾಡಬಾರದು. ಅರ್ಜಿದಾರರ ಜಿಲ್ಲೆಯಲ್ಲಿ ಜಮೀನು ಲಭ್ಯವಿಲ್ಲದಿದ್ದರೆ ಪಕ್ಕದ ಜಿಲ್ಲೆಯಲ್ಲಿ ಮಂಜೂರಾತಿಗೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಲಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,09,687 ▲
ಸಕ್ರಿಯ ಪ್ರಕರಣಗಳು	66,232 ▼
ಗುಣಮುಖರಾದವರು	11,27,900 ▲
ಒಟ್ಟು ಸಾವು	15,554 ▲
ದಿನದ ಏರಿಕೆ	
ಹೊಸ ಪ್ರಕರಣ	614 ▼
ಗುಣಮುಖ	1,401 ▼
ಸಾವು	17 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬಸ್ ಸಂಚಾರಕ್ಕೆ ಇಲ್ಲ ಅಡ್ಡಿ

ಬೆಂಗಳೂರು: ವಾರಾಂತ್ಯದ ಕರ್ಫ್ಯೂ ಸಂದರ್ಭದಲ್ಲಿಯೂ ಬಸ್‌ಗಳ ಕಾರ್ಯಾಚರಣೆ ನಡೆಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

ಕರ್ಫ್ಯೂ ವೇಳೆ ಬಹಳಷ್ಟು ಚಟುವಟಿಕೆಗಳನ್ನು ನಿಷೇಧಿಸಿರುವುದರಿಂದ ಅವಶ್ಯಕತೆಗಳಿಗೆ ತಕ್ಕಂತೆ ಬಸ್‌ಗಳು ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

‘ಕರ್ಫ್ಯೂ ವೇಳೆ ಶೇ30ರಷ್ಟು ಅಂದರೆ 1,200 ಬಸ್‌ಗಳನ್ನು ಮಾತ್ರ ರಸ್ತೆಗೆ ಇಳಿಸಲಾಗುವುದು’ ಎಂದು ಬಿಎಂಟಿಸಿ ಹೇಳಿದೆ.

ಇಂದು ₹ 50 ಕೋಟಿ ಮೌಲ್ಯದ ಮಾದಕವಸ್ತು ನಾಶ: ಬೊಮ್ಮಾಯಿ

ಬೆಂಗಳೂರು: 2020 ಮತ್ತು 2021ರಲ್ಲಿ ರಾಜ್ಯದ ಪೊಲೀಸರು ವಿವಿಧೆಡೆ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿರುವ ₹ 50.23ಕೋಟಿ ಮೌಲ್ಯದ ವಿವಿಧ ಮಾದಕವಸ್ತುಗಳನ್ನು ‘ಅಂತರರಾಷ್ಟ್ರೀಯ ಮಾದಕವಸ್ತು ವಿರೋಧಿ ದಿನ’ವಾದ ಶನಿವಾರ ನಾಶಪಡಿಸಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿದ ಅವರು, ‘23,829 ಕೆ.ಜಿ. ಗಾಂಜಾ, 34.4 ಕೆ.ಜಿ. ಪೊಪ್ಪಿ, 1 ಕೆ.ಜಿ. ಬ್ರೌನ್ ಷುಗರ್, 161.34 ಕೆ.ಜಿ. ಓಪಿಯಂ, 6.15 ಕೆ.ಜಿ. ಹಶೀಶ್, 5.2 ಕೆ.ಜಿ. ಚರಸ್, ಎಂಡಿಎಂಎ ಪುಡಿ, ಮಾತ್ರೆಗಳು, ಕೊಕೇನ್, ಎಲ್‌ಎಸ್‌ಡಿ ಹಾಳೆಗಳನ್ನು ಶನಿವಾರ ಏಕಕಾಲಕ್ಕೆ ನಾಶಪಡಿಸಲಾಗುವುದು’ ಎಂದರು.

‘ನಾನು ಪರೀಕ್ಷೆ ಬರೆದಿಲ್ಲ’: ‘ಮುಖ್ಯಮಂತ್ರಿ ಬದಲಾವಣೆ ಪರೀಕ್ಷೆ ಬರೆದಿದ್ದೇವೆ’ ಎಂಬ ಪ್ರವಾಸೋದ್ಯಮ ಸಚಿವ ಯೋಗೇಶ್ವರ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ‘ನಾನು ಪರೀಕ್ಷೆ ಬರೆದಿಲ್ಲ. ಯಾವ ಫಲಿತಾಂಶವನ್ನೂ ನಿರೀಕ್ಷಿಸಿಲ್ಲ. ಯಾವುದರ ಆಕಾಂಕ್ಷಿಯೂ ಅಲ್ಲ’ ಎಂದು ಹೇಳಿದರು.

ಮಾಜಿ ಕಾರ್ಪೊರೇಟರ್ ಹತ್ಯೆ: ಸಂಬಂಧಿಯೇ ಆರೋಪಿ

24 ಗಂಟೆಯಲ್ಲಿ ಪ್ರಕರಣ ಭೇದಿಸಿದ ಪೊಲೀಸರು • ಇಬ್ಬರು ಆರೋಪಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛಲವಾದಿಪಾಳ್ಯ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಆರ್. ರೇಖಾ ಕದಿರೇಶ್ (43) ಹತ್ಯೆ ಪ್ರಕರಣವನ್ನು 24 ಗಂಟೆಗಳಲ್ಲಿ ಭೇದಿಸಿರುವ ಪೊಲೀಸರು, ಇಬ್ಬರು ಪ್ರಮುಖ ಆರೋಪಿಗಳನ್ನು ಕಾಲಿಗೆ ಗುಂಡು ಹಾರಿಸಿ ಸೆರೆಹಿಡಿದಿದ್ದಾರೆ.


ರೇಖಾ ಕದಿರೇಶ್

ಕೃತ್ಯದ ನಂತರ ತಲೆಮರೆಸಿಕೊಂಡಿದ್ದ ಆರೋಪಿಗಳಾದ ಪೀಟರ್ (46) ಹಾಗೂ ಸೂರ್ಯ (20) ಸುಂಕದಕಟ್ಟೆ ಸಮೀಪದ ಬಜಾಜ್ ಮೈದಾನದಲ್ಲಿ ಶುಕ್ರವಾರ ಬೆಳಿಗ್ಗೆ ಕಾಣಿಸಿಕೊಂಡಿದ್ದರು. ಬಂಧಿಸಲು ಹೋಗಿದ್ದ ಪೊಲೀಸರ ಮೇಲೆ ಡ್ರ್ಯಾಗರ್‌ನಿಂದ ಹಲ್ಲೆ ಮಾಡಿದ್ದರು. ಸಿಬ್ಬಂದಿ ಗಾಯಗೊಂಡಿದ್ದರು.

ಇನ್‌ಸ್ಪೆಕ್ಟರ್‌ಗಳಾದ ಸಿ.ಬಿ. ಶಿವಸ್ವಾಮಿ ಹಾಗೂ ಚಿದಾನಂದಮೂರ್ತಿ ಆರೋಪಿಗಳ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿರುವ ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳು ಸಿಬ್ಬಂದಿಯೂ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರು ಮಂದಿ ಬಂಧನ: ‘ಫ್ಲವರ್‌ಗಾರ್ಡನ್‌ನಲ್ಲಿರುವ ಕಚೇರಿ ಎದುರೇ ರೇಖಾ ಅವರನ್ನು ಹತ್ಯೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು.


ಸೂರ್ಯ


ಪೀಟರ್

ಪೀಟರ್, ಸೂರ್ಯ ಸೇರಿ ಆರು ಮಂದಿಯನ್ನು ಸದ್ಯ ಬಂಧಿಸಲಾಗಿದೆ. ಮತ್ತಷ್ಟು ಮಂದಿ ಕೃತ್ಯದ ಸಂಚಿನಲ್ಲಿ ಭಾಗಿಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಪೀಟರ್, ರೇಖಾ ಪತಿ ಕದಿರೇಶ್ ಅವರ ಅಂಗರಕ್ಷಕನಾಗಿದ್ದ. ಸೂರ್ಯ, ರೇಖಾ ಅವರ ಸಂಬಂಧಿ.’ ಎಂದೂ ತಿಳಿಸಿವೆ.

‘ಸಣ್ಣ ವಯಸ್ಸಿನಿಂದಲೇ ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ಸೂರ್ಯ, ಕದಿರೇಶ್ ಬಳಿ ಹಣ ಪಡೆಯುತ್ತಿದ್ದ. ಅವರ ಕೊಲೆ ನಂತರ ರೇಖಾ ಹಣ ಕೊಡುತ್ತಿರಲಿಲ್ಲ. ಕಾರ್ಪೊರೇಟರ್ ಹೆಸರು ಹೇಳಿಕೊಂಡು ಗುತ್ತಿಗೆ ಕೆಲಸ ಮಾಡಿಸುತ್ತಿದ್ದ ಪೀಟರ್, ಅದರಿಂದ ಹಣ ಸಂಪಾದಿಸಿ ಫ್ಲವರ್ ಗಾರ್ಡನ್‌ನಲ್ಲೇ ಬಹುಮಹಡಿ ಕಟ್ಟಡ ನಿರ್ಮಿಸುತ್ತಿದ್ದ. ತನ್ನ ಹೆಸರಿಗೆ ಧಕ್ಕೆ ತರುತ್ತಿದ್ದಾನೆಂಬುದು ಗೊತ್ತಾಗುತ್ತಿದ್ದಂತೆ ಆತನಿಗೆ ರೇಖಾ ಎಚ್ಚರಿಕೆ ನೀಡಿದ್ದರು. ಇಷ್ಟೆಲ್ಲ ಆದರೂ ಇಬ್ಬರೂ ಆರೋಪಿಗಳು ರೇಖಾ ಜೊತೆಯೇ ಓಡಾಡಿಕೊಂಡಿದ್ದರು’ ಎಂದೂ ಮೂಲಗಳು ಹೇಳಿವೆ.

‘ಕದಿರೇಶ್ ಕೊಲೆಯಾದ ನಂತರ ರೇಖಾ ತಮಗೆ ಹಣ ಕೊಡುತ್ತಿಲ್ಲ ಹಾಗೂ ಬೆಳೆಯಲು ಬಿಡುತ್ತಿಲ್ಲವೆಂಬ ಕೋಪ ಆರೋಪಿಗಳಿಗೆ ಇತ್ತು. ‘ಕದಿರೇಶ್ ನಿನ್ನ ಹೆಚ್ಚು ಇಷ್ಟಪಡುತ್ತಿದ್ದರು. ಕೇಳಿದಾಗಲೆಲ್ಲ ಹಣ ಕೊಡುತ್ತಿದ್ದರು. ಆದರೆ, ರೇಖಾ ನಿಮ್ಮ ಕುಟುಂಬದವರಿಗೆ ಮರ್ಯಾದೆ ಕೊಡುತ್ತಿಲ್ಲ. ಹಣವನ್ನೂ ನೀಡುತ್ತಿಲ್ಲ’ ಎಂದು ಸೂರ್ಯನನ್ನು ಪೀಟರ್ ಪ್ರಚೋದಿಸಿದ್ದ. ಉಳಿದ ಆರೋಪಿಗಳನ್ನು ಒಟ್ಟಿಗೆ ಸೇರಿಸಿಕೊಂಡು ಹತ್ಯೆಗೆ ಸಂಚು ರೂಪಿಸಿದ್ದ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆಯಬೇಕಿದೆ. ಹೆಚ್ಚಿನ ವಿಚಾರಣೆಗೆ ಒಳಪಡಿಸಿದರೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದೂ ಮೂಲಗಳು ಹೇಳಿವೆ.

ಟಿ.ಆರ್. ಮಿಲ್ ಸ್ಮಶಾನದಲ್ಲಿ ಅಂತ್ಯಕ್ರಿಯೆ: ಕಿಮ್ಸ್ ಆಸ್ಪತ್ರೆಯಲ್ಲಿ ರೇಖಾ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಶುಕ್ರವಾರ ಬೆಳಿಗ್ಗೆ ಚಾಮರಾಜಪೇಟೆಯ ಟಿ.ಆರ್. ಮಿಲ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

> ಪೂರ್ವ ವಿಭಾಗದ ಪೊಲೀಸರು ನಿರಂತರವಾಗಿ ಕೆಲಸ ಮಾಡಿ ಆರೋಪಿಗಳನ್ನು ಬಂಧಿಸಿದ್ದಾರೆ. ಕೊಲೆಗೆ ನಿಖರ ಕಾರಣ ಇನ್ನಷ್ಟೇ ತಿಳಿಯಬೇಕಿದೆ
>
> **ಕಮಲ್ ಪಂತ್**
> ನಗರ ಪೊಲೀಸ್ ಕಮಿಷನರ್

ವಾಹನ ಬದಲಿಸಿ ದಿಕ್ಕು ತಪ್ಪಿಸಲು ಯತ್ನ

ಕಚೇರಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ತಿರುಗಿಸಿಟ್ಟು ಆರೋಪಿಗಳು ಕೃತ್ಯ ಎಸಗಿದ್ದರು. ಆದರೆ, ಸ್ಥಳೀಯ ನಿವಾಸಿಗಳು ಕೃತ್ಯದ ದೃಶ್ಯಗಳನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ರೇಖಾ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ವ್ಯಕ್ತಿಯೊಬ್ಬರು, ಆರೋಪಿಗಳಾದ ಪೀಟರ್ ಹಾಗೂ ಸೂರ್ಯನೇ ಕೃತ್ಯ ಎಸಗಿರುವುದಾಗಿ ಪೊಲೀಸರಿಗೆ ದೂರು ನೀಡಿದ್ದರು.

ಅದೇ ಸುಳಿವು ಆಧರಿಸಿ ಹೆಚ್ಚುವರಿ ಪೊಲೀಸ್ ಕಮಿಷನರ್ ಮುರುಗನ್ ಹಾಗೂ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಮುಂದಾಳತ್ವದ ಪೊಲೀಸರ ಮೂರು ವಿಶೇಷ ತಂಡಗಳು ಆರೋಪಿಗಳ ಬೆನ್ನು ಬಿದ್ದಿದ್ದವು.

ಕೃತ್ಯದ ಸ್ಥಳದಿಂದ ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದ್ದ ಆರೋಪಿಗಳು, ಚಾಮರಾಜಪೇಟೆ ಸಮೀಪ ಆಟೊ ಹತ್ತಿದ್ದರು. ಎರಡು ಬಾರಿ ಆಟೊವನ್ನೂ ಬದಲಿಸಿದ್ದರು. ವಾಹನ ಬದಲಿಸಿದರೆ ಪೊಲೀಸರಿಗೆ ಸುಳಿವು ಸಿಗುವುದಿಲ್ಲವೆಂದು ಆರೋಪಿಗಳು ಅಂದುಕೊಂಡಿದ್ದರು.

ಪೀಟರ್, ಸೂರ್ಯನ ಸಹಚರರು ಹಾಗೂ ಕುಟುಂಬಸ್ಥರನ್ನು ವಿಚಾರಣೆ ನಡೆಸಿದ್ದ ಪೊಲೀಸರು, ‘ಆರೋಪಿಗಳು ತಮಿಳುನಾಡಿಗೆ ಪರಾರಿಯಾಗಲು ಸಿದ್ಧತೆ ಮಾಡಿಕೊಂಡಿದ್ದಾರೆ’ ಎಂಬ ಮಾಹಿತಿ ಪತ್ತೆ ಹಚ್ಚಿದ್ದರು.

ಶುಕ್ರವಾರ ಬೆಳಿಗ್ಗೆ ಸುಂಕದಕಟ್ಟೆ ಬಜಾಜ್ ಮೈದಾನದಲ್ಲಿ ಸೇರಿದ್ದ ಆರೋಪಿಗಳು, ಅಲ್ಲಿಯೇ ಮದ್ಯ ಕುಡಿದು ನಂತರ ತಮಿಳುನಾಡಿಗೆ ಹೊರಡಬೇಕಿತ್ತು. ಈ ಸಂಗತಿ ಗೊತ್ತಾಗುತ್ತಿದ್ದಂತೆ ಪೊಲೀಸರ ತಂಡ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.

‘ಆರೋಪಿ ಪೀಟರ್, ಮೂರು ಕೊಲೆ ಪ್ರಕರಣಗಳಲ್ಲಿ ಆರೋಪಿ. ಹಲ್ಲೆ ಹಾಗೂ ಎರಡು ಸುಲಿಗೆ ಯತ್ನ ಪ್ರಕರಣದಲ್ಲೂ ಈತ ಭಾಗಿಯಾಗಿದ್ದ. ಮತ್ತೊಬ್ಬ ಆರೋಪಿ ಸೂರ್ಯನ ವಿರುದ್ಧ ತಲಾ ಎರಡು ಕೊಲೆ ಹಾಗೂ ಕೊಲೆ ಯತ್ನ ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೊಲೆಯಲ್ಲಿ ‘ಗಾಂಜಾ’ ವಾಸನೆ

‘ಛಲವಾದಿಪಾಳ್ಯ ಹಾಗೂ ಸುತ್ತಮುತ್ತ ಗಾಂಜಾ ಮಾರಾಟ ಜಾಲ ಜೋರಾಗಿದೆ. ಈ ಜಾಲದಲ್ಲಿ ಸೂರ್ಯ ಹಾಗೂ ಪೀಟರ್ ಸಹ ಕೆಲಸ ಮಾಡುತ್ತಿದ್ದರು. ಜಾಲದ ವಿರುದ್ಧ ರೇಖಾ ಇತ್ತೀಚೆಗಷ್ಟೇ ದೂರು ನೀಡಿದ್ದರು. ಇದು ಸಹ ಕೊಲೆಗೆ ಕಾರಣವೆಂಬ ಮಾಹಿತಿಯಿದೆ. ಈ ಆಯಾಮದಲ್ಲೂ ತನಿಖೆ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.09 ಕೋಟಿ ▲	3.01 ಕೋಟಿ
ಸಕ್ರಿಯ ಪ್ರಕರಣ	1.14 ಕೋಟಿ	5.90 ಲಕ್ಷ ▼
ಗುಣಮುಖ	16.55 ಕೋಟಿ ▲	2.91 ಕೋಟಿ
ಸಾವು	39.19 ಲಕ್ಷ ▲	3.94 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	4.02 ಲಕ್ಷ ▼	48,618 ▼
ಗುಣಮುಖ	3.25 ಲಕ್ಷ ▼	64,524 ▼
ಸಾವು	8,215 ▼	1,182 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 13,365 ಅಮೆರಿಕ; 72,705 ▼ ಬ್ರೆಜಿಲ್; 20,182 ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 49.74 ▼ ಅಮೆರಿಕ; 12.22 ▲ ಬ್ರೆಜಿಲ್; 3.41 ▲ ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.20 ಲಕ್ಷ ಮಹಾರಾಷ್ಟ್ರ; 24,954 ▲ ದೆಹಲಿ; 32,051 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 60.17 ಮಹಾರಾಷ್ಟ್ರ; 28.65 ಕೇರಳ ▲; 24.55 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್


ನಗರದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಕುಶಲಕರ್ಮಿಗಳು ಆರಂಭಿಸಿರುವ ‘ಗ್ರಾಮೀಣ ಅಂಗಡಿ’ಯನ್ನು ಉದ್ಘಾಟಿಸಲಾಯಿತು. ಗ್ರಾಮೀಣ ಕರಕುಶಲ ಉದ್ಯಮದ ಸಂಸ್ಥಾಪಕ ಬಿ.ರಾಜಶೇಖರ ಮೂರ್ತಿ, ಗ್ರಾಮೀಣ ಅಂಗಡಿಯ ವ್ಯವಸ್ಥಾಪಕ ಬಿ.ಗಂಗಾಧರ ಮೂರ್ತಿ, ಶಿವಮೊಗ್ಗದ ಕುಶಲಕರ್ಮಿ ಹಾಲೇಶ್ ಹಾಗೂ ಇತರರು ಇದ್ದರು.

ನಗರದಲ್ಲಿ ಸಾವಿರಕ್ಕೂ ಅಧಿಕ ಮಂದಿಗೆ ಸೋಂಕು ದೃಢ • ದೃಷ್ಟಿ ಕಳೆದುಕೊಂಡ 36 ಮಂದಿ

ಕಪ್ಪು ಶಿಲೀಂಧ್ರ: ಮೃತರ ಸಂಖ್ಯೆ 80ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿನ ತೀವ್ರತೆಗೆ ನಗರದಲ್ಲಿ ಮೃತಪಟ್ಟವರ ಸಂಖ್ಯೆ 80ಕ್ಕೆ ಏರಿಕೆಕಂಡಿದ್ದು, 36 ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ.

ಕೋವಿಡ್ ಎರಡನೇ ಅಲೆಯ ಬಳಿಕ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾಗುವರ ಸಂಖ್ಯೆ ಹೆಚ್ಚಳವಾಗಿ, ಚಿಕಿತ್ಸೆಗೆ ಹಾಸಿಗೆಗಳ ಕೊರತೆ ಎದುರಾಗಿತ್ತು. ಕೆಲ ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವುದರಿಂದ ಕೊರೊನಾ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳನ್ನು ಈಗ ಕಪ್ಪು ಶಿಲೀಂಧ್ರ ಸೋಂಕು ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ.

ನಗರದಲ್ಲಿ ಈವರೆಗೆ 1,026 ಶಿಲೀಂಧ್ರ ಸೋಂಕು ಪ್ರಕರಣಗಳು ದೃಢಪಟ್ಟಿವೆ. ಇದರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 200 ಪ್ರಕರಣಗಳು, ಬೌರಿಂಗ್ ಆಸ್ಪತ್ರೆಯಲ್ಲಿ 270 ಪ್ರಕರಣಗಳು ಹಾಗೂ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಎರಡು ಪ್ರಕರಣಗಳು ವರದಿಯಾಗಿವೆ. ಇನ್ನುಳಿದ ಪ್ರಕರಣಗಳು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ದೃಢಪಟ್ಟಿವೆ. ಸದ್ಯ ವಿಕ್ಟೋರಿಯಾದಲ್ಲಿ 65 ಮಂದಿ ಹಾಗೂ ಬೌರಿಂಗ್ ಆಸ್ಪತ್ರೆಯಲ್ಲಿ 160 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾದವರಲ್ಲಿ ಈವರೆಗೆ ಇಬ್ಬರು ಮೃತಪಟ್ಟಿದ್ದು, 19 ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ದಾಖಲಾದವರಲ್ಲಿ 32 ಮಂದಿ ಸಾವಿಗೀಡಾಗಿದ್ದು, 17 ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ. ಈ ಆಸ್ಪತ್ರೆಗಳಲ್ಲಿ ಕ್ರಮವಾಗಿ 90 ಹಾಗೂ 126 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಪ್ರಕರಣಗಳ ಸಂಖ್ಯೆ ಇಳಿಕೆ: ನಗರದಲ್ಲಿ ಕೋವಿಡ್ ಹೊಸ ಪ್ರಕರಣ ಸಂಖ್ಯೆ ಇಳಿಕೆ ಹಾಗೂ ಅನಿಯಂತ್ರಿತ ಸ್ಟೆರಾಯ್ಡ್ ಬಳಕೆಗೆ ಕಡಿವಾಣ ಹಾಕಿದ ಪರಿಣಾಮ ಶಿಲೀಂಧ್ರ ಸೊಂಕು ಪ್ರಕರಣಗಳು ಕೂಡ ಇಳಿಕೆಯಾಗಿವೆ. ಕಳೆದ 10 ದಿನಗಳಲ್ಲಿ 79 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ 8 ಮಂದಿ ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಟ್ಟಿದ್ದಾರೆ.

‘ಕಳೆದ 10 ದಿನಗಳಿಂದ ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ಇಳಿಕೆ ಕಂಡಿವೆ. ಪ್ರತಿನಿತ್ಯ ಒಂದಿಬ್ಬರನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ವ್ಯಕ್ತಿ ಬೇಗ ಚೇತರಿಸಿಕೊಳ್ಳುತ್ತಾನೆ. ಇಲ್ಲವಾದಲ್ಲಿ ವೈರಾಣು ಕಣ್ಣಿಗೆ ಹರಡಿ, ಮಿದುಳಿಗೆ ವ್ಯಾಪಿಸಿಕೊಳ್ಳುತ್ತದೆ. ಆಗ ಜೀವ ಉಳಿಸಲು ಕಣ್ಣನ್ನು ತೆಗೆಯಬೇಕಾಗುತ್ತದೆ’ ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

‘ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವ ಕಾರಣ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಖಾಲಿಯಿವೆ. ಹೀಗಾಗಿ, ಕಪ್ಪು ಶಿಲೀಂಧ್ರ ಸೋಂಕಿತರಿಗೆ ಈಗ ಹಾಸಿಗೆ ಸಮಸ್ಯೆಯಾಗುತ್ತಿಲ್ಲ. ಸ್ಟೆರಾಯ್ಡ್ ಬಳಕೆ ನಿಯಂತ್ರಣ ಹಾಗೂ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವ ಕಾರಣ ಶಿಲೀಂಧ್ರ ಸೋಂಕು ಪ್ರಕರಣ ಕೂಡ ಇಳಿಮುಖವಾಗಿದೆ. ಸೋಂಕಿತರಲ್ಲಿ ಶೇ 10ರಷ್ಟು ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ’ ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಅನ್ಸರ್ ಅಹಮದ್ ಹೇಳಿದರು.

ವೈದ್ಯರೊಬ್ಬರಲ್ಲಿ 2 ವಿಧದ ಶಿಲೀಂಧ್ರ ಪತ್ತೆ

ಕೋವಿಡ್‌ನಿಂದ ಚೇತರಿಸಿಕೊಂಡಿದ್ದ ನಗರದ ವೈದ್ಯರೊಬ್ಬರಿಗೆ ಕಪ್ಪು ಹಾಗೂ ಹಸಿರು ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ.

ಈ ಎರಡು ವಿಧದ ಶಿಲೀಂಧ್ರ ಸೋಂಕು ವ್ಯಕ್ತಿಯೊಬ್ಬರಲ್ಲಿ ಕಾಣಿಸಿಕೊಂಡ ದೇಶದ ಮೊದಲ ಪ್ರಕರಣ ಇದು ಎಂದು ಹೇಳಲಾಗಿದೆ. ಡಾ. ಕಾರ್ತಿಕೇಯನ್ ಆರ್. ಎಂಬುವವರು ಕಪ್ಪು ಮತ್ತು ಹಸಿರು ಶಿಲೀಂಧ್ರ ಸೋಂಕಿಗೆ ಒಳಗಾದವರಾಗಿದ್ದಾರೆ. ಅವರಿಗೆ ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಕಳೆದ ಎಪ್ರಿಲ್‌ನಲ್ಲಿ ಕೋವಿಡ್ ಪೀಡಿತರಾಗಿದ್ದ ಅವರು, ಮೈಸೂರಿನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆದು, ಚೇತರಿಸಿಕೊಂಡಿದ್ದರು. ಕೆಲ ದಿನಗಳ ಹಿಂದೆ ಮುಖದ ಭಾಗದಲ್ಲಿ ಮರಗಟ್ಟುವಿಕೆ, ನೋವು, ಮೂಗು ಸೋರುವಿಕೆ ಸೇರಿದಂತೆ ವಿವಿಧ ಸಮಸ್ಯೆಗಳು ಅವರಿಗೆ ಕಾಣಿಸಿಕೊಂಡಿದ್ದವು. ತಪಾಸಣೆ ನಡೆಸಿದ ವೈದ್ಯರು, ಸಿಟಿ ಮತ್ತು ಎಂಆರ್‌ಐ ಸ್ಕ್ಯಾನ್ ಮೂಲಕ ಸೋಂಕನ್ನು ಪತ್ತೆ ಮಾಡಿದ್ದಾರೆ.

‘ಅವರ ಮೂಗಿನಲ್ಲಿ ಹಸಿರು ಮಿಶ್ರಿತ ಕಂದು ಬಣ್ಣದ ಉಪ್ಪಿನ ಹರಳು ಮಾದರಿಯ ವಸ್ತುಗಳು ಗೋಚರಿಸಿದವು. ಇದು ಸಾಮಾನ್ಯ ಕಪ್ಪು ಶಿಲೀಂಧ್ರ ಪ್ರಕರಣದಂತೆ ಕಾಣಲಿಲ್ಲ. ಹೆಚ್ಚಿನ ವಿಶ್ಲೇಷಣೆ ನಡೆಸಿದಾಗ ಎರಡು ಮಾದರಿಯ ಸೋಂಕಿಗೆ ಒಳಗಾಗಿರುವುದು ದೃಢಪಟ್ಟಿತು. ಹೀಗಾಗಿ, ಎಂಡೋಸ್ಕೋಪಿ ಶಸ್ತ್ರಚಿಕಿತ್ಸೆ ನಡೆಸಿ, ಸೋಂಕು ನಿವಾರಕ ಔಷಧವನ್ನು ನೀಡಲಾಗಿದೆ’ ಎಂದು ಆಸ್ಪತ್ರೆಯ ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ. ಪ್ರಶಾಂತ್ ಆರ್. ರೆಡ್ಡಿ ತಿಳಿಸಿದ್ದಾರೆ.

ವಿಶೇಷ ಅಧಿವೇಶನಕ್ಕೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣದಲ್ಲಿನ ವೈಫಲ್ಯ, ಸರ್ಕಾರದ ವಿರುದ್ಧದ ಭ್ರಷ್ಟಾಚಾರದ ಆರೋಪಗಳು ಮತ್ತು ಕನ್ನಡ, ಕನ್ನಡಿಗರು, ಕರ್ನಾಟಕಕ್ಕೆ ಆಗುತ್ತಿರುವ ಹಿನ್ನಡೆಗಳ ಕುರಿತು ಚರ್ಚಿಸಲು ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಬೇಕು ಎಂದು ಆಗ್ರಹಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ರಾಜ್ಯಪಾಲ ವಜುಭಾಯಿ ವಾಲಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

‘ಕೋವಿಡ್ ಸಂಕಷ್ಟದಲ್ಲಿ ರಾಜ್ಯ ಸರ್ಕಾರ ಜನರಿಗೆ ಸರಿಯಾದ ಆರ್ಥಿಕ ನೆರವಿನ ಪ್ಯಾಕೇಜ್ ನೀಡಿಲ್ಲ. ಪರಿಹಾರ ವಿತರಣೆಯಲ್ಲೂ ತಾರತಮ್ಯ, ಜಿಪುಣತನ ಪ್ರದರ್ಶಿಸಿದೆ. ಈಗ ಕೋವಿಡ್ ಮೂರನೇ ಅಲೆ ಬರುತ್ತಿದೆ. ಈ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು’ ಎಂದು ಆಗ್ರಹಿಸಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯಲ್ಲಿ ₹ 20,000 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಡಳಿತ ಪಕ್ಷದ ಶಾಸಕರೊಬ್ಬರು ಆರೋಪಿಸಿದ್ದಾರೆ. ಶೇಕಡ 10ರಷ್ಟು ಲಂಚ ಪಡೆದ ಆರೋಪ ಮಾಡಿದ್ದಾರೆ. ಅಬಕಾರಿ ಇಲಾಖೆಯ ಅಧಿಕಾರಿಗಳು ಸಚಿವರಿಗಾಗಿ ಪ್ರತಿ ಜಿಲ್ಲೆಯಿಂದ ಹಣ ಸಂಗ್ರಹಿಸುತ್ತಿರುವ ಕುರಿತ ದೂರವಾಣಿ ಕರೆಯ ರೆಕಾರ್ಡಿಂಗ್ ಬಹಿರಂಗವಾಗಿದೆ. ಈ ಬಗ್ಗೆಯೂ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ, ಕನ್ನಡಿಗರು ಮತ್ತು ಕರ್ನಾಟಕವನ್ನು ಕಡೆಗಣಿಸಲಾಗುತ್ತಿದೆ. ಭಾಷಾ ಕಲಿಕೆ, ಉದ್ಯೋಗ, ಶಿಕ್ಷಣ, ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಈ ಕುರಿತು ಅಧಿವೇಶನದಲ್ಲಿ ವಿಶೇಷ ಚರ್ಚೆ ನಡೆಯಬೇಕು ಎಂದು ಕುಮಾರಸ್ವಾಮಿ ಬೇಡಿಕೆ ಇಟ್ಟಿದ್ದಾರೆ.

ಕೇರಳ ಸರ್ಕಾರದ ನಡೆಗೆ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ

ಕನ್ನಡ ಗ್ರಾಮಗಳ ಹೆಸರು ಬದಲಾವಣೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಸರಗೋಡು ಜಿಲ್ಲೆಯ ಮಂಜೇಶ್ವರ ಹಾಗೂ ಅಲ್ಲಿನ ಕೆಲವು ಗ್ರಾಮಗಳ ಕನ್ನಡದ ಹೆಸರುಗಳನ್ನು ಮಲಯಾಳಿ ಭಾಷೆಗೆ ಬದಲಾಯಿಸುವ ಪ್ರಕ್ರಿಯೆಯನ್ನು ಕೇರಳ ಸರ್ಕಾರ ಪ್ರಾರಂಭಿಸಿದೆ ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ದೂರಿದೆ.

ಕೇರಳ ಸರ್ಕಾರ ಮತ್ತು ಅಲ್ಲಿನ ಲೋಕೋಪಯೋಗಿ ಹಾಗೂ ಕಂದಾಯ ಸಚಿವರಿಗೆ ಪತ್ರ ಬರೆದಿರುವ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್, ಗ್ರಾಮಗಳ ಕನ್ನಡದ ಹೆಸರುಗಳನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು ಎಂದು ಆಗ್ರಹಿಸಿದ್ದಾರೆ. ನಾಮಫಲಕ ಬದಲಾಯಿಸುವ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಮನವಿಯನ್ನೂ ಸಲ್ಲಿಸಿದ್ದಾರೆ.


ಡಾ.ಸಿ. ಸೋಮಶೇಖರ ಅವರು ಮನವಿ ಪತ್ರವನ್ನು ರವಿಕುಮಾರ್ ಅವರಿಗೆ ಸಲ್ಲಿಸಿದರು.

‘ಕನ್ನಡ ಭಾಷೆಯನ್ನೇ ಹೆಚ್ಚು ಬಳಸುವಂತಹ ಕಾಸರಗೋಡು ಜಿಲ್ಲೆಯ ಕೆಲವು ಹಳ್ಳಿಗಳ ಹೆಸರನ್ನು ಕೇರಳ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಬದಲಾಯಿಸುವ ಪ್ರಕ್ರಿಯೆ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಕನ್ನಡ ಸಾಂಸ್ಕೃತಿಕ ಪರಂಪರೆಯನ್ನು ಸೂಚಿಸುವ ಹೆಸರುಗಳನ್ನು ಅಲ್ಲಿನ ಕೆಲವು ಗ್ರಾಮಗಳು ಹೊಂದಿವೆ. ಮಲಯಾಳಂ ಭಾಷೆಯ ಹೆಸರುಗಳನ್ನು ಗ್ರಾಮಗಳಿಗೆ ನೀಡುವುದರಿಂದ ಆ ಭಾಗದ ಕನ್ನಡಿಗರ ಪರಂಪರಾಗತ ಭಾವನೆಗಳಿಗೆ ಧಕ್ಕೆಯಾಗುತ್ತದೆ’ ಎಂದು ಪ್ರಾಧಿಕಾರ ತಿಳಿಸಿದೆ.

‘ಇಂತಹ ಬದಲಾವಣೆಗಳನ್ನು ತರಲು ಪ್ರಯತ್ನಿಸುವ ಮುನ್ನ ಆ ಭಾಗದ ಕನ್ನಡಿಗರು ಅಥವಾ ಅಲ್ಲಿನ ನಾಗರಿಕರ ಅಭಿಪ್ರಾಯವನ್ನೂ ಕೇಳಿಲ್ಲ. ಮಧೂರು–ಮಧುರಮ್, ಮಲ್ಲ–ಮಲ್ಲಮ್, ಕಾರಡ್ಕ–ಕಡಗಮ್, ಬೇದಡ್ಕ–ಬೆಡಗಮ್, ಪಿಲಿಕುಂಜೆ–ಪಿಳಿಕುನ್ನು, ಆನೆಬಾಗಿಲು–ಆನೆವಾಗಿಲ್, ಮಂಜೇಶ್ವರ–ಮಂಜೇಶ್ವರಮ್, ಹೊಸದುರ್ಗ–ಪುದಿಯಕೋಟ, ಕುಂಬಳೆ–ಕುಂಬ್ಳಾ, ಸಸಿಹಿತ್ಲು–ಶೈವಲಪ್, ನೆಲ್ಲಿಕುಂಜ–ನೆಲ್ಲಿಕುನ್ನಿ ಎಂದು ಮಲಯಾಳಂ ಭಾಷೆಗೆ ಮಾರ್ಪಾಡು ಮಾಡಲಾಗುತ್ತಿದೆ. ಗ್ರಾಮಗಳ ಹೆಸರುಗಳನ್ನು ಬದಲಾಯಿಸುವ ಬಗ್ಗೆ ಅಲ್ಲಿನ ಕನ್ನಡ ಪರ ಸಂಘ–ಸಂಸ್ಥೆಗಳು ಕೂಡ ಅಸಮಾಧಾನ ವ್ಯಕ್ತಪಡಿಸಿವೆ’ ಎಂದು ಪ್ರಕಟಣೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ತಿಳಿಸಿದ್ದಾರೆ

ವಿಮಾನ ಪ್ರಯಾಣಿಕರ ಸಂಖ್ಯೆ ಗಣನೀಯ ಇಳಿಕೆ

ಬೆಂಗಳೂರು: ಕೋವಿಡ್ ಬಿಕ್ಕಟ್ಟಿನಿಂದಾಗಿ ವಿಮಾನಯಾನ ಉದ್ಯಮವೂ ಸಂಕಷ್ಟಕ್ಕೆ ಸಿಲುಕಿದೆ. ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿರುವ ಕಾರಣ ಆದಾಯಕ್ಕೂ ಪೆಟ್ಟು ಬಿದ್ದಿದೆ.

ಲಾಕ್‌ಡೌನ್ ತೆರವುಗೊಂಡ ಬಳಿಕ ಭಾರತದಲ್ಲಿ 2020ರ ಮೇ25ರಂದು ದೇಶೀಯ ವಿಮಾನ ಹಾರಾಟ ಪುನರಾರಂಭವಾಗಿತ್ತು. ಅಂದಿನಿಂದ ಈವರೆಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿವಿಧೆಡೆಗೆ ಒಟ್ಟು 1.91 ಕೋಟಿ ಮಂದಿ ಪ್ರಯಾಣ ಬೆಳೆಸಿದ್ದಾರೆ. 2019–20ನೇ ಸಾಲಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಇದು ಶೇ 66ರಷ್ಟು ಕಡಿಮೆ.

‘ಪ್ರಸಕ್ತ ಆರ್ಥಿಕ ವರ್ಷ ದೇಶೀಯ ಮಾರ್ಗದಲ್ಲಿ 1.45 ಕೋಟಿ ಮಂದಿ ಸಂಚರಿಸಿದ್ದಾರೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ (2.7 ಕೋಟಿ) ಇದು ಶೇ 63 ರಷ್ಟು ಕ್ಷೀಣಿಸಿದೆ. ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಕೇವಲ 46 ಸಾವಿರ ಮಂದಿ ಪ್ರಯಾಣ ಬೆಳೆಸಿದ್ದಾರೆ. ಹಿಂದಿನ ವರ್ಷಕ್ಕೆ ತುಲನೆ ಮಾಡಿದರೆ ಇದು ಶೇ 90ರಷ್ಟು ಕಡಿಮೆ. ಕೋವಿಡ್‌ನಿಂದಾಗಿ ಎಲ್ಲ ರಾಷ್ಟ್ರಗಳು ವಿಮಾನ ಯಾನದ ಮೇಲೆ ನಿರ್ಬಂಧ ಹೇರಿದ್ದು ಇದಕ್ಕೆ ಕಾರಣ’ ಎಂದು ಪ್ರಕಟಣೆ ತಿಳಿಸಿದೆ.

‘ವಿಮಾನಗಳ ಸಂಚಾರ ಕೂಡ 2.31 ಲಕ್ಷದಿಂದ 1.13 ಲಕ್ಷಕ್ಕೆ ತಗ್ಗಿದೆ. ಸರಕು ಸಾಗಣೆಯು 3.74 ಲಕ್ಷ ಟನ್‌ನಿಂದ 3.26 ಲಕ್ಷ ಟನ್‌ಗೆ ಇಳಿದಿದೆ. ಹೀಗಿದ್ದರೂ ಕೂಡ ಬಿಐಎಎಲ್ ತಾನು ಯೋಜಿಸಿರುವಂತೆ ಮೂಲಸೌಕರ್ಯ ಯೋಜನೆಗಳನ್ನು ಪೂರ್ಣಗೊಳಿಸಲು ಬದ್ಧವಾಗಿದೆ’ ಎಂದೂ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಲಾಕ್‌ಡೌನ್ ನಿರ್ಬಂಧ ಸಡಿಲವಾಗಿದ್ದರೂ ಮಕ್ಕಳನ್ನು ಕರೆದುಕೊಂಡು ಓಡಾಟ ನಡೆಸುವುದು ಸರಿಯಲ್ಲ. ಅನಿವಾರ್ಯವಾಗಿದ್ದರೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ



ಚರ್ಚೆ ದೇವಸ್ಥಾನಗಳ ಅರ್ಚಕ ವೃತ್ತಿಗೆ ಬ್ರಾಹ್ಮಣೇತರರನ್ನು ನೇಮಿಸಬೇಕೇ? 7

'ಆಮ್ಲಜನಕ ತುರ್ತು ಸಂಗ್ರಹಾಗಾರ ಬೇಕು' 9

ವ್ಯಕ್ತಿ ಪೂಜೆ ಮಾಡುವವರು ಬೇಡ: ಡಿಕೆಶಿ 8

ಸೆನ್ಸೆಕ್ಸ್	ನಿಫ್ಟಿ	₹/$
52,925 ▲	15,860 ▲	74.2 ▼

ಶಾಲೆ ಬಿಟ್ಟವರು 56,605, ಮೆಟ್ಟಿಲನ್ನೇ ತುಳಿಯದವರು 14,561

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ (ಬಿಬಿಎಂಪಿ ಹೊರತುಪಡಿಸಿ) ನಡೆದ ಮನೆ ಮನೆ ಸಮೀಕ್ಷೆ ಪ್ರಕಾರ, 6ರಿಂದ 14 ವರ್ಷ ವಯೋಮಾನದ 56,605 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಪೈಕಿ, 14,561 ಮಕ್ಕಳು ಶಾಲೆಯ ಮೆಟ್ಟಿಲನ್ನೇ ತುಳಿದಿಲ್ಲ!

ಗ್ರಾಮೀಣ ಭಾಗಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಮಹಾನಗರಪಾಲಿಕೆಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪೌರಾಡಳಿತ ನಿರ್ದೇಶನಾಲಯ ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯ ಬಹಿರಂಗವಾಗಿದೆ. ಗ್ರಾಮೀಣ ಭಾಗಗಳಲ್ಲಿ ಶೇ 90ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ 75ರಷ್ಟು ಸಮೀಕ್ಷೆ ಪೂರ್ತಿ ಆಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆ ಆರಂಭವೇ ಆಗಿಲ್ಲ.

ಗ್ರಾಮೀಣ ಭಾಗದಲ್ಲಿ 80,35,913 ಕುಟುಂಬಗಳ ಸಮೀಕ್ಷೆ ನಡೆಸಲಾಗಿದ್ದು, 33,329 ಮಕ್ಕಳು ಅರ್ಧದಿಂದಲೇ ಶಾಲೆ ಬಿಟ್ಟಿರುವ ಮಾಹಿತಿ ಸಿಕ್ಕಿದೆ. 9,719 ಮಕ್ಕಳು ಶಾಲೆಗೇ ಸೇರಿಲ್ಲ ಎನ್ನುವುದು ಗೊತ್ತಾಗಿದೆ. ನಗರ ಪ್ರದೇಶಗಳಲ್ಲಿ 25,47,228 ಕುಟುಂಬಗಳ ಸಮೀಕ್ಷೆಯಲ್ಲಿ 8,715 ಮಕ್ಕಳು ಅರ್ಧದಲ್ಲೇ ಶಾಲೆ ಬಿಟ್ಟಿರುವುದು ಮತ್ತು 4,842 ಮಕ್ಕಳು ಶಾಲೆಗೇ ಹೋಗಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ.

ಇ-ಆಡಳಿತ ಇಲಾಖೆ ಅಭಿವೃದ್ಧಿಪಡಿಸಿದ ಮೊಬೈಲ್ ಆ್ಯಪ್ 'ಕರ್ನಾಟಕ ಎಚ್2ಎಚ್ ಮಕ್ಕಳ ಸರ್ವರ್ ಆ್ಯಪ್' ಮೂಲಕ ಪಡಿತರ ಚೀಟಿ ಆಧರಿಸಿ ಮತ್ತು ಹೊಸ ಕುಟುಂಬಗಳನ್ನು ಗುರುತಿಸಿ ಸಮೀಕ್ಷೆ ನಡೆಸಲಾಗಿದೆ.

ಕುಟುಂಬದ ಆರ್ಥಿಕ ಪರಿಸ್ಥಿತಿ, ಆರೋಗ್ಯ ಸಮಸ್ಯೆ ಹಾಗೂ ವೈಯಕ್ತಿಕ ಕಾರಣಗಳಿಂದ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಸಮೀಕ್ಷೆಯಲ್ಲಿ ಬಹಿರಂಗವಾಗಿದೆ.

ಶೇ 75ರಷ್ಟು ಪೂರ್ಣ: ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ನಿಯಮ 6ರ ಪ್ರಕಾರ ಸ್ಥಳೀಯ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ 0–14 ವಯಸ್ಸಿನ ಮಕ್ಕಳ ದಾಖಲೆಯನ್ನು ನಿರ್ವಹಿಸಬೇಕು. 2013ರಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ, ಕಳೆದ ವರ್ಷ (2020) ಏಪ್ರಿಲ್ 30ರೊಳಗೆ ಸಮೀಕ್ಷೆ ಪೂರ್ಣಗೊಳಿಸುವಂತೆ ಹೈಕೋರ್ಟ್ ಪೀಠ ಆದೇಶ ನೀಡಿತ್ತು.

ಅದರಂತೆ, ಪೌರಾಡಳಿತ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ (ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) 2020–21ನೇ ಸಾಲಿನಲ್ಲಿ ಶಾಲೆ ಬಿಟ್ಟ ಮತ್ತು ಶಾಲೆಗೆ ಸೇರದ ಮಕ್ಕಳನ್ನು ಗುರುತಿಸಿ ಶಾಲೆಗೆ ಹಾಜರಾಗಲು ನಗರ ಸ್ಥಳೀಯ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ 2020ರ ಫೆ. 24ರಂದೇ ಸುತ್ತೋಲೆ ಹೊರಡಿಸಲಾಗಿತ್ತು. ಅಲ್ಲದೆ, 2020ರ ಮೇ 31ರ ಒಳಗೇ ಈ ಕಾರ್ಯ ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಆದರೆ, ಕೋವಿಡ್ ಕಾರಣದಿಂದ ವೇಳಾಪಟ್ಟಿಯಂತೆ ಸಮೀಕ್ಷೆ ನಡೆಸಲು ಸಾಧ್ಯವಾಗಿಲ್ಲ ಎಂದು ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

ಹೀಗಾಗಿ, ಸಮೀಕ್ಷೆ ನಡೆಸುವಂತೆ 2020ರ ಡಿ. 14ರಂದು ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದೆ. ಅದರಂತೆ, ಡಿ. 21ರಿಂದ 2021ರ ಜ. 20ರ ಒಳಗೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಹಾಗೂ ಫೆ. 14ರ ಒಳಗೆ 10 ಮಹಾನಗರಪಾಲಿಕೆಗಳ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಬೇಕು ಎಂದು ಸೂಚಿಸಲಾಗಿತ್ತು. ಆದರೆ, ಮತ್ತೆ ಕೋವಿಡ್ ಹೆಚ್ಚಿದ್ದರಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷೆ ಇನ್ನೂ ಪ್ರಗತಿಯಲ್ಲಿದೆ ಎಂದೂ ಮೂಲಗಳು ತಿಳಿಸಿವೆ.

'ಶಾಲೆಯಿಂದ ಹೊರಗುಳಿದ ಮಕ್ಕಳನ್ನು ನಗರ ಸ್ಥಳೀಯ ಸಂಸ್ಥೆಗಳು ಗುರುತಿಸಿ ಶಿಕ್ಷಣ ಇಲಾಖೆಯ ಗಮನಕ್ಕೆ ತರಬೇಕು. ಶಿಕ್ಷಣ ಇಲಾಖೆಯವರು ಮಕ್ಕಳನ್ನು ಮನವೊಲಿಸಿ ಶಾಲೆಗೆ ಸೇರಿಸಬೇಕು' ಎಂದೂ ಮೂಲಗಳು ಹೇಳಿವೆ.

0–18 ವಯೋಮಾನದ ಮಕ್ಕಳ ಸಮೀಕ್ಷೆ

'ಶಾಲೆಯಿಂದ ಹೊರಗುಳಿದ ಮಕ್ಕಳ (6ರಿಂದ 14 ವಯೋಮಾನ) ಮಾಹಿತಿ ಮಾತ್ರ ಸಂಗ್ರಹಿಸಲು ಮನೆ ಮನೆ ಸಮೀಕ್ಷೆಗೆ ಸುತ್ತೋಲೆ ಹೊರಡಿಸಲಾಗಿತ್ತು. ಆದರೆ, ಇದೀಗ 0–18ರ ವರೆಗಿನ ವಯೋಮಾನದ ಮಕ್ಕಳ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ.ಈ ಸಮೀಕ್ಷೆಗೆ ಪೂರಕ ಆಗುವಂತೆ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಅದರಲ್ಲಿ ಪಡಿತರ ಚೀಟಿ ಹೊಂದಿದ ಮತ್ತು ಹೊಂದಿಲ್ಲದ ಕುಟುಂಬಗಳ ಸಮೀಕ್ಷೆಗೂ ಅವಕಾಶ ನೀಡಲಾಗಿದೆ. ಅದರಂತೆ, ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷ ನಡೆಸಲಾಗಿದೆ' ಎಂದು ಪೌರಾಡಳಿತ ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

ತಣ್ಣಗಾಗಿದ್ದ ಬಿಜೆಪಿ ತುಮುಲ: ಯೋಗೇಶ್ವರ್ ಸೃಷ್ಟಿಸಿದ ಗೊಂದಲ

ಸಿ.ಎಂ ಬದಲು: ಮತ್ತೆ ಹುಯಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿ ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ 'ಫರ್ಮಾನು' ಹೊರಡಿಸಿ ನವದೆಹಲಿಗೆ ತೆರಳಿದ ಮೇಲೆ ಮೇಲ್ನೋಟಕ್ಕೆ ತಣ್ಣಗಾದಂತಿದ್ದ ನಾಯಕತ್ವ ಬದಲಾವಣೆಯ ವಿಷಯ ಶುಕ್ರವಾರ ಮತ್ತೆ ಮುನ್ನೆಲೆಗೆ ಬಂದಿದೆ.




ಯಡಿಯೂರಪ್ಪ

ಯಡಿಯೂರಪ್ಪ ಅವರನ್ನು ಕುರ್ಚಿಯಿಂದ ಇಳಿಸಲು ಮೇಲಿಂದ ಮೇಲೆ ಪಟ್ಟುಗಳನ್ನು ಹಾಕುವವರ ಗುಂಪಿನ ಪ್ರಮುಖ ಪಾತ್ರಧಾರಿಯಾಗಿರುವ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್, ಕೆಲವು ದಿನಗಳಿಂದ ಮೌನಕ್ಕೆ ಶರಣಾಗಿದ್ದರು. ಅರುಣ್ ಸಿಂಗ್ ರಾಜ್ಯಕ್ಕೆ ಬಂದು ಅಹವಾಲು ಆಲಿಸಿದಾಗಲೂ ಯೋಗೇಶ್ವರ್ ಮಾತನಾಡಿರಲಿಲ್ಲ. ವರಿಷ್ಠರ ಸ್ಪಷ್ಟ ಸೂಚನೆಯೇ ಇದಕ್ಕೆ ಕಾರಣ ಎಂದೂ ಹೇಳಲಾಗಿತ್ತು.

ನಾಯಕತ್ವ ಬದಲಾವಣೆ ಬಿಜೆಪಿಯಲ್ಲಿ ನನೆಗುದಿಗೆ ಬಿದ್ದಿದೆ ಎಂದು ಜನ ಭಾವಿಸಿಕೊಂಡಿರುವ ಹೊತ್ತಿನಲ್ಲೇ ಯೋಗೇಶ್ವರ್ ಮತ್ತೆ ಸ್ಫೋಟಕ ಮಾತುಗಳನ್ನು ಆಡಿದ್ದಾರೆ. 'ಮುಖ್ಯಮಂತ್ರಿ ಬದಲಾವಣೆಯ ಪರೀಕ್ಷೆ ಬರೆದಿದ್ದೇವೆ. ಶೀಘ್ರವೇ ಫಲಿತಾಂಶ ಬರಲಿದೆ' ಎಂದು ಅವರು ಹೇಳಿರುವುದು ಮತ್ತೊಂದು ಸುತ್ತಿನ ರಾಜಕೀಯ ಚರ್ಚೆಗೆ ಕಾರಣವಾಗಿದೆ.

9ನೇ ಪುಟ ನೋಡಿ

'ಮುಖ್ಯಮಂತ್ರಿ ಬದಲಾವಣೆಯ ಪರೀಕ್ಷೆ: ಶೀಘ್ರ ಫಲಿತಾಂಶ'



'ಮುಖ್ಯಮಂತ್ರಿ ಬದಲಾವಣೆ ಸಂಬಂಧಿಸಿದಂತೆ ನಾವೆಲ್ಲ ಪರೀಕ್ಷೆ ಬರೆದಿದ್ದೇವೆ. ಅತೀ ಶೀಘ್ರದಲ್ಲಿ ಫಲಿತಾಂಶ ಹೊರಬೀಳುತ್ತದೆ' ಎಂದು ಸಿ.ಪಿ. ಯೋಗೇಶ್ವರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ವೈಯಕ್ತಿಕ ಸಮಸ್ಯೆಗಳು, ಸರ್ಕಾರ ಮತ್ತು ಪಕ್ಷದ ಮೂಲಭೂತ ಸಮಸ್ಯೆಗಳ ಬಗ್ಗೆ ವರಿಷ್ಠರಿಗೆ ವಿವರಿಸಿದ್ದೇನೆ' ಎಂದು ಹೇಳಿದರು. 'ಸರ್ಕಾರ ಹಾಗೂ ಪಕ್ಷದ ಮೂಲಭೂತ ಸಮಸ್ಯೆಗಳ ವಿಚಾರವನ್ನು ನಾನು ಮಾಧ್ಯಮಗಳ ಮುಂದೆ ಹಂಚಿಕೊಳ್ಳಲು ಸಾಧ್ಯವಿಲ್ಲ. ಪರೀಕ್ಷೆ ಬರೆದಿದ್ದೇನೆ, ಅತಿ ಶೀಘ್ರವೇ ಫಲಿತಾಂಶ ಹೊರಬೀಳುತ್ತದೆ' ಎಂದು ಅವರು ಮಾರ್ಮಿಕವಾಗಿ ನುಡಿದರು.

9ನೇ ಪುಟ ನೋಡಿ

'ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವೆ'



ಬೆಳಗಾವಿ/ಮೈಸೂರು: 'ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದು ನಿಜ' ಎಂದಿರುವ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ, 'ಸರ್ಕಾರ ತೆಗೆದು ಇನ್ನೊಂದು ಸರ್ಕಾರ ಮಾಡುವಷ್ಟು ಶಕ್ತಿಯನ್ನು ದೇವರು ಕೊಟ್ಟಿದ್ದಾನೆ. ಮತ್ತೊಬ್ಬರನ್ನು ಮಂತ್ರಿ ಮಾಡುವ ತಾಕತ್ತಿದೆ' ಎಂದು ಅರ್ಭಟಿಸಿದ್ದಾರೆ.

ಶುಕ್ರವಾರ ಮೈಸೂರಿನಲ್ಲಿ ಸುತ್ತೂರು ಶ್ರೀಗಳನ್ನು ಭೇಟಿಯಾಗಿ ಬೆಳಗಾವಿ ಮರಳಿದ ಬಳಿಕ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

9ನೇ ಪುಟ ನೋಡಿ

ಯಾರು ಏನೇ ಹೇಳಿಕೆಗಳನ್ನು ನೀಡಿದರೂ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಆ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ವಿಜಯೇಂದ್ರ ದೆಹಲಿ ಭೇಟಿಯ ಗುಟ್ಟು?

ಯಡಿಯೂರಪ್ಪ ಮಗ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತನ್ನ ಅಣ್ಣ, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಜತೆ ನವದೆಹಲಿಗೆ ಹೋಗಿರುವುದರ ಹಿಂದಿನ ಗುಟ್ಟುಗಳ ಬಗ್ಗೆ ಪಕ್ಷದ ವಲಯದಲ್ಲಿ ಗಂಭೀರ ಚರ್ಚೆಗಳು ಶುರುವಾಗಿವೆ.

'ಈ ವಿಧಾನಸಭೆ ಅವಧಿ ಪೂರ್ಣಗೊಳಿಸುವವರೆಗೆ ಮುಂದುವರಿಯಲು ಯಡಿಯೂರಪ್ಪ ಅವರಿಗೆ ಅವಕಾಶ ಕೊಡಬೇಕು ಎಂದು ವರಿಷ್ಠರಿಗೆ ಮನವರಿಕೆ ಮಾಡಿಕೊಡಲು ಮಕ್ಕಳಿಬ್ಬರು ದೆಹಲಿಗೆ ಹೋಗಿದ್ದರು' ಎಂದೂ ಹೇಳಲಾಗುತ್ತಿದೆ.

9ನೇ ಪುಟ ನೋಡಿ

'ಬಿಜೆಪಿ ಸೇರಲು ₹10 ಲಕ್ಷ ಮುಂಗಡ ಪಾವತಿ'

ಸಿ.ಎಂ ರಾಜಕೀಯ ಕಾರ್ಯದರ್ಶಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಹಾಸನ: 'ಜೆಡಿಎಸ್ ತೊರೆದು ಬಿಜೆಪಿ ಸೇರುವಂತೆ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎನ್.ಆರ್.ಸಂತೋಷ್ ನನಗೆ ₹25 ಲಕ್ಷ ಆಮಿಷವೊಡ್ಡಿ, ಮುಂಗಡವಾಗಿ ₹10 ಲಕ್ಷ ನಗದು ನೀಡಿದ್ದಾರೆ' ಎಂದು ಅರಸೀಕೆರೆ ನಗರಸಭೆ ಎರಡನೇ ವಾರ್ಡ್ ಸದಸ್ಯೆ ಕಲ್ಯೆ ಅರಸಿ ಆರೋಪಿಸಿದ್ದಾರೆ.



ಹತ್ತು ಲಕ್ಷ ರೂಪಾಯಿ ಬಂಡಲ್ ಜತೆ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅರಸೀಕೆರೆ ನಗರಸಭೆ ಸದಸ್ಯೆ ಕಲ್ಯೆ ಅರಸಿ. ಶಾಸಕರಾದ ಎಚ್.ಡಿ.ರೇವಣ್ಣ, ಕೆ.ಎಂ. ಶಿವಲಿಂಗೇಗೌಡ ಇದ್ದಾರೆ

₹10 ಲಕ್ಷ ಬಂಡಲ್‌ನೊಂದಿಗೆ ಶಾಸಕರಾದ ಎಚ್.ಡಿ.ರೇವಣ್ಣ, ಕೆ.ಎಂ. ಶಿವಲಿಂಗೇಗೌಡ ಜತೆ ಶುಕ್ರವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಸೇರುವಂತೆ ಒಂದು ವಾರದಿಂದ ಒತ್ತಡ ಇತ್ತು. ಗುರುವಾರ ರಾತ್ರಿ 10 ಗಂಟೆಗೆ ಮನೆಗೆ ಬಂದ ಸಂತೋಷ್ ಅವರ ಆಪ್ತ ಸಯ್ಯದ್ ಸಿಕಂದರ್ ₹10 ಲಕ್ಷ ನೀಡಿ, ಸಂತೋಷ್ ಅವರಿಗೆ ಕರೆ ಮಾಡಿಕೊಟ್ಟರು. 'ಸರ್ಕಾರ ನಮ್ಮ ಕೈಯಲಿದೆ. ಏನು ಬೇಕಾದರೂ ಮಾಡಬಹುದು. ಮುಂಗಡವಾಗಿ ₹10 ಲಕ್ಷ ತಲುಪಿಸಿದ್ದೇನೆ. ಉಳಿದ ಹಣವನ್ನು ನಂತರ ನೀಡಲಾಗುವುದು. ಬಿಜೆಪಿ ಸೇರಲೇಬೇಕು' ಎಂಬುದಾಗಿ ಬೆದರಿಕೆ ಹಾಕಿದರು. ಹಣ ವಾಪಸ್ ತೆಗೆದುಕೊಂಡು ಹೋಗುವಂತೆ ಹೇಳಿದರೂ ಕೇಳಲಿಲ್ಲ' ಎಂದಿದ್ದಾರೆ.

ರೇವಣ್ಣ ಮಾತನಾಡಿ, 'ಹಣ ಕೊಟ್ಟು ಸದಸ್ಯರನ್ನು ಸಂತೋಷ್ ಖರೀದಿಸುತ್ತಿದ್ದಾರೆ. ಹಣ ಬೇಡವೆಂದರೂ ಇಟ್ಟು ಹೋಗಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ಆಗಬೇಕು' ಎಂದು ಆಗ್ರಹಿಸಿದ್ದಾರೆ.

ಶಿವಲಿಂಗೇಗೌಡ ಮಾತನಾಡಿ, 'ಕನ್ನಡ ಓದಲು ಬಾರದ ಸದಸ್ಯೆ ಕಲ್ಯೆ ಅರಸಿ ಅವರಿಂದ ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ರಾಜೀನಾಮೆ ನೀಡುವ ಪತ್ರಕ್ಕೆ ಸಹಿ ಹಾಕಿಸಿಕೊಂಡು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದಾರೆ. ನಗರಸಭೆಯಲ್ಲಿ ಬಹುಮತಕ್ಕಾಗಿ ಸಂತೋಷ್ ವಾಮಮಾರ್ಗದ ರಾಜಕೀಯ ಮಾಡುತ್ತಿದ್ದಾರೆ' ಎಂದು ಕಿಡಿಕಾರಿದ್ದಾರೆ.

31 ಸದಸ್ಯ ಬಲದ ನಗರಸಭೆಯಲ್ಲಿ ಜೆಡಿಎಸ್ 21, ಬಿಜೆಪಿ 6, ಕಾಂಗ್ರೆಸ್ 1 ಹಾಗೂ ಮೂವರು ಪಕ್ಷೇತರರು ಇದ್ದಾರೆ. ಜೆಡಿಎಸ್‌ಗೆ ಬಹುಮತ ಇದ್ದರೂ ಮೀಸಲಾತಿ ಬಲದಿಂದ ಬಿಜೆಪಿ ಅಧ್ಯಕ್ಷ ಸ್ಥಾನ ಪಡೆದಿದೆ. ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದ್ದು, ಜುಲೈ 7ಕ್ಕೆ ವಿಚಾರಣೆ ಇದೆ. ಮೂರು ದಿನಗಳ ಹಿಂದೆಯಷ್ಟೇ ಜೆಡಿಎಸ್‌ನ ಆರು ಸದಸ್ಯರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿ, ತಮಗೆ ಪ್ರತ್ಯೇಕ ಆಸನ ಮೀಸಲಿರಿಸುವಂತೆ ಕೋರಿ ಜಿಲ್ಲಾಧಿಕಾರಿ ಆರ್.ಗಿರೀಶ್ ಅವರಿಗೆ ಮನವಿ ಸಲ್ಲಿಸಿದ್ದರು.

'ಮಾನನಷ್ಟ ಮೊಕದ್ದಮೆ ಹೂಡುವೆ'



'ಅರಸೀಕೆರೆ ಜೇನುಕಲ್ಲು ಸಿದ್ದೇಶ್ವರನ ಮೇಲೆ ಆಣೆ ಮಾಡಿ ಹೇಳುವೆ, ಸದಸ್ಯೆ ಕಲ್ಯೆ ಅರಸಿ ಅವರಿಗೆ ನೀಡಿರುವ ₹ 10 ಲಕ್ಷಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ನನ್ನ ಬಗ್ಗೆ ಜನರಿಂದ ಒಳ್ಳೆಯ ಅಭಿಪ್ರಾಯ ಬರುತ್ತಿರುವುದನ್ನು ಸಹಿಸದೆ ಶಾಸಕ ಶಿವಲಿಂಗೇಗೌಡ ಈ ರೀತಿ ಆರೋಪ ಮಾಡುತ್ತಿದ್ದಾರೆ. ರೇವಣ್ಣ ಅವರಿಗೂ ದಾರಿ ತಪ್ಪಿಸಿದ್ದಾರೆ. ನನ್ನ ಮೇಲಿನ ಆರೋಪಕ್ಕೆ ಸಾಕ್ಷ್ಯ ಎಲ್ಲಿದೆ? ನನ್ನ ವಿರುದ್ಧ ಆರೋಪ ಮಾಡಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ' ಎಂದು ಎನ್.ಆರ್.ಸಂತೋಷ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಚಿವ ರವಿಶಂಕರ ಪ್ರಸಾದ್ ಟ್ವಿಟರ್ ಖಾತೆ 1 ಗಂಟೆ ಸ್ಥಗಿತ

ನವದೆಹಲಿ (ಪಿಟಿಐ/ರಾಯಿಟರ್ಸ್): ಕೇಂದ್ರದ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ ಪ್ರಸಾದ್ ಅವರ ಟ್ವಿಟರ್ ಖಾತೆಯನ್ನು ಅಮೆರಿಕದ ಡಿಜಿಟಲ್ ಮಿಲೇನಿಯಂ ಹಕ್ಕುಸ್ವಾಮ್ಯ ಕಾಯ್ದೆಯ (ಡಿಎಂಸಿಎ) ಉಲ್ಲಂಘನೆ ಆರೋಪದಲ್ಲಿ ಟ್ವಿಟರ್ ಸಂಸ್ಥೆಯು ಶುಕ್ರವಾರ ಒಂದು ಗಂಟೆ ಸ್ಥಗಿತಗೊಳಿಸಿತ್ತು.



ರವಿಶಂಕರ ಪ್ರಸಾದ್

ಟ್ವಿಟರ್‌ನ ಈ ಕ್ರಮಕ್ಕೆ ಸಚಿವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಂಸ್ಥೆಗೆ ಎಚ್ಚರಿಕೆ ನೀಡಿದ ನಂತರ ಅವರ ಖಾತೆಯನ್ನು ಬಳಕೆಗೆ ಮುಕ್ತಗೊಳಿಸಲಾಗಿದೆ. ಆದರೆ, ಪ್ರಸಾದ್ ಅವರ ಯಾವ ಪೋಸ್ಟ್ ಡಿಎಂಸಿಎ ಕಾಯ್ದೆಯನ್ನು ಉಲ್ಲಂಘಿಸಿದೆ ಎಂಬ ಬಗ್ಗೆ ಟ್ವಿಟರ್ ಇನ್ನೂ ಮಾಹಿತಿ ನೀಡಿಲ್ಲ.

ಕೇಂದ್ರ ರೂಪಿಸಿರುವ ಹೊಸ ಐಟಿ ನಿಯಮಗಳಿಗೆ ಸಂಬಂಧಿಸಿದಂತೆ ಟ್ವಿಟರ್ ಹಾಗೂ ಕೇಂದ್ರ ಸರ್ಕಾರದ ಮಧ್ಯೆ ಸಂಘರ್ಷ ಇರುವಾಗಲೇ ಈ ಬೆಳವಣಿಗೆ ನಡೆದಿರುವುದರಿಂದ ಇದಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ಟ್ವಿಟರ್ ಸಂಸ್ಥೆಯು ತನ್ನ ಖಾತೆಯನ್ನು ತಡೆಹಿಡಿದ ಕೂಡಲೇ ಇನ್ನೊಂದು ಸಾಮಾಜಿಕ ತಾಣ 'ಕೂ' ಮೊರೆಹೋದ ಸಚಿವರು, ಅಲ್ಲಿ ಟ್ವಿಟರ್ ವಿರುದ್ಧ ಸರಣಿ ಹೇಳಿಕೆಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸ್ನೇಹಿತರೇ, ಇಂದು ವಿಚಿತ್ರವಾದ ಘಟನೆಯೊಂದು ನಡೆದಿದೆ. ಡಿಎಂಸಿಎ ಕಾಯ್ದೆ ಉಲ್ಲಂಘನೆಯ ಆರೋಪದ ಮೇಲೆ ಟ್ವಿಟರ್ ಸಂಸ್ಥೆಯು ಒಂದು ಗಂಟೆ ನನ್ನ ಖಾತೆಗೆ ಪ್ರವೇಶ ನಿರಾಕರಿಸಿದೆ. ಯಾವುದೇ ಮುನ್ಸೂಚನೆ ನೀಡದೆ ನನ್ನ ಖಾತೆಯನ್ನು ತಡೆಹಿಡಿಯುವ ಮೂಲಕ ಸಂಸ್ಥೆಯು ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಉಲ್ಲಂಘಿಸಿದೆ' ಎಂದಿದ್ದಾರೆ.

'ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕ ಎಂದು ಟ್ವಿಟರ್ ಸಂಸ್ಥೆ ಹೇಳುತ್ತಿದೆ. ಆದರೆ ಅದು ತನ್ನ ಕಾರ್ಯಸೂಚಿ ಜಾರಿಗಷ್ಟೇ ಉತ್ಸುಕವಾಗಿದೆ ಎಂಬುದು ಈ ಕ್ರಮದಿಂದ ಸ್ಪಷ್ಟವಾಗುತ್ತದೆ. ನಿಯಮ ಪಾಲಿಸದಿದ್ದರೆ ಏಕಪಕ್ಷೀಯವಾಗಿ ತಮ್ಮನ್ನು ತೆಗೆದುಹಾಕಬಹುದೆಂಬ ಭೀತಿಯನ್ನು ಬಳಕೆದಾರರಲ್ಲಿ ಮೂಡಿಸುತ್ತಿದೆ' ಎಂದು ಪ್ರಸಾದ್ ಆರೋಪಿಸಿದ್ದಾರೆ.

'ಸಾಮಾಜಿಕ ಜಾಲತಾಣಗಳ ಏಕಪಕ್ಷೀಯ ಕ್ರಮಗಳನ್ನು ಟೀಕಿಸಿ ಸುದ್ದಿ ವಾಹಿನಿಗಳಿಗೆ ನೀಡಿರುವ ಸಂದರ್ಶನದ ತುಣುಕುಗಳನ್ನು ಈ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರಿಂದ ಟ್ವಿಟರ್ ಸಂಸ್ಥೆಗೆ ತನ್ನ ರೆಕ್ಕೆಗಳನ್ನು ಕತ್ತರಿಸಿದ ಅನುಭವ ಆಗಿರುವಂತಿದೆ' ಎಂದು ಅವರು ಹೇಳಿದ್ದಾರೆ.

ನನ್ನ ಖಾತೆಯನ್ನೂ ಹೀಗೆಯೇ ಸ್ಥಗಿತಗೊಳಿಸಲಾಗಿತ್ತು, ಯಾವ ಆಧಾರದಲ್ಲಿ ಈ ಕ್ರಮ ಕೈಗೊಂಡಿದ್ದಾರೆ ಎಂದು ಟ್ವಿಟರ್ ಇಂಡಿಯಾ ಸಂಸ್ಥೆಯಿಂದ ಸ್ಪಷ್ಟನೆ ಕೇಳಲಾಗುವುದು

ಶಶಿ ತರೂರ್, ಸಂಸತ್ತಿನ ಮಾಹಿತಿ ತಂತ್ರಜ್ಞಾನ ಸ್ಥಾಯಿ ಸಮಿತಿಯ ಅಧ್ಯಕ್ಷ

ಸಚಿವರ ಖಾತೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಹಕ್ಕುಸ್ವಾಮ್ಯ ಮಾಲೀಕರು ನೀಡಿದ ನೋಟಿಸ್ ಅನ್ವಯ ಟ್ವಿಟರ್‌ನ ಹಕ್ಕುಸ್ವಾಮ್ಯ ನಿಯಮ ಅನುಸಾರ ಈ ಕ್ರಮ ಕೈಗೊಳ್ಳಲಾಗಿದೆ

ಟ್ವಿಟರ್ ವಕ್ತಾರ

ಒಳ ಪುಟಗಳಲ್ಲಿ

27ರ ಬಳಿಕ ಹೆಚ್ಚು ಮಳೆ ಸಾಧ್ಯತೆ 4

ಪಿನಾಕಾ ರಾಕೆಟ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿ 9



ಶೂಟಿಂಗ್: ಭಾರತದ ಮಹಿಳೆಯರಿಗೆ ಕಂಚು 10

ರಾಜ್ಯ ಕೋವಿಡ್ ಅಂಕಿ–ಅಂಶ

28,26,754 ▲ ಒಟ್ಟು ಸೋಂಕಿತರು (28,23,444 ನಿನ್ನೆಯ ವಿವರ)

1,07,195 ▼ ಸಕ್ರಿಯ ಪ್ರಕರಣಗಳು

26,84,997 ▲ ಗುಣಮುಖರಾದವರು

34,539 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	3,310	▼
ಗುಣಮುಖ	6,524	▼
ಸಾವು	114	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಆರೋಗ್ಯ ಇಲಾಖೆ ಸಲಹೆ ಆಧರಿಸಿ ಶಾಲೆ ಆರಂಭ' 4

ಕಲ್ಯಾಣ ಮಂಟಪದಲ್ಲಿ ಮದುವೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 40 ಜನರಿಗೆ ಮಿತಿಗೊಳಿಸಿ ರಾಜ್ಯದಾದ್ಯಂತ ಕಲ್ಯಾಣ ಮಂಟಪ, ಹೋಟೆಲ್ ಸಭಾಂಗಣ ಮತ್ತು ರೆಸಾರ್ಟ್‌ಗಳಲ್ಲಿ ಮದುವೆ ಸಮಾರಂಭಗಳನ್ನು ನಡೆಸಲು ಸೋಮವಾರದಿಂದ ಅನುಮತಿ ನೀಡಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಲಾಗಿದೆ.

ರೂಪಾಂತರಿ ಡೆಲ್ಟಾ ಕೊರೊನಾ ವೈರಾಣು ನಿಯಂತ್ರಣ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಶುಕ್ರವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಆದೇಶ ಹೊರಡಿಸಲಾಗಿದೆ. ಪಾಸ್ ಹೊಂದಿರುವವರು ಮಾತ್ರ ಮದುವೆಯಲ್ಲಿ ಭಾಗವಹಿಸಬೇಕು. ಮದುವೆ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲರೂ ಕಡ್ಡಾಯವಾಗಿ ಕೋವಿಡ್ ಮಾರ್ಗಸೂಚಿ ಪಾಲಿಸಬೇಕು ಎದು ಆದೇಶದಲ್ಲಿ ತಿಳಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜಂಟಿ ಆಯುಕ್ತರು ಮತ್ತು ಇತರ ಪ್ರದೇಶಗಳಲ್ಲಿ ಆಯಾ ತಾಲ್ಲೂಕಿನ ತಹಶೀಲ್ದಾರ್‌ಗಳಿಂದ ಅನುಮತಿ ಪಡೆದು ಮದುವೆ ಸಮಾರಂಭಗಳನ್ನು ನಡೆಸಬಹುದು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅರ್ಜಿ ಸಲ್ಲಿಸುವವರ ಆದಾಯ ಮಿತಿ ₹3 ಲಕ್ಷಕ್ಕೆ ಏರಿಕೆ: ಸಚಿವ ಸೋಮಣ್ಣ

ಲಕ್ಷ ಮನೆ ಯೋಜನೆ: ಹಿಂದಿನ ಅರ್ಜಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಬೆಂಗಳೂರು ನಗರದಲ್ಲಿ ನಿರ್ಮಿಸುತ್ತಿರುವ ಒಂದು ಲಕ್ಷ ಬಹುಮಹಡಿ ಮನೆ ನಿರ್ಮಾಣ ಯೋಜನೆಯಡಿ ಈ ಹಿಂದೆ ಸ್ವೀಕರಿಸಿದ್ದ ಎಲ್ಲ ಅರ್ಜಿಗಳನ್ನು ರದ್ದುಪಡಿಸಲಾಗಿದೆ. ಬುಧವಾರದಿಂದ ಹೊಸದಾಗಿ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.



ವಿ.ಸೋಮಣ್ಣ

ಒಂದು ಲಕ್ಷ ಬಹುಮಹಡಿ ಮನೆಗಳ ನಿರ್ಮಾಣ ಯೋಜನೆ ಕುರಿತು ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೆ ಭೂಸ್ವಾಧೀನ ಸೇರಿದಂತೆ ಯಾವುದೇ ಪ್ರಕ್ರಿಯೆ ನಡೆಸದೆ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಅವುಗಳನ್ನು ರದ್ದುಮಾಡಲು ನಿರ್ಧರಿಸಲಾಗಿದೆ.ಹಿಂದೆ ಅರ್ಜಿ ಸಲ್ಲಿಸಿದ್ದವರೂ ಈಗ ಹೊಸದಾಗಿ ಅರ್ಜಿ ಸಲ್ಲಿಸಬಹುದು' ಎಂದರು.

ವಾರ್ಷಿಕ ₹ 83,000ದೊಳಗೆ ಆದಾಯ ಹೊಂದಿದ ಕುಟುಂಬದವರು ಮಾತ್ರ ಅರ್ಜಿ ಸಲ್ಲಿಸಬಹುದು ಎಂಬ ಮಿತಿ ಇತ್ತು. ಈಗ ಅದನ್ನು ₹ 3 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೀಮಿತವಾಗಿದ್ದ ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಗೆ ವಿಸ್ತರಿಸಲಾಗಿದೆ ಎಂದು ತಿಳಿಸಿದರು.

ಈ ಯೋಜನೆಗಾಗಿ 515 ಎಕರೆ ಜಮೀನು ಸ್ವಾಧೀನಕ್ಕೆ ಪಡೆಯಲಾಗಿದೆ. ಮೊದಲ ಹಂತದಲ್ಲಿ 46,998 ಮನೆಗಳನಿರ್ಮಾಣಕ್ಕೆಕಾರ್ಯಾದೇಶನೀಡಲಾಗಿದೆ. 42,361 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಆಗಸ್ಟ್ 15ರಂದು 5,000 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು ಎಂದರು.

2022ರ ವೇಳೆಗೆ ಈ ಯೋಜನೆಯಡಿ 80,000 ಮನೆಗಳನ್ನು ಹಂಚಿಕೆ ಮಾಡುವ ಗುರಿ ಇದೆ. ಅತ್ಯಂತ ಪಾರದರ್ಶಕವಾಗಿ ಎಲ್ಲ ಪ್ರಕ್ರಿಯೆಗಳನ್ನೂ ನಡೆಸಲಾಗುವುದು ಎಂದು ಸೋಮಣ್ಣ ತಿಳಿಸಿದರು.

ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಬಸವರಾಜ್ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ದಿಢೀರ್ ಬದಲಾವಣೆ

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮುಖ್ಯಮಂತ್ರಿಯವರ ಲಕ್ಷ ಮನೆ ಯೋಜನೆ ಘೋಷಿಸಲಾಗಿತ್ತು. 2017ರಲ್ಲಿ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಆಗ ವಸತಿ ಸಚಿವರಾಗಿದ್ದ ಎಂ. ಕೃಷ್ಣಪ್ಪ (ವಿಜಯನಗರ), ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊತ್ತಿದ್ದರು.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೂ ಯೋಜನೆ ಮುಂದುವರಿದಿತ್ತು. ಆಗ, 48,614 ಫಲಾನುಭವಿಗಳಿಗೆ ಆಯ್ಕೆಪತ್ರವನ್ನು ವಿತರಿಸಲಾಗಿತ್ತು. ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವೂ ಯೋಜನೆ ಮುಂದುವರಿಸಿತ್ತು. ಪ್ರಧಾನಮಂತ್ರಿ ಆವಾಸ್ ಮತ್ತು ಮುಖ್ಯಮಂತ್ರಿಯವರ ಲಕ್ಷ ಮನೆ ಯೋಜನೆಗಳನ್ನು ಒಟ್ಟಾಗಿ ಅನುಷ್ಠಾನಕ್ಕೆ ತರುವ ನಿರ್ಧಾರ ಮಾಡಲಾಗಿತ್ತು.

'ಮುಖ್ಯಮಂತ್ರಿಯವರ ಲಕ್ಷ ಮನೆ ಯೋಜನೆಯಡಿ 2021ರ ಜೂನ್ ಅಂತ್ಯದೊಳಗೆ 30,000 ಮನೆ ಹಂಚಿಕೆ ಮಾಡದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವೆ' ಎಂದು ವಸತಿ ಸಚಿವ ಸೋಮಣ್ಣ ಸವಾಲು ಹಾಕಿದ್ದರು.

ವಿಧಾನಸೌಧ ಆವರಣದಲ್ಲಿ ಬಸವೇಶ್ವರ ಪುತ್ಥಳಿ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿಯನ್ನು ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ಸೂಕ್ತ ಪ್ರಸ್ತಾವನೆಯೊಂದಿಗೆ ಕಡತವನ್ನು ಮಂಡಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೂಚಿಸಿದ್ದಾರೆ. ಮುಖ್ಯಮಂತ್ರಿಯವರ ಈ ನಿರ್ಧಾರವು ರಾಜಕೀಯ ವಲಯದಲ್ಲಿ ಚರ್ಚೆಗೂ ಕಾರಣವಾಗಿದೆ.

'ಪ್ರಜಾಪ್ರಭುತ್ವದ ದೇಗುಲವಾದ ವಿಧಾನಸೌಧದ ಆವರಣದಲ್ಲಿ ಬಸವಣ್ಣ ಅವರ ಪುತ್ಥಳಿ ಸ್ಥಾಪಿಸುವುದರಿಂದ ಪ್ರಜಾಪ್ರಭುತ್ವಕ್ಕೆ ಮುಕುಟಪ್ರಾಯವಾದಂತೆ ಆಗುತ್ತದೆ' ಎಂದು ಯಡಿಯೂರಪ್ಪ ಹೇಳಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪೌಷ್ಟಿಕ ಆಹಾರ ಸೇವಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

₹265 ಎಕರೆ ವಿಸ್ತೀರ್ಣದ ಕೆರೆ ● ಕೆಲ ಎಕರೆಗಳಷ್ಟು ಜಾಗ ಒತ್ತುವರಿ ಮಾಡಿರುವ ಅನುಮಾನ

‘ಸಿಂಗನಾಯಕನಹಳ್ಳಿ ಕೆರೆ: ಜಂಟಿ ಸರ್ವೆ ನಡೆಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಲಹಂಕದ ಸಿಂಗನಾಯಕನಹಳ್ಳಿ ಕೆರೆಯು 265 ಎಕರೆ ವಿಸ್ತೀರ್ಣ ಹೊಂದಿದ್ದು, ಈ ಪೈಕಿ ಕೆಲ ಎಕರೆಗಳಷ್ಟು ಜಾಗವನ್ನು ಪ್ರಭಾವಿಗಳು ಹಾಗೂ ರಿಯಲ್ ಎಸ್ಟೇಟ್ ಉದ್ಯಮಿಗಳು ಒತ್ತುವರಿ ಮಾಡಿರುವ ಅನುಮಾನವಿದೆ. ಹೀಗಾಗಿ ಅರಣ್ಯ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸಬೇಕು’ ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

ಪಕ್ಷದ ನಿಯೋಗವು ಕೆರೆಯ ಜಾಗಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

‘ಇದುವರೆಗೂ ಈ ಕೆರೆಯ ಪುನರುಜ್ಜೀವನ ಕಾರ್ಯ ನಡೆಯದಿರುವುದು ಬೇಸರದ ಸಂಗತಿ. ಕೆರೆಯಲ್ಲಿ 7,500 ಕ್ಕೂ ಅಧಿಕ ಜಾಲಿ ಮರಗಳು ಬೆಳೆದಿವೆ. ಇವು 50 ವರ್ಷಗಳಷ್ಟು ಹಳೆಯದಾಗಿವೆ. ಕೋಟ್ಯಂತರ ರೂಪಾಯಿ ಮೌಲ್ಯದ ಜಾಲಿ, ಹೊಂಗೆ ಹಾಗೂ ಬೇವಿನ ಮರಗಳು ಟಿಂಬರ್ ಮಾಫಿಯಾಕ್ಕೆ ಬಲಿಯಾಗುತ್ತಿವೆ. ಕೆರೆ ಅಭಿವೃದ್ಧಿ ಹೆಸರಿನಲ್ಲಿ ಇವುಗಳಿಗೆ ಕೊಡಲಿ ಏಟು ಬೀಳುತ್ತಿದೆ. ಇದು ಕೂಡಲೇ ನಿಲ್ಲಬೇಕು’ ಎಂದು ಪಕ್ಷದ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಒತ್ತಾಯಿಸಿದರು.

‘ಕೆರೆಯು ಪ್ರಾಣಿ, ಪಕ್ಷಿಗಳ ಆವಾಸಸ್ಥಾನವಾಗಿದೆ. ಹೀಗಾಗಿ ಮರಗಳನ್ನು ಕಡಿಯದೆಯೇ ವೈಜ್ಞಾನಿಕ ರೀತಿಯಲ್ಲಿ ಹೂಳೆತ್ತುವ ಕೆಲಸ ಆಗಲಿ. ಭಾರತೀಯ ವಿಜ್ಞಾನ ಸಂಸ್ಥೆಯ ಸಸ್ಯಶಾಸ್ತ್ರ ವಿಭಾಗದ ವಿಜ್ಞಾನಿಗಳನ್ನೊಳಗೊಂಡ ಸಮಿತಿ ನೀಡಿರುವ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಮೂಲಕ ಪರಿಸರವನ್ನು ಸಂರಕ್ಷಿಸಲಿ. ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಟಿಂಬರ್ ಮಾಫಿಯಾಗೆ ಅನುಕೂಲವಾಗುವಂತಹ ತೀರ್ಮಾನ ಕೈಗೊಳ್ಳುವುದನ್ನು ನಿಲ್ಲಿಸಲಿ’ ಎಂದರು.

ಪಕ್ಷದ ಮುಖಂಡರಾದ ಫಣಿರಾಜ್, ಜಗದೀಶ್ ವಿ. ಸದಂ, ರಾಜಶೇಖರ್ ದೊಡ್ಡಣ್ಣ, ಜಯಕುಮಾರ್, ನಿತಿನ್ ರೆಡ್ಡಿ ಸಂತೋಷ್, ಪ್ರಕಾಶ್, ಉಷಾ ಮೋಹನ್, ಸುಹಾಸಿನಿ ಹಾಗೂ ಪುರುಷೋತ್ತಮ್ ಇದ್ದರು.

ಜಾಲಿ ಮರಗಳ ತೆರವಿಗೆ ಗ್ರಾಮಸ್ಥರ ಆಗ್ರಹ

ಯಲಹಂಕ: ಸಿಂಗನಾಯಕನಹಳ್ಳಿ ಕೆರೆ ಅಂಗಳದಲ್ಲಿ ಬೆಳೆದಿರುವ ಜಾಲಿಮರಗಳನ್ನು ತೆರವುಗೊಳಿಸುವುದರ ಜೊತೆಗೆ ಕೆರೆಯಲ್ಲಿ ಹೂಳುತೆಗೆದು ನೀರುತುಂಬಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಕೆರೆಯ ಸುತ್ತಮುತ್ತಲ ಗ್ರಾಮಸ್ಥರು ಆಗ್ರಹಿಸಿದರು.

ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ಕೆರೆಯ ಆವರಣದಲ್ಲಿ ನಡೆದ 'ಜಾಲಿ ಮರ ತೆಗೆಸಿ, ಕೆರೆ ಉಳಿಸಿ' ಜಾಲಿಮರ ತೆಗೆಸಿ, ಅಂತರ್ಜಲ ಹೆಚ್ಚಿಸಿ‘ ಅಭಿಯಾನದಲ್ಲಿ ಗ್ರಾಮಸ್ಥರು, ಅರಣ್ಯಇಲಾಖೆಯ ಅಧಿಕಾರಿಗಳು ಹಾಗೂ ಪರಿಸರವಾದಿಗಳ ವಿರುದ್ಧ ಘೋಷಣೆ ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ವಿಶ್ವನಾಥ್, 'ಸಿಂಗನಾಯಕನಹಳ್ಳಿ ಕೆರೆ ವಿಶಾಲವಾಗಿ ಹರಡಿಕೊಂಡಿರುವ ದೊಡ್ಡಕೆರೆಯಾಗಿದ್ದು, ಹಲವುದಶಕಗಳ ಹಿಂದೆ ಈ ಕೆರೆಯನ್ನು ನಂಬಿಕೊಂಡು 3 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 7 ಹಳ್ಳಿಗಳ ರೈತರು ನೂರಾರು ಎಕರೆ ಜಮೀನಿನಲ್ಲಿ ಕೃಷಿಮಾಡುತ್ತಿದ್ದರು. ಕ್ರಮೇಣ ಕೆರೆಯಲ್ಲಿ ನೀರು ಬತ್ತಿಹೋಗಿದ್ದು, ಈಗ ಮಳೆಗಾಲದಲ್ಲಿ ಮಾತ್ರ ಸ್ವಲ್ಪನೀರು ಸಂಗ್ರಹವಾಗಿರುತ್ತದೆ. ಮೊದಲೆಲ್ಲ ಈ ಕೆರೆ ತುಂಬಿದಾಗ ಸುತ್ತಮುತ್ತ ಪ್ರದೇಶಗಳ ಬಾವಿಗಳಲ್ಲಿ ನೀರು ತುಂಬಿರುತ್ತಿತ್ತು. ಆದರೆ ಬೆಳವಣಿಗೆಯಾಗುತ್ತಿದ್ದಂತೆ ರಾಜಕಾಲುವೆಗಳ ಒತ್ತುವರಿಯಾಗಿ ನೀರಿನಸಂಗ್ರಹ ಕಡಿಮೆಯಾಯಿತು‘ ಎಂದು ಮಾಹಿತಿ ನೀಡಿದರು.



ಗ್ರಾಮಸ್ಥರನ್ನು ಉದ್ದೇಶಿಸಿ ಶಾಸಕ ಎಸ್‌ಆರ್‌ವಿಶ್ವನಾಥ್ ಮಾತನಾಡಿದರು

'ರಾಜ್ಯ ಸರ್ಕಾರ ಎಚ್.ಎನ್.ವ್ಯಾಲಿ ಯೋಜನೆಯಡಿ ಕೆರೆಯ ಪಕ್ಕದಲ್ಲಿರುವ ತಿಮ್ಮಸಂದ್ರ ಕೆರೆಗೆ ನೀರು ತುಂಬಿಸುತ್ತಿದ್ದು, ನಂತರ ಹಾರೋಹಳ್ಳಿ ಮತ್ತು ಸಿಂಗನಾಯಕನಹಳ್ಳಿ ಕೆರೆಗೆ ನೀರು ತುಂಬಿಸುವ ಉದ್ದೇಶ ಹೊಂದಿದೆ. ಈ ದಿಸೆಯಲ್ಲಿ ಕೆರೆಯ ಅಂಗಳದಲ್ಲಿ ಅರಣ್ಯ ಇಲಾಖೆಯವರು 200 ಎಕರೆ ಪ್ರದೇಶದಲ್ಲಿ ಬೆಳೆಸಿರುವ, ಉರುವಲು ಮತ್ತು ಪ್ರಾಣಿಪಕ್ಷಿಗಳಿಗೆ ಉಪಯೋಗವಿಲ್ಲದ ಜಾಲಿಮರಗಳನ್ನು ತೆರವುಗೊಳಿಸಬೇಕಾಗಿದೆ‘ ಎಂದು ತಿಳಿಸಿದರು.

ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಮರಗಳನ್ನು ತೆರವುಗೊಳಿಸದಿದ್ದರೆ 3 ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಜನರಿಂದ ಇಲಾಖೆಯ ಮುಂದೆ ದೊಡ್ಡಹೋರಾಟ ರೂಪಿಸಲಾಗುವುದು ಎಂದು ನಾಗದಾಸನಹಳ್ಳಿಯ ರೈತ ಜನಾರ್ದನ್ ಎಚ್ಚರಿಕೆ ನೀಡಿದರು.

‘ಒಕ್ಕೂಟ ಸರ್ಕಾರ’ ಪದ ಬಳಕೆ: ದೇವೇಗೌಡರಿಗೆ ಪ್ರಶಂಸೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು ಮತ್ತು ಕಾಶ್ಮೀರದ ನಾಯಕರ ಜತೆ ನಡೆಸುತ್ತಿರುವ ಸಭೆಗಳ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸುವಾಗ ‘ಕೇಂದ್ರ ಸರ್ಕಾರ’ ಎಂಬುದರ ಬದಲಾಗಿ ‘ಒಕ್ಕೂಟ ಸರ್ಕಾರ’ ಎಂಬ ಪದ ಬಳಕೆ ಮಾಡಿರುವುದಕ್ಕೆ ಮಾಜಿ ಪ್ರಧಾನಿ ಎಚ್‌. ಡಿ. ದೇವೇಗೌಡ ಅವರನ್ನು ಹಲವರು ಪ್ರಶಂಸಿಸಿದ್ದಾರೆ.

ಮೋದಿ ಅವರ ಸಭೆಗಳ ಕುರಿತು ಗುರುವಾರ ಟ್ವೀಟ್ ಮಾಡಿದ್ದ ದೇವೇಗೌಡರು, ‘ಒಕ್ಕೂಟ ಸರ್ಕಾರ ಮತ್ತು ಜಮ್ಮು ಕಾಶ್ಮೀರದ ನಾಯಕರ ನಡುವಿನ ಸಂವಾದವು ಉತ್ತಮ ರೀತಿಯಲ್ಲಿ ನಡೆದಿರುವುದು ತಿಳಿದು ನನಗೆ ಸಂತೋಷವಾಗಿದೆ. ರಾಜ್ಯದ ಸ್ಥಾನ ಪುನರ್ ಸ್ಥಾಪನೆ, ವಿಧಾನಸಭಾ ಚುನಾವಣೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಸ್ಪಷ್ಟವಾದ ವಿಚಾರ ವಿನಿಯಮ ನಡೆದಿದೆ. ಜಮ್ಮು ಮತ್ತು ಕಾಶ್ಮೀರದ ಜನ ಶಾಂತಿ, ಪ್ರಗತಿ, ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಲು ಅರ್ಹರು’ ಎಂದಿದ್ದರು.

ಮಾಜಿ ಪ್ರಧಾನಿಯಾದ ದೇವೇಗೌಡರು ‘ಒಕ್ಕೂಟ ಸರ್ಕಾರ’ ಎಂಬ ಪದ ಬಳಕೆ ಮಾಡಿರುವುದನ್ನು ಟ್ವಿಟರ್‌ನಲ್ಲೇ ಹಲವರು ಶ್ಲಾಘಿಸಿದ್ದಾರೆ. ಈ ಹೇಳಿಕೆಯನ್ನು ಬೆಂಬಲಿಸಿ ನೂರಾರು ಮಂದಿ ಪ್ರತಿಕ್ರಿಯಿಸಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಕೇಂದ್ರ ಸರ್ಕಾರದ ಬದಲು ಒಕ್ಕೂಟ ಸರ್ಕಾರ ಎಂಬ ಪದ ಬಳಸಿದ್ದು, ರಾಷ್ಟ್ರಮಟ್ಟದಲ್ಲಿ ನಾನಾ ಬಗೆಯ ವಿಶ್ಲೇಷಣೆಗೆ ಕಾರಣವಾಗಿತ್ತು. ಅದಕ್ಕೆ ಈಗ ಗೌಡರು ಧ್ವನಿ ಗೂಡಿಸಿದ್ದಾರೆ ಎಂದು ಟ್ವಿಟರ್‌ನಲ್ಲಿ ಮೆಚ್ಚುಗೆ ಸೂಚಿಸಲಾಗಿದೆ.

ಜಿಡಿಪಿ ಹೆಚ್ಚಿಸಲು ಹೆಚ್ಚಿನ ಅನುದಾನ ಅಗತ್ಯ: ಸಿ.ಪಿ.ಯೋಗೇಶ್ವರ್

ಪ್ರವಾಸೋದ್ಯಮ ಕ್ಷೇತ್ರಕ್ಕೆ ₹1,000 ಕೋಟಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಕ್ಷೇತ್ರಕ್ಕೆ ₹1,000 ಕೋಟಿ ಅನುದಾನ ನೀಡಬೇಕು ಎಂದು ಪ್ರವಾಸೋದ್ಯಮ ಮತ್ತು ಪರಿಸರ ಸಚಿವ ಸಚಿವ ಸಿ.ಪಿ. ಯೋಗೇಶ್ವರ್ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಬೇಡಿಕೆ ಸಲ್ಲಿಸಿದ್ದಾರೆ.

ಶುಕ್ರವಾರ ನಡೆದ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಈಗ ಕೇವಲ ₹ 228.75 ಕೋಟಿ ಅನುದಾನ ನೀಡಲಾಗುತ್ತಿದೆ’ ಎಂದರು.

ಪ್ರವಾಸೋದ್ಯಮ ಕ್ಷೇತ್ರಕ್ಕೆ ಕನಿಷ್ಠ ₹1,000 ಕೋಟಿ ನೀಡಿದರೆ ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿ ಜಿಡಿಪಿ ದರವನ್ನು ವೃದ್ಧಿ ಮಾಡಲು ಸಾಧ್ಯವಿದೆ ಎಂದರು.

ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಇಂಧನ ಸೇರಿ ಬೇರೆ ಬೇರೆ ಇಲಾಖೆಗಳಿಗೆ ಸಾವಿರಾರು ಕೋಟಿ ಮೊತ್ತದ ಟೆಂಡರ್‌ಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರವೂ ಅಷ್ಟೇ ದೊಡ್ಡ ಕ್ಷೇತ್ರವಾಗಿದ್ದು, ಆದಾಯ ಸೃಷ್ಟಿಸುವ ನಿಟ್ಟಿನಲ್ಲಿ ಮಹತ್ವದ ಕ್ಷೇತ್ರವಾಗಿದೆ ಎಂದು ಯೋಗೇಶ್ವರ್ ತಮ್ಮ ಬೇಡಿಕೆಗೆ ಸಮರ್ಥನೆ ನೀಡಿದರು.

ಪ್ರವಾಸಿ ತಾಣ ವೀಕ್ಷಣೆಗೆ ಅವಕಾಶ

ಕೋವಿಡ್ ಲಾಕ್‌ಡೌನ್‌ನಿಂದ ಮುಚ್ಚಿರುವ ಪ್ರವಾಸೋದ್ಯಮ ತಾಣಗಳನ್ನು ಮುಂದಿನ ವಾರದಿಂದ ಸಾರ್ವಜನಿಕರಿಗಾಗಿ ತೆರೆಯಲಾಗುವುದು ಎಂದು ಸಚಿವ ಯೋಗೇಶ್ವರ್ ಹೇಳಿದರು.

ಜೋಗ ಜಲಪಾತದಲ್ಲಿ ₹185 ಕೋಟಿ ವೆಚ್ಚದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಟೆಂಡರ್ ಅಂತಿಮವಾಗಿದ್ದು, ಆದಷ್ಟು ಬೇಗ ಕಾಮಗಾರಿ ಆರಂಭವಾಗಲಿದೆ’ ಎಂದು ತಿಳಿಸಿದರು.

ಕೇರಳ ಹಾಗೂ ಗೋವಾ ರಾಜ್ಯಗಳಿಂದ ಜೋಗ ಜಲಪಾತಕ್ಕೆ 35 ಕಿ.ಮೀ ಉದ್ದದ ಜಲಮಾರ್ಗದಲ್ಲಿ ಪ್ರವಾಸಿಗರು ಬರಲು ವ್ಯವಸ್ಥೆ ಮಾಡಲು ರೂಪಿಸಲಾಗಿದೆ. ಸರ್ಕಾರಿ ರಜಾ ದಿನಗಳಂದು ಲಿಂಗನಮಕ್ಕಿ ಜಲಾಶಯದಿಂದ ಪ್ರಥಮ ಹಂತವಾಗಿ 200 ಕ್ಯೂಸೆಕ್ ನೀರನ್ನು ಹರಿಸಿ ಜೋಗದ ಸೊಬಗನ್ನು ಪ್ರವಾಸಿಗರಿಗೆ ಉಣಿಸಲಾಗುವುದು ಎಂದರು.

ಪ್ರವಾಸಿಗರ ವಾಸ್ತವ್ಯಕ್ಕಾಗಿ ಎರಡು ಹೋಟೆಲ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ರಾಜ್ಯದ ಪತ್ರಿಷ್ಠಿತ ಯೋಜನೆಯಾಗಿರುವ ಹೆಲಿ ಟೂರಿಸಂ ಸರ್ಕೀಟ್‌ಗೆ ಜೋಗ ಜಲಪಾತವನ್ನು ಸೇರ್ಪಡೆ ಮಾಡಲಾಗಿದೆ. ಎಂದರು.

- ಜೋಗ ಜಲಪಾತಕ್ಕೆ ಕೇರಳ ಹಾಗೂ ಗೋವಾದಿಂದ ಆಗಮಿಸುವ ಪ್ರವಾಸಿಗರಿಗೆ ಸ್ಪೀಡ್ ಬೋಟ್ ಸೌಕರ್ಯ
- ಎರಡನೇ ಹಂತದಲ್ಲಿ ಜೋಗ ಜಲಪಾತಕ್ಕೆ ನೀರಿನ ಪ್ರಮಾಣವನ್ನು 300 ಕ್ಯೂಸೆಕ್‌ಗೆ ಹೆಚ್ಚಿಸಲು ನಿರ್ಧಾರ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 2 ನೇ ಟರ್ಮಿನಲ್ ಆರಂಭವಾದ ನಂತರ ದೇಶದ ಪ್ರತಿಷ್ಠಿತ ಮೂರು ವಿಮಾನ ನಿಲ್ದಾಣಗಳ ಪಟ್ಟಿಗೆ ಬೆಂಗಳೂರು ವಿಮಾನ ನಿಲ್ದಾಣವೂ ಸೇರಲಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕರಾವಳಿ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮ, ಪಾರಂಪರಿಕ ಪ್ರವಾಸೋದ್ಯಮ, ಗ್ರಾಮೀಣ ಪ್ರವಾಸೋದ್ಯಮ, ಆಧ್ಯಾತ್ಮಿಕ ಪ್ರವಾಸೋದ್ಯಮ, ವನ್ಯಜೀವಿ ಪ್ರವಾಸೋದ್ಯಮ, ಕೃಷಿ ಪ್ರವಾಸೋದ್ಯಮ, ದೇವಾಲಯ ಪ್ರವಾಸೋದ್ಯಮ ಯೋಜನೆಗಳಿಗೆ ಉತ್ತೇಜನ ನೀಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

17 ನದಿಗಳು ಕಲುಷಿತ: ರಾಜ್ಯದ ಪ್ರಮುಖ ನದಿಗಳು, ಉಪನದಿಗಳು, ಸರೋವರಗಳು ಮತ್ತು ಕೆರೆಗಳ ನೀರಿನ ಗುಣಮಟ್ಟ ಮಾಪನ ಮಾಡಲಾಗುತ್ತಿದೆ. 278 ಸ್ಥಳಗಳಲ್ಲಿ ನೀರಿನ ಗುಣಮಟ್ಟ ಮಾಪನ ಸಾಧನವನ್ನು ಅಳವಡಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ, ನೀರು ಸರಬರಾಜು ಒಳಚರಂಡಿ ಮಂಡಳಿಗಳಿಗೆ ನೀರಿನ ಮೂಲಗಳನ್ನು ಕಲುಷಿತಗೊಳಿಸದಂತೆ ತಿಳಿಸಲಾಗಿದೆ ಎಂದರು.

ಪದಾಧಿಕಾರಿಗಳ ಸಭೆ: ಉಪಚುನಾವಣೆಗಳ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಮತ್ತು ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಕಡಿಮೆ ಮತಗಳನ್ನು ಪಡೆದ ಕಾರಣಗಳ ಬಗ್ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಮಾಹಿತಿ ಪಡೆದರು.

ರಾಜ್ಯದ ವಿವಿಧ ಜಿಲ್ಲೆಗಳ ಪಕ್ಷದ ಪದಾಧಿಕಾರಿಗಳು ಮತ್ತು ವಿವಿಧ ಮೋರ್ಚಾಗಳ ಅಧ್ಯಕ್ಷರ ಜತೆ ವರ್ಚುವಲ್ ಮೂಲಕ ಶುಕ್ರವಾರ ಸಭೆ ನಡೆಸಿದ ಅವರು, ಮೂರು ಕ್ಷೇತ್ರಗಳ ಉಪಚುನಾವಣೆಗಳ ಫಲಿತಾಂಶದ ವಿಶ್ಲೇಷಣೆ ನಡೆಸಿದರು.

ರಾಜ್ಯ ಕಾರ್ಯಕಾರಿಣಿ ಸಭೆ: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ಶನಿವಾರ ಬೆಳಿಗ್ಗೆ ವರ್ಚುವಲ್ ಮೂಲಕ ನಡೆಯಲಿದ್ದು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯ ಘಟಕ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಪಾಲ್ಗೊಳ್ಳಲಿದ್ದಾರೆ.



ಮಂಗಳೂರಿನ ಜಸ್ಟೀಸ್ ಕೆ.ಎಸ್‌ಹೆಗ್ಡೆ ಚಾರಿಟಬಲ್ ಆಸ್ಪತ್ರೆ ವತಿಯಿಂದ ನಗರದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ನಿಟ್ಟೆ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರೋಹಿತ್ ಪೂಂಜ ಚಾಲನೆ ನೀಡಿದರು. ಪ್ರಾಂಶುಪಾಲ ಎಚ್‌ಸಿ.ನಾಗರಾಜ್, ವೈದ್ಯರಾದ ಪವನ್, ಕಿರಣ್, ಸಂಸ್ಥೆಯ ಎನ್‌ಸಿಸಿ ಘಟಕದ ವಿದ್ಯಾರ್ಥಿಗಳು ಇದ್ದರು.

ನಗರದಲ್ಲಿ ಇಂದು

‘ಕೋವಿಡ್ ಅವಧಿಯಲ್ಲಿ ಶಿಕ್ಷಣ’ ಕುರಿತು ವೆಬಿನಾರ್: ಮಾತನಾಡುವವರು–ಎಚ್. ಬಿ.ಚಂದ್ರಶೇಖರ್, ಆಯೋಜನೆ–ಕ್ರೈ ಪಾರ್ಟ್‌ನರ್ಸ್ ಕರ್ನಾಟಕ, ಮಧ್ಯಾಹ್ನ 2.15 (ಆನ್‌ಲೈನ್ ಕಾರ್ಯಕ್ರಮ)

ಕವಿ ಸಿದ್ದಲಿಂಗಯ್ಯ ಅವರಿಗೆ ನುಡಿನಮನ: ಅಧ್ಯಕ್ಷತೆ–ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ನುಡಿನಮನ–ಕೆ.ಶ್ರೀನಿವಾಸರಾವ್, ಸಿರ್ಪಿ ಬಾಲಸುಬ್ರಹ್ಮಣ್ಯಂ, ಕೆ.ಶಿವಾರೆಡ್ಡಿ, ಪ್ರಭಾ ವರ್ಮಾ, ಎಸ್.ಆರ್.ವಿಜಯಶಂಕರ್, ಶಿವಪ್ರಕಾಶ್, ಬಾಳಾಸಾಹೇಬ್ ಲೋಕಾಪುರ, ಸರಜೂ ಕಾಟ್ಕರ್, ಟಿ.ವಿ. ಕಟ್ಟೀಮನಿ, ಮನು ಬಳಿಗಾರ್, ಎಲ್. ಎನ್.ಮುಕುಂದರಾಜು, ಆಯೋಜನೆ–ಸಾಹಿತ್ಯ ಅಕಾಡೆಮಿ, ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ)

‘ಕನ್ನಡ ಸಿನಿಮಾಗಳಲ್ಲಿ ಭೂಮಿಯ ಪ್ರಶ್ನೆಗಳು’ ಕುರಿತು ಉಪನ್ಯಾಸ: ಅಧ್ಯಕ್ಷತೆ–ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಸ.ಚಿ.ರಮೇಶ, ಉಪನ್ಯಾಸ–ಚಿಂತಕ ಸರ್ಫರಾಜ್ ಚಂದ್ರಗುತ್ತಿ, ಅತಿಥಿಗಳು–ಡಿ.ರಾಜಶೇಖರನ್, ಎ.ಸುಬ್ಬಣ್ಣ ರೈ, ರುದ್ರೇಶ್ ಅದರಂಗಿ, ಕೆ.ಸಿ.ಶಿವಾರೆಡ್ಡಿ, ಆಯೋಜನೆ–ಕನ್ನಡ ವಿಶ್ವವಿದ್ಯಾಲಯದ ಡಾ.ರಾಜಕುಮಾರ್ ಕನ್ನಡ ಅಧ್ಯಯನ ಕೇಂದ್ರ, ಸಹಯೋಗ–ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸಂಘ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಕವಿ ಸಿದ್ದಲಿಂಗಯ್ಯ ಅವರ ‘ಅವತಾರಗಳು’ ಕೃತಿಯ ಕುರಿತು ತಿಂಗಳ ಮಾತುಕತೆ: ಕೃತಿ ಪರಿಚಯ–ಚಿಂತಕ ಬಂಜಗೆರೆ ಜಯಪ್ರಕಾಶ್, ಪ್ರತಿಕ್ರಿಯೆ–ಪಿ.ಭಾರತಿ ದೇವಿ, ಆಯೋಜನೆ–ಪುಸ್ತಕ ಪ್ರೀತಿ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ವಿಚಾರ ಕಲರವ ಉಪನ್ಯಾಸ ಮಾಲಿಕೆ: ವಿಷಯ–ಭಾರತ ಸಂವಿಧಾನ ಶ್ರೇಷ್ಠತೆ ಹಾಗೂ ಬಿ.ಆರ್.ಅಂಬೇಡ್ಕರ್, ಮಾತನಾಡುವವರು–ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, ಭಾಗವಹಿಸುವವರು–ಕೆ.ಆರ್. ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ನೆಹರೂ ಪ್ರತಿಮೆ ಮರು ಸ್ಥಳಾಂತರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಕಾಮಗಾರಿಗಾಗಿ ವಿಧಾನಸೌಧದ ಮುಂಭಾಗದಿಂದ ತೆರವುಗೊಳಿಸಿದ್ದ ಜವಹಾರ ಲಾಲ್ ನೆಹರೂ ಅವರ ಪ್ರತಿಮೆಯನ್ನು ಪುನಃ ಅದೇ ಸ್ಥಳಕ್ಕೆ ತಂದಿಡುವ ಕಾರ್ಯ ಶುಕ್ರವಾರದಿಂದ ಆರಂಭವಾಗಿದೆ.

ನೆಲದಡಿಯ ಸುರಂಗ ಮಾರ್ಗವನ್ನು ಕೊರೆಯುವುದಕ್ಕಾಗಿ ಡಾ.ಬಿ.ಆರ್. ಅಂಬೇಡ್ಕರ್, ನೆಹರೂ ಮತ್ತು ಸುಭಾಷ್‌ಚಂದ್ರ ಬೋಸ್ ಪ್ರತಿಮೆಗಳನ್ನು ಸ್ಥಳಾಂತರ ಮಾಡಲಾಗಿತ್ತು. ಅವುಗಳಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ಮಾತ್ರ ಅದೇ ಸ್ಥಳಕ್ಕೆ ತಂದಿಡಲಾಗಿತ್ತು. ನೆಹರೂ ಪ್ರತಿಮೆಯನ್ನೂ ಪುನಃ ಅಲ್ಲಿಯೇ ತಂದಿಡಬೇಕೆಂಬ ಒತ್ತಾಯ ಹಲವು ಬಾರಿ ಕೇಳಿಬಂದಿತ್ತು.

ಮೊದಲು ಪ್ರತಿಮೆ ಇದ್ದ ಸ್ಥಳದಲ್ಲೇ ಈಗ ಪೀಠ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಅಲ್ಲಿ ಅಳವಡಿಸುವುದಕ್ಕಾಗಿ ನೆಹರೂ ಪ್ರತಿಮೆಯನ್ನು ಶುಕ್ರವಾರ ಬೆಳಿಗ್ಗೆ ಕ್ರೇನ್ ಸಹಾಯದಿಂದ ಕಾಮಗಾರಿ ಸ್ಥಳಕ್ಕೆ ತರಲಾಗಿದೆ. ಒಂದೆರಡು ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.



ಜವಾಹರ ಲಾಲ್ ನೆಹರೂ ಅವರ ಪ್ರತಿಮೆಯನ್ನು ಹಿಂದೆ ಇದ್ದ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸ ಶುಕ್ರವಾರದಿಂದ ಆರಂಭವಾಗಿದೆ – ಪ್ರಜಾವಾಣಿ ಚಿತ್ರ

‘ಹೈಕೋರ್ಟ್ ನಿರ್ದೇಶನದಂತೆ ಪ್ರತಿಮೆಯನ್ನು ಪುನರ್ ಸ್ಥಾಪಿಸಲಾಗುತ್ತಿದೆ. ಶುಕ್ರವಾರ ಬೆಳಿಗ್ಗೆಯೇ ಪ್ರತಿಮೆ ಸ್ಥಳಾಂತರ ಆರಂಭಿಸಲಾಗಿತ್ತು. ಸಂಚಾರ ದಟ್ಟಣೆ ಕಾರಣದಿಂದ ಕೆಲಸ ಪೂರ್ಣಗೊಂಡಿಲ್ಲ. ಶನಿವಾರ ಅಥವಾ ಭಾನುವಾರ ಈ ಕೆಲಸ ಪೂರ್ಣಗೊಳ್ಳಲಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಕುಟುಂಬ ಕೇಂದ್ರಿತ ಅಧಿಕಾರಕ್ಕಾಗಿ ತುರ್ತುಪರಿಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರವೆಲ್ಲವೂ ತಾನು ಮತ್ತು ತನ್ನ ಕುಟುಂಬ ಕೇಂದ್ರಿತವಾಗಿರಬೇಕು ಎಂಬ ದುಷ್ಟ ಮನಸ್ಥಿತಿಯ ಸಂಕೇತವಾಗಿ ಅಂದಿನ ಪ್ರಧಾನಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದರು’ ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಬೆಂಗಳೂರಿನ ಬಿಜೆಪಿಯ ಮೂರು ಜಿಲ್ಲಾ ಘಟಕಗಳ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ತುರ್ತುಪರಿಸ್ಥಿತಿಯ ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಕಾಂಗ್ರೆಸ್ ದೇಶದ ಕ್ಷಮೆಯಾಚಿಸಲಿ’

ದೇಶದ ಮೇಲೆ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದ ಕಾರಣಕ್ಕೆ ಕಾಂಗ್ರೆಸ್ ಪಕ್ಷ ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದ್ದಾರೆ.

ರಾಜ್ಯ ಬಿಜೆಪಿ ಏರ್ಪಡಿಸಿದ್ದ ತುರ್ತುಪರಿಸ್ಥಿತಿ ಕರಾಳ ದಿನ ಆಚರಣೆಯ ಅಂಗವಾಗಿ ಯಡಿಯೂರಪ್ಪ ಮಾತನಾಡಿದರು.

ಶಿಕ್ಷಣ ಸಚಿವ ಸುರೇಶ್‌ಕುಮಾರ್ ಮಾತನಾಡಿ, ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಸೆನ್ಸಾರ್ ಮಂಡಳಿ ಅನುಮತಿ ಪಡೆದೇ ಸುದ್ದಿ ಪ್ರಕಟಿಸಬೇಕಿತ್ತು. ಇದನ್ನು ವಿರೋಧಿಸಿ ಅನೇಕ ಪತ್ರಿಕೆಗಳ ತಮ್ಮ ಸಂಪಾದಕೀಯ ಜಾಗವನ್ನು ಖಾಲಿ ಬಿಟ್ಟು ಪ್ರಕಟ ಮಾಡಿದ್ದವು. ಪತ್ರಿಕಾ ಸ್ವಾತಂತ್ರ್ಯ ಇರಲಿಲ್ಲ, ವ್ಯಕ್ತಿ ಸ್ವಾತಂತ್ರ್ಯವೂ ಇರಲಿಲ್ಲ ಎಂದರು.

ವಿಶೇಷ ಮಕ್ಕಳ ವಸತಿ ಶಾಲೆಯಲ್ಲಿ ಘಟನೆ ● ಆರೋಪಿ ಬಂಧಿಸಿದ ದಾಬಸ್‌ಪೇಟೆ ಪೊಲೀಸರು

‘ವಿದ್ಯಾರ್ಥಿಯ ಬಟ್ಟೆ ಬಿಚ್ಚಿಸುತ್ತಿದ್ದ ಮುಖ್ಯಶಿಕ್ಷಕ’

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ವಿಶೇಷ ಮಕ್ಕಳ ವಸತಿ ಶಾಲೆಯೊಂದರ ವಿದ್ಯಾರ್ಥಿಯನ್ನು ಒತ್ತಾಯದಿಂದ ಸಲಿಂಗಕಾಮಕ್ಕೆ ಬಳಸಿಕೊಂಡಿರುವ ಆರೋಪದಡಿ, ಅದೇ ಶಾಲೆಯ ಮುಖ್ಯಶಿಕ್ಷಕ ಎಸ್. ರಂಗನಾಥ್ ಅವರನ್ನು ದಾಬಸ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

‘ವಸತಿ ಶಾಲೆ ಆಡಳಿತ ಮಂಡಳಿ ಕಾರ್ಯದರ್ಶಿಯವರು ಜೂನ್ 16ರಂದು ದೂರು ನೀಡಿದ್ದಾರೆ. ಒತ್ತಾಯದ ಸಲಿಂಗಕಾಮ (ಐಪಿಸಿ 377) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿ ರಂಗನಾಥ್ ಅವರನ್ನು ಸೆರೆಹಿಡಿಯಲಾಗಿದ್ದು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಮುಖ್ಯಶಿಕ್ಷಕ ಎಸ್. ರಂಗನಾಥ್

ದೂರಿನ ವಿವರ: ‘ವಿಶೇಷ ಮಕ್ಕಳಿಗಾಗಿ ಸಂಸ್ಥೆಯೊಂದರ ಅಡಿಯಲ್ಲಿ ವಸತಿ ಶಾಲೆ ಆರಂಭಿಸಲಾಗಿದೆ. 49 ಮಕ್ಕಳು ಶಾಲೆಯಲ್ಲಿದ್ದರು. ಕೋವಿಡ್‌ನಿಂದಾಗಿ 7 ವಿಶೇಷ ಮಕ್ಕಳನ್ನು ಮಾತ್ರ ಶಾಲೆಯಲ್ಲಿಟ್ಟುಕೊಂಡು, ಉಳಿದವರನ್ನು ಮನೆಗೆ ಕಳುಹಿಸಲಾಗಿತ್ತು’ ಎಂದು ದೂರಿನಲ್ಲಿ ಕಾರ್ಯದರ್ಶಿ ತಿಳಿಸಿದ್ದರು.

‘ಮಾಗಡಿ ತಾಲ್ಲೂಕಿನ ರಂಗನಾಥ್, 2009–10ರಿಂದ ಶಾಲೆ ಮುಖ್ಯಶಿಕ್ಷಕನಾಗಿದ್ದರು. 2017ರಲ್ಲಿ ಮದುವೆಯಾಗಿದ್ದ ಅವರು, ಶಾಲೆ ಆವರಣದಲ್ಲಿರುವ ವಸತಿ ಸಮುಚ್ಚಯದ ಮನೆಯಲ್ಲಿ ನೆಲೆಸಿದ್ದರು. ಅವರಿಗೆ ಹೆಣ್ಣು ಮಗುವಿದೆ. ಕೆಲ ತಿಂಗಳ ಹಿಂದಷ್ಟೇ ಪತ್ನಿ ಮಗುವಿನ ಸಮೇತ ತವರು ಮನೆಗೆ ಹೋಗಿದ್ದರು.’

‘ಶಾಲೆಯ 21 ವರ್ಷದ ವಿಶೇಷ ವಿದ್ಯಾರ್ಥಿ ಜೊತೆ ಆರೋಪಿ ಹೆಚ್ಚು ಒಡನಾಟ ಬೆಳೆಸಿ ಸಲುಗೆಯಿಂದ ಮಾತನಾಡುತ್ತಿದ್ದರು. ವಿದ್ಯಾರ್ಥಿಯನ್ನು ಮನೆಗೆ ಕರೆದುಕೊಂಡು ಹೋಗುತ್ತಿದ್ದ ಆರೋಪಿ, ನೀಲಿ ಚಿತ್ರಗಳನ್ನು ತೋರಿಸುತ್ತಿದ್ದರು. ನಂತರ, ವಿದ್ಯಾರ್ಥಿಯ ಎಲ್ಲ ಬಟ್ಟೆ ಬಿಚ್ಚಿಸಿ ನಗ್ನಗೊಳಿಸುತ್ತಿದ್ದರು. ತಾನೂ ಬಟ್ಟೆ ಬಿಚ್ಚಿ ನಗ್ನವಾಗುತ್ತಿದ್ದರು. ನಂತರ, ವಿದ್ಯಾರ್ಥಿಯಿಂದ ತನ್ನ ದೇಹವನ್ನೆಲ್ಲ ನೆಕ್ಕಿಸಿಕೊಂಡು ಸಲಿಂಗ ಕಾಮಕ್ಕೆ ಬಳಸಿಕೊಳ್ಳುತ್ತಿದ್ದರು’ ಎಂಬ ಸಂಗತಿಯನ್ನು ದೂರಿನಲ್ಲಿ ಉಲ್ಲೇಖಿಸಿದ್ದರು.

‘ಘಟನೆಯಿಂದ ಮಾನಸಿಕವಾಗಿ ನೊಂದಿದ್ದ ವಿದ್ಯಾರ್ಥಿ, ಇತ್ತೀಚೆಗೆ ಊರಿಗೆ ಹೋದಾಗ ತಾಯಿ ಬಳಿ ವಿಷಯ ತಿಳಿಸಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆ ಶಾಲಾ ಆಡಳಿತ ಮಂಡಳಿ, ಮಾನಸಿಕ ತಜ್ಞರೊಬ್ಬರನ್ನು ನಿಯೋಜಿಸಿ ಘಟನೆ ಬಗ್ಗೆ ಆಂತರಿಕ ತನಿಖೆ ನಡೆಸಿದೆ. ಆರೋಪಿ ರಂಗನಾಥ್ ಕೃತ್ಯ ಎಸಗಿರುವುದು ತನಿಖೆಯಿಂದ ಸಾಬೀತಾಗಿದೆ. ಇದರ ಆಧಾರದಲ್ಲಿ ದೂರು ನೀಡಲಾಗುತ್ತಿದ್ದು, ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ಕಾರ್ಯದರ್ಶಿ ಒತ್ತಾಯಿಸಿದ್ದರು.



ವಾಹನ ದಟ್ಟಣೆ ವಾರಾಂತ್ಯ ಕರ್ಫ್ಯೂ ಮುನ್ನಾದಿನವಾದ ಶುಕ್ರವಾರ ಸಂಜೆ ರಾಜಾರಾಮ್ ಮೋಹನ್ ರಾಯ್ ರಸ್ತೆಯಿಂದ ಬಿಜಿಎಸ್ ಮೇಲ್ಸೇತುವೆವರೆಗೆ ವಾಹನ ದಟ್ಟಣೆ ಉಂಟಾಗಿತ್ತು

–ಪ್ರಜಾವಾಣಿ ಚಿತ್ರ

‘ರೋಷನ್ ಆಸ್ತಿ ಗುರುತಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ’

ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಮಾಹಿತಿ ನೀಡಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದಲ್ಲಿ ಮಾಜಿ ಸಚಿವ ರೋಷನ್ ಬೇಗ್ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಅವರ ಆಸ್ತಿ ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ಅಫಿಡವಿಟ್ ಸಲ್ಲಿಸಿದ ಸರ್ಕಾರ, ‘ಐಎಂಎ ಕಾರ್ಯಚಟುವಟಿಕೆ ಮತ್ತು ಸಂಸ್ಥೆಯ ಪ್ರಚಾರದಲ್ಲಿ



ರೋಷನ್ ಬೇಗ್

ಬೇಗ್ ಪ್ರಮುಖ ಪಾತ್ರ ವಹಿಸಿದ್ದರು. ಸಂಸ್ಥೆಯಿಂದ ಆರ್ಥಿಕ ಲಾಭ ಗಳಿಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ’ ಎಂದು ಹೇಳಿದೆ.

‘ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆಯ ಅಡಿಯಲ್ಲಿ ಬೇಗ್ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಅಧಿಸೂಚನೆ ಹೊರಡಿಸಲಾಗುವುದು. ಆಸ್ತಿ ಗುರುತಿಸಲು ಜೂ.14ರಂದು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಲಾಗಿದೆ’ ಎಂದು ಅಫಿಡವಿಟ್‌ನಲ್ಲಿ ವಿವರಿಸಿದೆ.

‘ಅಲ್ಲದೇ ಬೇಗ್ ಆಸ್ತಿಯನ್ನು ಗುರುತಿಸಿ ತಕ್ಷಣವೇ ವರದಿ ನೀಡಲು ಬಿಬಿಎಂಪಿ ಮುಖ್ಯ ಆಯುಕ್ತರು, ಬೆಂಗಳೂರು ನಗರ ಜಿಲ್ಲಾಧಿಕಾರಿ, ಗ್ರಾಮಾಂತರ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ’ ಎಂದು ತಿಳಿಸಿದೆ.

ಬೇಗ್ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಪರಿಣಿತ ಅಧಿಕಾರಿಗಳಿಲ್ಲ ಎಂದು ತಿಳಿಸಿದ್ದ ಸರ್ಕಾರಕ್ಕೆ ತನ್ನ ನಿರ್ಧಾರ ಮರು ಪರಿಶೀಲಿಸುವಂತೆ ಈ ಹಿಂದಿನ ವಿಚಾರಣೆ ವೇಳೆ ಪೀಠ ನಿರ್ದೇಶನ ನೀಡಿತ್ತು. ಪ್ರತಿಕ್ರಿಯೆ ಸಲ್ಲಿಸಲು ಸರ್ಕಾರ ಸಮಯಾವಕಾಶ ಕೋರಿತ್ತು.

ಶಿವಾಜಿನಗರದ ಸರ್ಕಾರಿ ಶಾಲೆಗೆ ಐಎಂಎ ಸಮೂಹ ನೀಡಿರುವ ₹12.82 ಕೋಟಿ ದೇಣಿಗೆ ಮರಳಿಸುವ ಸಂಬಂಧ ಸೂಕ್ತ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕು ಎಂದು ಪೀಠ ತಿಳಿಸಿತ್ತು. ದೇಣಿಗೆ ಪಡೆದ ಮೊತ್ತವನ್ನು ಮರಳಿ ಪಾವತಿಸಲು ಆಗುವುದಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ತಿಳಿಸಿದೆ. ಈ ವಿಷಯದ ಕುರಿತು ಹೆಚ್ಚಿನ ವಿಚಾರಣೆಯನ್ನು ಜುಲೈ 7ಕ್ಕೆ ಪೀಠ ಮುಂದೂಡಿತು.

ಮೆಟ್ರೊ: 833 ಮರಗಳಿಗೆ ಕೊಡಲಿಯೇಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿನ ಹೊರವರ್ತುಲ ರಸ್ತೆಯಲ್ಲಿ (ಒಆರ್‌ಆರ್) ಮೆಟ್ರೊ ಮಾರ್ಗ ನಿರ್ಮಾಣಕ್ಕಾಗಿ 833 ಮರಗಳನ್ನು ಕಡಿಯಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಬಿಬಿಎಂಪಿ ಅನುಮತಿ ನೀಡಿದೆ. ಈ ಕುರಿತು ಗುರುವಾರ ಸುತ್ತೋಲೆ ಹೊರಡಿಸಿದೆ.

ಸೆಂಟ್ರಲ್ ಸಿಲ್ಕ್‌ಬೋರ್ಡ್‌ನಿಂದ ಕಾಡುಬೀಸನಹಳ್ಳಿಯವರೆಗೆ ಮೆಟ್ರೊ ಮಾರ್ಗ ನಿರ್ಮಿಸಲು ಈ ಮರಗಳು ಅಡ್ಡಿಯಾಗಿವೆ. ರಸ್ತೆಯ ಮಧ್ಯಭಾಗದಲ್ಲಿ (ಮೀಡಿಯನ್) ಈ ಮರಗಳಿದ್ದು, ಕಡಿಯುವುದು ಅನಿವಾರ್ಯವಾಗಿದೆ. ಈ ಸಂಬಂಧ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಬಹುದು. ಜುಲೈ 4ರೊಳಗೆ ಈ ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್.ಎಸ್. ರಂಗನಾಥ ಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೀಡಿಯನ್‌ನಲ್ಲಿರುವ ಈ ಮರಗಳು ತೀರಾ ದೊಡ್ಡವಲ್ಲ. ಸ್ಥಳಾಂತರಿಸಬೇಕೆಂದರೆ ಬೇರುಗಳು ಕೂಡ ಅಷ್ಟು ಆಳವಾಗಿ ಬೆಳೆದಿಲ್ಲ. ಮರಗಳನ್ನು ಕಡಿಯಲೇಬೇಕಾಗಿದೆ. ನ್ಯಾಯಾಲಯದ ಆದೇಶದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಿಗಮವು ಒಂದು ಮರಕ್ಕೆ 10 ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದೂ ನ್ಯಾಯಾಲಯ ಹೇಳಿದೆ’ ಎಂದು ಅವರು ತಿಳಿಸಿದರು.

ಅವಧಿ ವಿಸ್ತರಣೆ: ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ 6,316 ಮರಗಳನ್ನು ಕಡಿಯುವುದಕ್ಕೆ ಮುಂದಾಗಿರುವ ಅರಣ್ಯ ಇಲಾಖೆಯ ಕ್ರಮಕ್ಕೆ ಪರಿಸರ ವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಹಲವು ಸಂಘ–ಸಂಸ್ಥೆಗಳು ಆಕ್ಷೇಪಣೆ ಸಲ್ಲಿಕೆ ಅವಧಿಯನ್ನು ವಿಸ್ತರಿಸುವಂತೆಯೂ ಒತ್ತಾಯಿಸಿದ್ದವು.

ಜೂನ್ 14ಕ್ಕೆ ಈ ಕುರಿತು ಸುತ್ತೋಲೆ ಹೊರಡಿಸಿದ್ದ ಇಲಾಖೆಯು, ಆಕ್ಷೇಪಣೆ ಸಲ್ಲಿಕೆಗೆ 10 ದಿನಗಳ ಕಾಲಾವಕಾಶ ನೀಡಿತ್ತು. ಈಗ, 20 ದಿನಗಳಿಗೆ ವಿಸ್ತರಿಸಿದೆ.

ಕೋರ್ಸ್ ಮುಂದುವರಿಸಲು ಹೈಕೋರ್ಟ್ ಸೂಚನೆ

ಸ್ನಾತಕೋತ್ತರ ಆಯುರ್ವೇದ: ವಿದ್ಯಾರ್ಥಿಗಳು ನಿರಾಳ

ಬೆಂಗಳೂರು: ಪ್ರವೇಶ ಪರೀಕ್ಷೆಗಳಿಗೆ ಹಾಜರಾಗದೆ ಪ್ರವೇಶ ಪಡೆದ 2017-18ನೇ ಸಾಲಿನ ಸ್ನಾತಕೋತ್ತರ ಆಯುರ್ವೇದ ವಿದ್ಯಾರ್ಥಿಗಳು ತಮ್ಮ ಕೋರ್ಸ್ ಮುಂದುವರಿಸಬಹುದು ಎಂದು ಹೈಕೋರ್ಟ್ ಹೇಳಿದೆ.

ಡಾ. ಸೊಂಟಕ್ಕೆ ಕಾಂಚನ ರಾಮರಾವ್ ಮತ್ತು ಇತರ ಮೂವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅರವಿಂದಕುಮಾರ್ ನೇತೃತ್ವದ ವಿಭಾಗೀಯಪೀಠ, ಈ ಆದೇಶ ನೀಡಿತು.

‘ಪರೀಕ್ಷೆ ಮೂಲಕವೇ ಕೋರ್ಸ್‌ಗೆ ಪ್ರವೇಶ ಪಡೆಯಬೇಕು. ಆದರೆ, 2019ರ ಅ. 31ಕ್ಕೂ ಮೊದಲು ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶ ನೀಡಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. ಇದನ್ನು ಈ ವಿದ್ಯಾರ್ಥಿಗಳಿಗೂ ಅನ್ವಯಿಸಬಹುದು’ ಎಂದು ಪೀಠ ಹೇಳಿತು.

‘ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತ. ಅದನ್ನು ಈ ಅರ್ಜಿದಾರರಿಗೆ ವಿಸ್ತರಿಸಲು ಆಗುವುದಿಲ್ಲ’ ಎಂದು ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ ಪರ ವಕೀಲರು ವಾದಿಸಿದರು.

‘2019ಕ್ಕಿಂತ ಮೊದಲು ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಸುಪ್ರೀಂ ಕೋರ್ಟ್ ಆದೇಶ ಅನ್ವಯವಾಗುತ್ತದೆ. ಅರ್ಜಿದಾರರು ತಮ್ಮ ಕೋರ್ಸ್‌ಗಳು ಮುಂದುವರಿಸಲು ಅವಕಾಶ ನೀಡಬೇಕು. ಈಗಾಗಲೇ ಪೂರ್ಣಗೊಳಿಸಿದ್ದರೆ ಅವರಿಗೆ ಪ್ರಮಾಣ ಪತ್ರಗಳನ್ನು ವಿತರಿಸಬೇಕು’ ಎಂದು ವಿಭಾಗೀಯಪೀಠವು ನಿರ್ದೇಶನ ನೀಡಿತು.

ಕಳಪೆ ಆಹಾರ ಕಿಟ್: ಕ್ರಮಕ್ಕೆ ಸಿಪಿಐ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಟ್ಟಡ ಕಾರ್ಮಿಕರ ಸಾಮಾಜಿಕ ಸುರಕ್ಷತಾ ಮಂಡಳಿಯು ನಗರದ ಕೆಲವೆಡೆ ವಿತರಿಸುತ್ತಿರುವ ಆಹಾರ ಕಿಟ್ ಕಳಪೆಯಾಗಿರುವ ಕುರಿತು ರಾಜ್ಯ ಸರ್ಕಾರ ಅಗತ್ಯ ಕ್ರಮ ವಹಿಸಬೇಕು, ಸರಬರಾಜುದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ ಅದಕ್ಕೆ ಕಾರಣರಾದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿದೆ.

‘ಕಿಟ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿರುವ ಆರೋಪದ ಕುರಿತೂ ಸಮಗ್ರ ತನಿಖೆ ನಡೆಯಬೇಕು’ ಎಂದು ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಒತ್ತಾಯಿಸಿದ್ದಾರೆ.

‘ಶಾಸಕರು ತಮ್ಮ ಕ್ಷೇತ್ರದ ಮತದಾರರಿಗೆ ವಿತರಿಸಬೇಕಾದ ಅನಿವಾರ್ಯಕ್ಕೆ ಒಳಗಾಗಿ, ಕಾರ್ಮಿಕರ ಕಲ್ಯಾಣ ಮಂಡಳಿಯ ಸದಸ್ಯರಲ್ಲದವರಿಗೂ ವಿತರಿಸುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು’ ಎಂದೂ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ.

ದರೋಡೆ: ಇಬ್ಬರ ಸೆರೆ

ಬೆಂಗಳೂರು: ಮಾರಕಾಸ್ತ್ರ ತೋರಿಸಿ ಸಾರ್ವಜನಿಕರನ್ನು ಸುಲಿಗೆ ಮಾಡಲು ಸಂಚು ರೂಪಿಸಿದ್ದ ಇಬ್ಬರು ಆರೋಪಿಗಳನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಿಕ್ಕಗೊಲ್ಲರಹಟ್ಟಿಯ ದಾಸಪ್ಪ ಲೇಔಟ್‌ನ ಪುಟ್ಟಸ್ವಾಮಿ (27) ಹಾಗೂ ಲಗ್ಗೆರೆ ಸತೀಶ್ (23) ಬಂಧಿತರು. ಇದೇ ಪ್ರಕರಣದಲ್ಲಿ ಇಬ್ಬರು ಬಾಲಕರನ್ನು ವಶಕ್ಕೆ ಪಡೆದು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದರೋಡೆ ಸಂಚು ರೂಪಿಸಿದ್ದ ಆರೋಪಿಗಳು, ಮೂರು ದ್ವಿಚಕ್ರ ವಾಹನಗಳಲ್ಲಿ ವಿಶ್ವೇಶ್ವರಯ್ಯ ಲೇಔಟ್‌ನ 8ನೇ ಹಂತಕ್ಕೆ ಬಂದಿದ್ದರು. ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸಾರ್ವಜನಿಕರಿಗಾಗಿ ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿದ್ದಾರೆ.’

‘ಆರೋಪಿಗಳಿಂದ ₹ 2 ಲಕ್ಷ ಮೌಲ್ಯದ 24 ಮೊಬೈಲ್‌ಗಳು ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕಳಸ: ಆರ್‌ಎಫ್‌ಒ ವಿಜಯಕುಮಾರ್ ಅಮಾನತು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಮಾಫಿ ಪಾಸ್' (ಖಾಸಗಿ ಜಮೀನಿನಲ್ಲಿನ ಮರ ಕಡಿಯಲು ನೀಡುವ ಸಮ್ಮತಿ ಪತ್ರ) ಹೆಸರಿನಲ್ಲಿ ಬಾಳೂರು ಮೀಸಲು ಅರಣ್ಯದ ಗಡಿರೇಖೆಯ ಮರಗಳನ್ನು ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳಸ ವಲಯದ ಆರ್‌ಎಫ್‌ಒ ಜೆ.ವಿಜಯಕುಮಾರ್ ಅವರನ್ನು ಅಮಾನತುಗೊಳಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್‌ಮೋಹನ್ ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಬಾಳೂರು ಮೀಸಲು ಅರಣ್ಯ ಪ್ರದೇಶದ ಗಡಿ ಮತ್ತು ಮಾಫಿ ಪಾಸ್ ಪ್ರದೇಶದ ಗಡಿ ಗುರುತಿಸುವಲ್ಲಿ ವಿಫಲರಾಗಿರುವುದು ಕಂಡುಬಂದಿದೆ. ಹಲಗಡಕ ಕಾಫಿ ಎಸ್ಟೇಟ್ ಗ್ರಾಮದ ಗಡಿ ಗುರುತಿಸದೆ ಇರುವ ಸರ್ವೆ ನಂಬರ್ 4, 6, 9 ಹಾಗೂ 10 ರ ಜಮೀನಿನಲ್ಲಿ 96 ಮರಗಳನ್ನು ಅಕ್ರಮವಾಗಿ ಕಡಿದಿರುವುದು ಕಂಡುಬಂದಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಮಾಫಿ ಪಾಸ್' ಪ್ರದೇಶ ಗಡಿ ಗುರುತಿಸುವಲ್ಲಿ ವ್ಯತ್ಯಾಸವಾಗಿರುವುದಕ್ಕೆ ವಿಜಯ ಕುಮಾರ್ ಜವಾಬ್ದಾರರಾಗಿರುತ್ತಾರೆ. 'ಮಾಫಿ ಪಾಸ್' ಪ್ರದೇಶದಲ್ಲಿ ಅಕ್ರಮವಾಗಿ ಮರಗಳನ್ನು ಕಡಿದಿರುವುದರಲ್ಲಿ ಅವರು ಶಾಮೀಲಾಗಿರುವುದು ಕಂಡುಬಂದಿದೆ. ಕರ್ತವ್ಯ ನಿರ್ವಹಣೆಯಲ್ಲೂ ಅವರು ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಉಲ್ಲೇಖಿಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಏಳು ನೌಕರರನ್ನು ಫೆಬ್ರುವರಿಯಲ್ಲಿ ಅಮಾನತುಗೊಳಿಸಲಾಗಿತ್ತು.

ಆರೋಗ್ಯ ಇಲಾಖೆ ಸಲಹೆ ಆಧರಿಸಿ ಶಾಲೆ ಆರಂಭ: ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆರೋಗ್ಯ ಇಲಾಖೆ ಸಲಹೆಯನ್ನು ಆಧರಿಸಿಯೇ ಶಾಲೆಗಳಲ್ಲಿ ಭೌತಿಕ ತರಗತಿ ಆರಂಭಿಸುವ ಕುರಿತು ನಿರ್ಧಾರಕ್ಕೆ ಬರಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಕೋವಿಡ್ ಸಂಕಷ್ಟದ ಅವಧಿಯಲ್ಲಿ ಶಾಲಾ ಆರಂಭ, ಕಲಿಕೆಯಲ್ಲಿ ನಿರಂತರತೆ ಕಾಯ್ದುಕೊಳ್ಳುವುದು ಮತ್ತು ಡಾ. ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ವರದಿ ಕುರಿತು ಶಿಕ್ಷಣ ತಜ್ಞರು ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಶಾಲೆಗಳಿಂದ ಕೋವಿಡ್ ಹರಡಿದ ನಿದರ್ಶನಗಳು ಇಲ್ಲದಿರುವುದರಿಂದ ಆಯಾ ಪ್ರದೇಶದ ಕನಿಷ್ಠ ಕೋವಿಡ್ ದೃಢ ಪ್ರಮಾಣ ದರ ಆಧರಿಸಿ ಆದಷ್ಟು ಬೇಗ ತರಗತಿಗಳನ್ನು ಆರಂಭಿಸಬೇಕು ಎಂಬ ತಜ್ಞರ ಸಮಿತಿಯ ಶಿಫಾರಸಿನ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಮಕ್ಕಳನ್ನು ದೀರ್ಘ ಕಾಲ ಶಾಲೆಗಳಿಂದ ದೂರ ಇಡುವುದು ಒಳ್ಳೆಯದಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಯಾವುದಾದರೂ ರೂಪದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ನಿರಂತರ ಸಂಪರ್ಕ ಕಲ್ಪಿಸಬೇಕು ಎಂಬ ಸಲಹೆಗಳು ಬಂದಿವೆ ಎಂದರು.

ಲಾಕ್‌ಡೌನ್ ಸಡಿಲಿಕೆ ಮಾದರಿಯಲ್ಲೇ ವಿಕೇಂದ್ರೀಕೃತ ರೂಪದಲ್ಲಿ ಭೌತಿಕ ತರಗತಿಗಳನ್ನು ಆರಂಭಿಸಬಹುದು ಎಂದು ಕೆಲವರು ಸಲಹೆ ನೀಡಿದ್ದಾರೆ. ಜಿಲ್ಲೆ, ತಾಲ್ಲೂಕು, ನಗರ, ಪಟ್ಟಣ, ಹೋಬಳಿ ಅಥವಾ ಗ್ರಾಮ ಪಂಚಾಯಿತಿ ವ್ಯಾಪ್ತಿಯನ್ನು ಘಟಕವಾಗಿ ಪರಿಗಣಿಸಿ ನಿರ್ಧಾರಕ್ಕೆ ಬರಬೇಕೆಂಬ ಸಲಹೆಗಳೂ ವ್ಯಕ್ತವಾಗಿವೆ ಎಂದು ತಿಳಿಸಿದರು.

28ರಂದು ಚರ್ಚೆ: ಸುರಕ್ಷಿತವಾಗಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಕುರಿತು ಇದೇ 28ರಂದು ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪೊಲೀಸ್ ಅಧೀಕ್ಷಕರು, ಜಿಲ್ಲಾ ವೈದ್ಯಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಲಾಗುವುದು. ಭೌತಿಕ ತರಗತಿಗಳ ಆರಂಭದ ಬಗ್ಗೆಯೂ ಆ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಸುರೇಶ್ ಕುಮಾರ್ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ. ಅನ್ಬುಕುಮಾರ್, ಶಿಕ್ಷಣ ಫೌಂಡೇಷನ್‌ನ ಪ್ರಸನ್ನ ಒಡೆಯರ್, ಪ್ರಥಮ್ ಫೌಂಡೇಷನ್‌ನ ಶೇಷಾದ್ರಿ, ಅಜೀಂ ಪ್ರೇಮ್‌ಜೀ ಫೌಂಡೇಷನ್‌ನ ಋಷಿಕೇಶ್, ವರುಣಾ ನಲ್ಲೂರು, ಅಕ್ಷರ ಫೌಂಡೇಷನ್‌ನ ವೈಜಯಂತಿ, ಶಿಕ್ಷಾ ಲೋಕಂನ ಪ್ರಸನ್ನ ಕುಮಾರ್, ಪ್ರಾಂಶುಪಾಲರಾದ ವಿಜಯಕುಮಾರಿ ಸಭೆಯಲ್ಲಿದ್ದರು.

ಕಲಿಕಾ ನಿರಂತರತೆಗೆ ಕಾರ್ಯಪಡೆ

ಕೋವಿಡ್ ಸಂಕಷ್ಟದ ಅವಧಿಯಲ್ಲಿ ಮಕ್ಕಳ ಕಲಿಕೆಯಲ್ಲಿ ನಿರಂತರತೆ ಕಾಯ್ದುಕೊಳ್ಳುವುದು, ಕಲಿಕಾ ಸಾಮಗ್ರಿ ಮತ್ತು ಮೌಲ್ಯಮಾಪನ ಪ್ರಕ್ರಿಯೆ ಕುರಿತು ಸಲಹೆ ನೀಡುವುದಕ್ಕಾಗಿ ಸಮಾಜದ ವಿವಿಧ ಸ್ತರಗಳ ಪ್ರತಿನಿಧಿಗಳು ಹಾಗೂ ಶಿಕ್ಷಣ ತಜ್ಞರನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲೂ ತ್ರೈಮಾಸಿಕ, ಅರ್ಧ ವಾರ್ಷಿಕ, ವಾರ್ಷಿಕ ಮೌಲ್ಯಾಂಕನ ಪ್ರಕ್ರಿಯೆ ನಡೆಸಲು ಯೋಚಿಸಲಾಗಿದೆ. ಮೌಲ್ಯಾಂಕನ ಪದ್ಧತಿ ಕುರಿತು ಕಾರ್ಯಪಡೆಯೇ ವರದಿ ನೀಡಲಿದೆ ಎಂದು ಹೇಳಿದರು.

27ರ ಬಳಿಕ ಹೆಚ್ಚು ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಜೂನ್ 27ರಿಂದ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. 30ರವರೆಗೆ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೂರು ದಿನಗಳಿಂದ ಬಿಡುವು ಪಡೆದಿದ್ದ ಮುಂಗಾರು ಮತ್ತೆ ಚುರುಕುಗೊಳ್ಳಲಿದ್ದು, ಹಲವು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗಲಿದೆ ಎಂದು ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗುವ ಮುನ್ಸೂಚನೆ ಇದ್ದು, ಈ ಜಿಲ್ಲೆಗಳಲ್ಲಿ ಇದೇ 27ರಿಂದ 30ರವರೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ ಎಂದು ತಿಳಿಸಿದೆ.

ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಗುಡುಗು ಹೆಚ್ಚಾಗಿರಲಿದ್ದು, ಸಾಧಾರಣ ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದೆ. ಗೋಕರ್ಣದಲ್ಲಿ 2 ಸೆಂ.ಮೀ ಹಾಗೂ ತೀರ್ಥಹಳ್ಳಿಯಲ್ಲಿ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	95.36	4,660	6,120
ಹಾರಂಗಿ	2,859	2,839.35	615	80
ಕಬಿನಿ	2284	2,275.67	2,180	3,000
ಹೇಮಾವತಿ	2,922	2,894.66	1,746	200
ಲಿಂಗನಮಕ್ಕಿ	1,819	1,785.60	3,997	3,879.18
ಸೂಪಾ (ಮೀ)	564	539.23	5,282	3,237
ಮಾಣಿ	594.36	573.84	200	-
ತುಂಗಭದ್ರಾ	1,633	1,606.93	18,497	262
ಮಲಪ್ರಭಾ	2079.50	2,062.20	2,196	194
ಘಟಪ್ರಭಾ	2175	2,130.43	5,633	122
ಭದ್ರಾ	186	153.7	1,994	81
ಆಲಮಟ್ಟಿ (ಮೀ)	519.60	517.38	34,685	28,783
ನಾರಾಯಣಪುರ (ಮೀ)	492.25	489.03	20,000	20,790

* ನೆಲಮಟ್ಟದಿಂದ

ದಿವಂಗತ ಮುಮ್ತಾಜ್ ಬೇಗಂರ 'ಸ್ವಾತಂತ್ರ್ಯದ ಕಹಳೆ'ಗೆ ಪ್ರಶಸ್ತಿ

ಮಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ಮುಸ್ಲಿಂ ಬರಹಗಾರರ ಅತ್ಯುತ್ತಮ ಕನ್ನಡ ಕೃತಿಗೆ ಕೊಡಮಾಡುವ 2019ನೇ ಸಾಲಿನ ರಾಜ್ಯ ಮಟ್ಟದ 'ಮುಸ್ಲಿಂ ಸಾಹಿತ್ಯ ಪ್ರಶಸ್ತಿ'ಗೆ ಹಿರಿಯ ಲೇಖಕಿ ದಿವಂಗತ ಮುಮ್ತಾಜ್ ಬೇಗಂ ಅವರ 'ಸ್ವಾತಂತ್ರ್ಯದ ಕಹಳೆ' ಕೃತಿ ಆಯ್ಕೆಯಾಗಿದೆ.



ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದ್ದು, ಲಾಕ್‌ಡೌನ್ ಸಂಪೂರ್ಣ ತೆರವಿನ ಬಳಿಕ ಮಂಗಳೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮರಣೋತ್ತರ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಗೆ 36 ಕೃತಿಗಳು ಬಂದಿದ್ದು, ಸಾಹಿತಿಗಳಾದ ಡಾ. ಹಸೀನಾ ಖಾದ್ರಿ, ಅಬ್ದುರ್ರಹ್ಮಾನ್ ಕುತ್ತೆತ್ತೂರು ಮತ್ತು ಪ್ರಾಧ್ಯಾಪಕ ಅಬ್ದುಲ್ ರಝಾಕ್ ಅನಂತಾಡಿ ತೀರ್ಪುಗಾರರಾಗಿದ್ದರು ಎಂದು ಮುಸ್ಲಿಂ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈದ್ಯೆಯಾಗಿರುವ ಮಗಳ ಜೊತೆ ಗುಜರಾತ್‌ನಲ್ಲಿ ನೆಲೆಸಿದ್ದ ಮುಮ್ತಾಜ್ ಅವರು, ಏಪ್ರಿಲ್ 6ರಂದು ಕೋವಿಡ್‌ನಿಂದ ನಿಧನರಾಗಿದ್ದರು.

ಕಳಪೆ ಆಹಾರ ಪೂರೈಕೆ: ನೋಟಿಸ್

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕಳಪೆ ಗುಣಮಟ್ಟದ ಅಕ್ಕಿ, ಬೇಳೆ ಪೂರೈಸಿದ ಕಾರಣ ವೈಟ್ ಪೆಟಲ್ಸ್ ಸಂಸ್ಥೆಗೆ ಕಾರ್ಮಿಕ ಇಲಾಖೆ ನೋಟಿಸ್ ಜಾರಿ ಮಾಡಿದೆ. ಈ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಇಲಾಖೆಯ ಅಧಿಕಾರಿಗಳಿಗೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಸೂಚನೆ ನೀಡಿದ್ದಾರೆ.

ಕಾರ್ಮಿಕರಿಗೆ ಕಳಪೆ ಆಹಾರ ಪೂರೈಸಿರುವುದು ಮತ್ತು ಕಿಟ್‌ಗಳ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾಗಿತ್ತು.

'ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ವಿತರಣೆಯಾದ ಕಿಟ್‌ಗಳಲ್ಲಿ ಕಳಪೆ ಗುಣಮಟ್ಟದ ಅಕ್ಕಿ–ಬೇಳೆ ಪೂರೈಕೆಯಾಗಿದೆ. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟಗೊಳ್ಳುತ್ತಿದ್ದಂತೆ ಸಂಬಂಧಪಟ್ಟ ಗುತ್ತಿಗೆ ಸಂಸ್ಥೆಗೆ ನೋಟಿಸ್ ನೀಡಲಾಗಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಪೂರೈಸುತ್ತಿರುವ ಕಿಟ್‌ಗಳು ಗುಣಮಟ್ಟದಿಂದ ಕೂಡಿವೆ. ಆದಾಗ್ಯೂ, ಕಳಪೆ ದಿನಸಿ ವಿತರಿಸಿದ್ದರೆ ಕಾರ್ಮಿಕ ಸಹಾಯವಾಣಿ 155214ಗೆ ಕರೆ ಮಾಡಬಹುದು' ಎಂದೂ ಸಚಿವರು ಹೇಳಿದ್ದಾರೆ.


'ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದಂತೆ ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ. ಈ ಕಿಟ್‌ಗೆ ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ, ಉಳಿದ ಆಹಾರ ಪದಾರ್ಥಗಳನ್ನು ಮಾರುಕಟ್ಟೆಯ ಸ್ಪರ್ಧಾತ್ಮಕ ದರಗಳಿಗೆ ಅನುಗುಣವಾಗಿ ಅರ್ಹ ಸಂಸ್ಥೆಗಳಿಂದ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ ಬೇರೆಲ್ಲ ಆರೋಪವು ಸತ್ಯಕ್ಕೆ ದೂರವಾಗಿದೆ' ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ನಗದು ವರ್ಗಾವಣೆ: 'ಸರ್ಕಾರದ ಆದೇಶದಂತೆ, ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ತಲಾ ₹3 ಸಾವಿರ ಸಹಾಯಧನ ನೀಡುವ ಕಾರ್ಯವನ್ನು ಇಲಾಖೆ ಕೈಗೆತ್ತಿಕೊಂಡಿದ್ದು, ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಲಾಗುತ್ತಿದೆ. ಒಟ್ಟು, 17.80 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರಿದ್ದು, ಈವರೆಗೆ 15.40ಲಕ್ಷ ಕಾರ್ಮಿಕರಿಗೆ ಸಹಾಯಧನ ವರ್ಗಾಯಿಸಲಾಗಿದೆ. ಉಳಿದ 2.40 ಲಕ್ಷ ಕಾರ್ಮಿಕರ ಬ್ಯಾಂಕ್ ಖಾತೆ ನಿಷ್ಕ್ರಿಯಗೊಂಡಿದ್ದು, ಅವರ ಖಾತೆಗಳನ್ನು ಚಾಲನೆಗೊಳಿಸಿದ ತಕ್ಷಣವೇ ₹3 ಸಾವಿರ ಜಮಾ ಮಾಡಲಾಗುವುದು' ಎಂದು ಸಚಿವರು ತಿಳಿಸಿದ್ದಾರೆ.

ನಿಜಗುಣಪ್ರಭು ಸ್ವಾಮೀಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಸಹಕಾರದಲ್ಲಿ ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ ಹಾಗೂ ಜಾನಪದ ಸಂಶೋಧನ ಕೇಂದ್ರದ ಆಶ್ರಯದಲ್ಲಿ ನೀಡುವ 'ಡಾ. ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ'ಗೆ ಈ ಬಾರಿ ಮುಂಡರಗಿ ತೋಂಟದಾರ್ಯ ನಿಜಗುಣಪ್ರಭು ಸ್ವಾಮೀಜಿ ಅವರನ್ನು ಆಯ್ಕೆ ಮಾಡಲಾಗಿದೆ.



ಈ ಕುರಿತು ಶುಕ್ರವಾರ ಮಾಹಿತಿ ನೀಡಿದ ಪ್ರತಿಷ್ಠಾನದ ಸದಸ್ಯ ಬಿ.ಎಲ್.ಪಾಟೀಲ, 'ಪ್ರಶಸ್ತಿಯು ₹25ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಜೂನ್ 27ರಂದು ಸಂಜೆ 4ಕ್ಕೆ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಬೈಲೂರಿನ ನಿಷ್ಕಲ ಮಂಟಪದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ' ಎಂದು ತಿಳಿಸಿದರು.

'ಕಾರ್ಯಕ್ರಮವು ಆನ್‌ಲೈನ್ ವೇದಿಕೆಯಲ್ಲಿ ನಡೆಯಲಿದ್ದು, ಜೂಮ್ ಮೀಟಿಂಗ್ ಕೋಡ್– 87918767720 ಲಿಂಕ್ ಮೂಲಕ ನೇರಪ್ರಸಾರವನ್ನು ವೀಕ್ಷಿಸಬಹುದು. ವೀಕ್ಷಣೆಗೆ ಪಾಸ್‌ವರ್ಡ್– 2021 ಬಳಕೆ ಮಾಡಬೇಕು' ಎಂದರು.




ಮಕ್ಕಳ ಸುತ್ತ ಇರಲಿ ಸುರಕ್ಷತೆಯ ಬೇಲಿ

ಲಾಕ್‌ಡೌನ್ ನಿರ್ಬಂಧ ಸಡಿಲವಾಗಿದ್ದರೂ ಮಕ್ಕಳನ್ನು ಕರೆದುಕೊಂಡು ಓಡಾಟ ನಡೆಸುವುದು ಸರಿಯಲ್ಲ; ಅನಿವಾರ್ಯವಾಗಿದ್ದರೆ, ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು ಎನ್ನುತ್ತಾರೆ ತಜ್ಞರು

ಎಸ್ಸೆಚ್

ಕೋವಿಡ್‌ನಿಂದಾಗಿ ಕಳೆದ ಒಂದೂವರೆ ವರ್ಷದಿಂದ ಬಹುತೇಕ ಮಂದಿಗೆ ಮನೆಯ ಪರಿಧಿಯೊಳಗೇ ಜೀವನ ಎಂಬಂತಾಗಿದೆ. ಅವಕಾಶ ಸಿಕ್ಕಾಗ ಅಗತ್ಯ ಕೆಲಸಗಳಿಗೆ ಹೊರಗಡೆ ಹೋಗಿ ಬರುವ ದೊಡ್ಡವರಿಗೇ ತಲೆಚಿಟ್ಟು ಹಿಡಿದಿರುವಾಗ ಇನ್ನು ಇಡೀ ದಿನ ಮನೆಯಲ್ಲೇ ಕೂತಿರುವ ಚಿಕ್ಕ ಮಕ್ಕಳಿಗೆ ಹೇಗಾಗಿರಬೇಡ! ಮೊಬೈಲ್, ಟಿವಿ, ಪುಸ್ತಕ, ಆನ್‌ಲೈನ್ ತರಗತಿ ಎಂದಷ್ಟೇ ಸೀಮಿತಗೊಂಡಿರುವ ಮಕ್ಕಳಿಗೆ ಯಾವಾಗ ಹೊರಗೆ ಕಾಲಿಟ್ಟು ಪಾರ್ಕ್‌ನಲ್ಲಿ ಆಟವಾಡುವುದು, ಓರಗೆಯವರ ಜೊತೆ ಬೆರೆಯುವುದು, ಅಪ್ಪ– ಅಮ್ಮನ ಜೊತೆ ನೆಂಟರ ಮನೆ, ಪಿಕ್ನಿಕ್, ಪ್ರವಾಸ.. ಎಂದೆಲ್ಲ ಓಡಾಡುವುದು ಎಂಬ ಆಸೆ ಸಹಜವೇ. ಈಗಂತೂ ಬಹುತೇಕ ಕಡೆ ಲಾಕ್‌ಡೌನ್ ನಿಯಮಗಳನ್ನು ಸಡಿಲಿಸಿರುವುದರಿಂದ ಲಸಿಕೆ ಹಾಕಿಸಿಕೊಂಡ ದೊಡ್ಡವರು ಓಡಾಡುವ ಧೈರ್ಯ ಮಾಡುತ್ತಿದ್ದಾರೆ. ಸಮೀಪದ ಸ್ಥಳಗಳಿಗೆ ಪಿಕ್ನಿಕ್ ಯೋಜನೆ ಹಾಕಿಕೊಂಡವರೂ ಬಹಳಷ್ಟು ಮಂದಿ ಇರಬಹುದು. ಆದರೆ ಮಕ್ಕಳನ್ನು ಬಿಟ್ಟು ಹೇಗೆ ಹೋಗುವುದು?

‘ಕೋವಿಡ್ ಇನ್ನೂ ಕಡಿಮೆಯಾಗಿಲ್ಲ, ಹೌದು. ಆದರೆ ನಮ್ಮದೇ ಕಾರ್‌ನಲ್ಲಿ ತವರುಮನೆ ಶಿವಮೊಗ್ಗಕ್ಕೆ ಹೋಗಿ, ಅಲ್ಲಿಂದ ಜೋಗ ಜಲಪಾತವನ್ನು ಈ ಮಳೆಗಾಲದಲ್ಲಿ ಮಕ್ಕಳಿಗೆ ತೋರಿಸೋಣ ಎಂದುಕೊಂಡಿದ್ದೇವೆ. ಆದರೆ ನಾವು ಲಸಿಕೆ ತೆಗೆದುಕೊಂಡಿದ್ದರೂ, ಮಕ್ಕಳಿಗೆ ಇನ್ನೂ ಬಂದಿಲ್ಲವಲ್ಲ. ಹೀಗಾಗಿ ಮನಸ್ಸಿನಲ್ಲಿ ಭಯ ಇದ್ದೇ ಇದೆ’ ಎನ್ನುವ ಬೆಂಗಳೂರಿನ ಗೃಹಿಣಿ ಕವಿತಾ ಸೋಮಶೇಖರ್, ‘ಮಕ್ಕಳಿಗೂ ಕಳೆದ ಒಂದು ವರ್ಷದಿಂದ ಎಲ್ಲಿಯೂ ಹೋಗದೇ ಬೋರ್ ಆಗಿದೆ’ ಎನ್ನುತ್ತಾರೆ.



ಇನ್ನೂ 3–4 ತಿಂಗಳುಗಳ ಕಾಲ ಪ್ರವಾಸ ಮಾಡದಿರುವುದು ಸೂಕ್ತ. ಮಕ್ಕಳಿಗೆ ಡಿಫ್ತೀರಿಯ, ಫ್ಲೂ ಲಸಿಕೆ ಹಾಕಿಸಿ. ಇಲ್ಲದಿದ್ದರೆ ಸಾದಾ ಜ್ವರವೋ, ಕೋವಿಡ್ ಸಮಸ್ಯೆಯೋ ಎಂದು ಗೊತ್ತಾಗುವುದಿಲ್ಲ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿ. ಇದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಚಿಕ್ಕ ಮಕ್ಕಳನ್ನು ಹೊರಗಡೆ ಎತ್ತಿಕೊಂಡು ಹೋದರೆ ಕರವಸ್ತ್ರವನ್ನು ಮೂಗಿಗೆ ಅಡ್ಡ ಹಿಡಿಯಿರಿ.

ಡಾ. ಎಂ.ಡಿ. ಸೂರ್ಯಕಾಂತ, ಮಕ್ಕಳ ತಜ್ಞ

ನಮ್ಮ ದೇಶದಲ್ಲಿ ಮಕ್ಕಳ ಮೇಲೆ ಲಸಿಕೆ ಪ್ರಯೋಗ ಈಗಿನ್ನೂ ನಡೆಯುತ್ತಿದೆ ಅಷ್ಟೆ. ಇದರ ಮಧ್ಯೆ ಕೋವಿಡ್‌ನ ಸಂಭವನೀಯ ಮೂರನೇ ಅಲೆಯಲ್ಲಿ ಮಕ್ಕಳಿಗೆ ವೈರಸ್ ಸೋಂಕು ತಗಲುವ ಸಾಧ್ಯತೆ ಹೆಚ್ಚು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಿರುವಾಗ ಪುಟ್ಟ ಮಕ್ಕಳನ್ನು ಹೊರಗಡೆ ಕರೆದುಕೊಂಡು ಓಡಾಡುವುದು ಎಷ್ಟು ಸರಿ? ಒಂದೊಮ್ಮೆ ಕುಟುಂಬದವರೆಲ್ಲ ಹೊರಗೆ ಹೋಗುವ ಪ್ರಮೇಯ ಬಂದರೆ ಯಾವೆಲ್ಲ ಮುನ್ನೆಚ್ಚರಿಕೆಗಳನ್ನು, ಸುರಕ್ಷಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಪ್ರಶ್ನೆಗಳು ಏಳುತ್ತವೆ.

ಅಪಾಯಕಾರಿ ಅಂಶಗಳು

‘ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳ ಜೊತೆ ಹೊರಗೆ ಓಡಾಡುವಾಗ, ಪ್ರವಾಸಕ್ಕೆಂದು ಹೋಗುವ ಯೋಜನೆ ರೂಪಿಸುವಾಗ ಅಪಾಯಕಾರಿ ಅಂಶಗಳ ಬಗ್ಗೆ ಹೆಚ್ಚು ಲಕ್ಷ್ಯ ನೀಡಬೇಕಾಗುತ್ತದೆ’ ಎನ್ನುವ ಮಕ್ಕಳ ತಜ್ಞ ಡಾ. ಎಂ.ಡಿ. ಸೂರ್ಯಕಾಂತ, ‘ಮಕ್ಕಳಿಗೆ ಮಧುಮೇಹ, ಉಬ್ಬಸ, ಅಸ್ತಮಾದಂತಹ ಆರೋಗ್ಯ ಸಮಸ್ಯೆ ಇದ್ದರಂತೂ ಹೊರಗಡೆ ಕರೆದುಕೊಂಡು ಹೋಗುವುದು ಬೇಡವೇ ಬೇಡ’ ಎಂದು ಎಚ್ಚರಿಕೆ ನೀಡುತ್ತಾರೆ.

ಮೊದಲ ಮತ್ತು ಎರಡನೆಯ ಅಲೆಯ ಅಂಕಿ– ಅಂಶಗಳ ಪ್ರಕಾರ, ವಯಸ್ಕರಿಗೆ ಹೋಲಿಸಿದರೆ, ಮಕ್ಕಳಲ್ಲಿ ಕೋವಿಡ್‌-19ನಿಂದ ಉಂಟಾದ ಗಂಭೀರ ಸಮಸ್ಯೆಗಳು ಕಡಿಮೆ. ಆದರೂ ಬೇರೆ ಆರೋಗ್ಯ ಸಮಸ್ಯೆ ಇರುವಂಥ ಮಕ್ಕಳಿಗೆ ಆತಂಕವಿದ್ದೇ ಇತ್ತು.

‘ಮಕ್ಕಳಿಗೆ ಸ್ಟಿರಾಯ್ಡ್ ಇರುವ ಔಷಧ ಕೊಡುತ್ತಿದ್ದರಂತೂ ತುಂಬಾ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಇದು ರೋಗ ನಿರೋಧಕ ಶಕ್ತಿಯನ್ನು ಕುಂದಿಸುವುದರಿಂದ ಮಕ್ಕಳಿಗೆ ಕೋವಿಡ್ ಸೋಂಕು ಉಂಟಾಗುವ ಸಾಧ್ಯತೆ ಜಾಸ್ತಿ’ ಎನ್ನುತ್ತಾರೆ ಡಾ. ಸೂರ್ಯಕಾಂತ.

ಕೆಲವು ಜಿಲ್ಲೆಗಳಲ್ಲಿ, ಸೋಂಕಿನ ಪ್ರಮಾಣ ಜಾಸ್ತಿ ಇದೆ. ಹಾಗೆಯೇ ಹೊರ ರಾಜ್ಯಗಳಲ್ಲಿ ಕೂಡ ಎಲ್ಲೆಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದರ ಬಗ್ಗೆ ಮಾಹಿತಿ ಇಟ್ಟುಕೊಂಡು ಓಡಾಟ ನಡೆಸಬೇಕಾಗುತ್ತದೆ. ಪ್ರವಾಸಕ್ಕೆ ಹೋದಾಗಲೇ ನಿಮ್ಮ ಮಗುವಿಗೆ ಆರೋಗ್ಯ ಕೆಟ್ಟರೆ ಅಲ್ಲಿ ಮೂಲಭೂತ ಆರೋಗ್ಯ ಸೇವಾ ವ್ಯವಸ್ಥೆ ಇಲ್ಲದಿದ್ದರೆ ಅದು ಅಪಾಯವನ್ನು ಮೈಮೇಲೆ ಎಳೆದುಕೊಂಡಂತೆ.

ಕೊರೊನಾ ಸೋಂಕಿತರ ಪ್ರಮಾಣ ಕಡಿಮೆ ಇದೆ ಎಂದುಕೊಂಡು ಹೊರಗೆ ಅಡಿ ಇಡುವ ಹಾಗೂ ಇಲ್ಲ. ಏಕೆಂದರೆ ಸೋಂಕಿತರು ಹಾಗೂ ಒಟ್ಟು ಜನಸಂಖ್ಯೆ ತೆಗೆದುಕೊಂಡು ಈ ಅಂಕಿ– ಅಂಶ ನೀಡಲಾಗುತ್ತಿದೆಯೇ ಹೊರತು ಸೋಂಕಿತರು ಮತ್ತು ಲಸಿಕೆ ತೆಗೆದುಕೊಂಡವರ ಸಂಖ್ಯೆ ಆಧರಿಸಿ ಅಲ್ಲ ಎನ್ನುತ್ತಾರೆ ತಜ್ಞರು.

ಸ್ವಂತ ವಾಹನದಲ್ಲಿ ತೆರಳಿ

ಹಾಗೆಯೇ ಮಕ್ಕಳನ್ನು ಕರೆದುಕೊಂಡು ಹೋಗುವುದಿದ್ದರೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಬೇಡಿ. ಸ್ವಂತ ಕಾರಿನಲ್ಲಿ ಹೋಗುವುದು ಒಳಿತು. ‘ಐದು ವರ್ಷಕ್ಕಿಂತ ಅಧಿಕ ವಯಸ್ಸಿನ ಮಕ್ಕಳಿಗೆ ಮಾಸ್ಕ್ ಹಾಕಿಸಬಹುದು. ಆದರೆ ಅದಕ್ಕಿಂತ ಚಿಕ್ಕ ಮಕ್ಕಳಿಗೆ ಮಾಸ್ಕ್ ಹಾಕಿದರೆ ಅವು ಇಟ್ಟುಕೊಳ್ಳುವುದಿಲ್ಲ. ಹಾಗೆಯೇ ಉಸಿರು ಕಟ್ಟುವ ಸಾಧ್ಯತೆ ಹೆಚ್ಚು. ಹೀಗಾಗಿ ಅಂತರ ಕಾಪಾಡಲು ಸ್ವಂತ ವಾಹನದಲ್ಲಿ ಹೋಗುವುದು ಸೂಕ್ತ’ ಎನ್ನುತ್ತಾರೆ ಡಾ. ಸೂರ್ಯಕಾಂತ.

ಪ್ರಯಾಣ ಮಾಡುವಾಗ ಮಾರ್ಗದ ಮಧ್ಯೆ ಹೋಟೇಲ್‌ನಲ್ಲಿ ತಿನ್ನದಿರುವುದು ಒಳ್ಳೆಯದು. ತೀರಾ ಅನಿವಾರ್ಯವಾದರೆ ಸೀಟ್‌ಗಳನ್ನು ಸ್ಯಾನಿಟೈಸ್ ಮಾಡುವುದು, ಮಕ್ಕಳಿಗೆ ಶೌಚಾಲಯ ಬಳಕೆ ಬಗ್ಗೆ ತಿಳಿವಳಿಕೆ ನೀಡುವುದು ಸೂಕ್ತ. ಹೋಟೇಲ್‌ನಲ್ಲಿ ಉಳಿಯುವ ಬದಲು ಹೋಂಸ್ಟೇ ಸುರಕ್ಷಿತ.


ಬಯಲು ಪ್ರದೇಶಕ್ಕೆ, ಕಡಿಮೆ ಜನರಿರುವ ಕಡೆ ಮಕ್ಕಳನ್ನು ಕರೆದುಕೊಂಡು ಹೋಗಬಹುದು. ಆದರೆ ಸಿನಿಮಾ ವೀಕ್ಷಣೆಗೆಂದು ಥಿಯೇಟರ್‌ಗೆ, ಹೆಚ್ಚು ಜನ ಸೇರುವ ಕಾರ್ಯಕ್ರಮಕ್ಕೆ, ಪಾರ್ಕ್‌ಗೆ ಕರೆದುಕೊಂಡು ಹೋಗಬೇಡಿ ಎಂದು ಎಚ್ಚರಿಸುತ್ತಾರೆ ತಜ್ಞರು.

‘ಎಷ್ಟೋ ತಿಂಗಳುಗಳ ನಂತರ ನನ್ನ ಎಂಟು ವರ್ಷದ ಮಗಳನ್ನು ಸಮೀಪದ ಪಾರ್ಕ್‌ಗೆ ಕರೆದುಕೊಂಡು ಹೋಗಿದ್ದೆ. ಹೋಗುವ ಮುನ್ನ ಅಂತರ ಕಾಪಾಡಿಕೊಳ್ಳುವ ಬಗ್ಗೆ, ಮಾಸ್ಕ್ ಮೂಗಿನಿಂದ ಜಾರದಂತೆ ನೋಡಿಕೊಳ್ಳುವ ಬಗ್ಗೆ, ಆಗಾಗ ಕೈಗೆ ಸ್ಯಾನಿಟೈಸರ್ ಹಾಕಿಕೊಳ್ಳುವ ಕುರಿತು ತಿಳಿ ಹೇಳಿದ್ದೆ’ ಎನ್ನುವ ಗೃಹಿಣಿ ಶುಭಾ ಸಾಲಿಯಾನ್, ‘ಮಕ್ಕಳಿಗೆ ಲಸಿಕೆ ಬಂದರೆ ಸಾಕಪ್ಪ’ ಎಂದು ಆತಂಕ ತೋಡಿಕೊಳ್ಳುತ್ತಾರೆ.

ಈ ಕೋವಿಡ್ ಮಧ್ಯೆ ಒಂದೂವರೆ ವರ್ಷದಿಂದ ಬದುಕು ಸಾಗಿಸುತ್ತಿದ್ದೇವೆ. ಹೀಗಾಗಿ ಜೀವನಶೈಲಿಯಲ್ಲಿ ಅಗಾಧ ಪ್ರಮಾಣದಲ್ಲಿ ಬದಲಾವಣೆ ಕಾಣಿಸಿಕೊಂಡಿದೆ. ಮನರಂಜನೆಗಿಂತ ಸುರಕ್ಷತೆ, ಜೀವ ಮುಖ್ಯ ಎಂದು ಬಹುತೇಕ ಮಂದಿಗೆ ಅರಿವಾಗಿದೆ. ಆದರೂ ಮಕ್ಕಳಿಗೋಸ್ಕರ, ಅವರ ಮಾನಸಿಕ ಆರೋಗ್ಯಕ್ಕೋಸ್ಕರ ಸಣ್ಣಪುಟ್ಟ ಮನರಂಜನೆಗೆಂದು ಹೊರಗೆ ಅಡಿಯಿಟ್ಟರೂ ಮುನ್ನೆಚ್ಚರಿಕೆ ಮುಖ್ಯವಾಗಿರಬೇಕು. ❖

ವಿವಾಹವೊ ಉದ್ಯೋಗವೊ ಹೇಗೆ ನಿರ್ಧರಿಸಲಿ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• 27 ವರ್ಷದ ಎಂಎಸ್‌ಸಿ, ಬಿಎಡ್ ಪದವೀಧರೆ. 25 ವರ್ಷದ ತಂಗಿಯೊಬ್ಬಳಿದ್ದಾಳೆ. ಕೆಲಸವನ್ನು ಬಿಟ್ಟು ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ಸರ್ಕಾರಿ ಕೆಲಸಕ್ಕೆ ಸೇರಿ ಸ್ವಾವಲಂಬಿಯಾಗುವ ಬಯಕೆಯಿದೆ. ಈಗಲೇ ಮದುವೆಯಾಗಲು ಇಷ್ಟವಿಲ್ಲ. ಸದ್ಯದಲ್ಲೇ ನಿವೃತ್ತಿಯಾಗಲಿರುವ ತಂದೆ ಮದುವೆಯಾಗುವಂತೆ ಒತ್ತಾಯಿಸುತ್ತಿದ್ದಾರೆ. ಆಗದಿದ್ದರೆ ಮನೆಬಿಟ್ಟು ಹೋಗುವುದಾಗಿ ಹೆದರಿಸುತ್ತಿದ್ದಾರೆ. ಆತ್ಮವಿಶ್ವಾಸವನ್ನು ಕಳೆದುಕೊಂಡು ಒಬ್ಬೊಂಟಿಯಾಗುತ್ತಿದ್ದೇನೆ ಎನ್ನಿಸುತ್ತದೆ. ಓದಲೂ ಸಾಧ್ಯವಾಗದೆ ಆತ್ಮಹತ್ಯೆಯ ಯೋಚನೆಗಳು ಬರುತ್ತಿವೆ. ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ.

ನಿವೃತ್ತಿಗೆ ಹತ್ತಿರವಿರುವ ತಂದೆಗೆ ಮಕ್ಕಳ ಭವಿಷ್ಯದ ಆತಂಕ ಸಹಜವಲ್ಲವೇ? ತಮ್ಮ ಪ್ರೀತಿ, ಕಾಳಜಿಯನ್ನು ಆತಂಕಕ್ಕೆ ಬದಲಾಯಿಸಿಕೊಂಡಿರುವ ಅವರು ಅದಕ್ಕೆ ಸ್ಪಂದಿಸದ ನಿಮ್ಮ ಮೇಲೆ ಬೆದರಿಕೆಯ ಅಸ್ತ್ರ ಬಳಸುತ್ತಿದ್ದಾರೆ. ಆರ್ಥಿಕವಾಗಿ ಸ್ವಾವಲಂಬಿಯಾಗುವ ನಿಮ್ಮ ಉದ್ದೇಶ ಮೆಚ್ಚುವಂತಹುದು. ಆದರೆ ಈ ಪ್ರಯತ್ನದಲ್ಲಿ ನಿಮ್ಮ ದೇಹ, ಮನಸ್ಸುಗಳ ಬೇಡಿಕೆಗಳನ್ನು ನೀವು ಕಡೆಗಣಿಸುತ್ತಿರಬಹುದೇ? ‘ನನ್ನ ಮನಸ್ಸಿನ ಆಳದಲ್ಲಿ ಸಂಗಾತಿಯ ಬಯಕೆಗಳಿಲ್ಲವೇ’ ಎಂದು ಹುಡುಕಿ. ಇದೆ ಎಂದಾದರೆ ನೀವೇಕೆ ಹಿಂಜರಿಯುತ್ತಿದ್ದೀರಿ ಎಂದು ಯೋಚಿಸಿ. ಪತಿಯ ಮೇಲಿನ ಆರ್ಥಿಕ ಅವಲಂಬನೆ ನಿಮಗೆ ಹಿತಕರ ಅನ್ನಿಸಿರಲಾಗದು ಅಥವಾ ಮದುವೆಯ ನಂತರ ಪೋಷಕರಿಗೆ ಸಹಾಯ ಮಾಡಲಾಗದಿರಬಹುದೇ ಎನ್ನುವ ಹಿಂಜರಿಕೆಗಳಿರಬಹುದು ಅಥವಾ ಪತಿಯ ಇಚ್ಛೆಯಂತೆ ಬದುಕಬೇಕಾದ ಅನಿವಾರ್ಯತೆಯಿಂದ ನಿಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುವ ಭಯವಿರಬಹುದು. ನಿಮ್ಮ ಮನಸ್ಸಿನ ಹೋರಾಟಗಳನ್ನು ಅರ್ಥಮಾಡಿಕೊಳ್ಳದೆ ಯಾರೊಡನೆಯೂ ಹಂಚಿಕೊಳ್ಳದಿರುವುದಕ್ಕೆ ಏಕಾಂಗಿತನ ಅನುಭವಿಸುತ್ತಿದ್ದೀರಲ್ಲವೇ? ಸದ್ಯ ಮದುವೆಯಾಗುವುದಿಲ್ಲ ಎಂದು ವಿರೋಧಿಸುವ ಬದಲು ಎಂದಾದರೂ ಮದುವೆಯಾಗುವುದಾದರೆ ಎಂತಹ ಸಂಗಾತಿ ನನಗಿಷ್ಟ ಎಂದು ಯೋಚಿಸಿದರೆ ಹೇಗಿರುತ್ತದೆ? ಇಂತಹ ವಿಷಯಗಳನ್ನೆಲ್ಲಾ ಪಟ್ಟಿ ಮಾಡಿಕೊಂಡು ತಂದೆಯೊಡನೆ ಮಾತನಾಡಿ. ಪೋಷಕರ ಅನಿವಾರ್ಯತೆಗೆ ಅಥವಾ ಬಲವಂತಕ್ಕೆ ಯಾರನ್ನೂ ಒಪ್ಪಿಕೊಳ್ಳಬೇಡಿ. ನಿಮಗೆ ಒಪ್ಪಿಗೆಯಾಗುವ ಸಂಗಾತಿ ಸಿಗುವ ಸಾಧ್ಯತೆಗಳಿದ್ದರೆ ತಂದೆಯವರನ್ನು ವಿರೋಧಿಸಿ ಹತಾಶರಾಗುವ ಅಗತ್ಯವೆಲ್ಲಿದೆ?

• ಯುವ ಸಾಹಿತಿ, ಕಾಲೇಜು ಅಧ್ಯಾಪಕ. ಸಮಾಜ ಗುರುತಿಸುವಷ್ಟು ಬೆಳೆದಿದ್ದೇನೆ. 5 ವರ್ಷದ ಹಿಂದೆ ನಾನು ಪ್ರೀತಿಸಿದ್ದ ಹುಡುಗಿ ತುಂಬಾ ಕಷ್ಟಪಡುತ್ತಿದ್ದಾಳೆ ಅಂತ ತಿಳಿದು ರಾತ್ರಿಯಿಡೀ ನಿದ್ದೆಯಿಲ್ಲದೆ ಒದ್ದಾಡುತ್ತೇನೆ. ಅವಳ ನೆನಪಿನಲ್ಲಿ ಅಳುತ್ತೇನೆ. ಕಚೇರಿಯಲ್ಲಿ ಎಲ್ಲರ ಮೇಲೆ ರೇಗುತ್ತೇನೆ. ಸಮಾಧಾನವನ್ನು ಕಳೆದುಕೊಂಡು ಬರೆಯುವುದಕ್ಕೂ ಆಗುತ್ತಿಲ್ಲ. ಸಮಾಜದ ಮಾರ್ಗದರ್ಶಕ ನಾನು ಹೀಗಾದರೆ ಹೇಗೆ ಎಂದು ನೊಂದುಕೊಂಡಿದ್ದೇನೆ. ಪರಿಹಾರವೇನು?

ಹೆಸರು, ಊರು ಬೇಡ.

ನಿಮ್ಮನ್ನು ನೀವು ಸಮಾಜದ ಮಾರ್ಗದರ್ಶಕ ಎಂದು ಕರೆದುಕೊಂಡಿದ್ದೀರಿ. ಯಾರೂ ನೀಡದ ಅಂತಹ ಗುರುತರ ಜವಾಬ್ದಾರಿಯನ್ನು ನೀವೇ ಹೇಗೆ ತೆಗೆದುಕೊಳ್ಳಲು ಸಾಧ್ಯ? ಸಮಾಜದ ಮಾರ್ಗದರ್ಶಕರಾಗುವವರು ಮಾನವೀಯ ಸಂವೇದನೆಗಳನ್ನು ಅನುಭವಿಸಬಾರದು ಎನ್ನುವ ತಪ್ಪುಕಲ್ಪನೆಗಳು ನಿಮ್ಮಲ್ಲಿ ಹೇಗೆ ಮೂಡಿರಬಹುದು? ನೀವು ಹಿಂದೊಮ್ಮೆ ಪ್ರೀತಿಸಿದ ಹುಡುಗಿ ಎದುರಿಸುತ್ತಿರುವಂತಹ ಕಷ್ಟಗಳನ್ನು ಇನ್ನೂ ಲಕ್ಷಾಂತರ ಮಹಿಳೆಯರು ಅನುಭವಿಸುತ್ತಿದ್ದರೂ ಅವರಿಗಾಗಿ ನೀವು ನಿದ್ದೆ ಕಳೆದುಕೊಳ್ಳುತ್ತಿಲ್ಲವೇಕೆ ಎಂದು ಯೋಚಿಸಿದ್ದೀರಾ? ಆ ಹುಡುಗಿಯ ಬಗೆಗೆ ಇನ್ನೂ ನಿಮಗೆ ಆಕರ್ಷಣೆ ಉಳಿದಿದೆ ಎಂದಲ್ಲವೇ? ಇದರಿಂದ ಹೊರಬರುವುದು ಹೇಗೆ ಎಂದು ಯೋಚಿಸಿ. ನಿಮ್ಮ ವೈಯುಕ್ತಿಕ ಬೆಳವಣಿಯನ್ನು, ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕೆನ್ನುವ ಉದ್ದೇಶಗಳನ್ನು ಮೆಚ್ಚುತ್ತೇನೆ. ಆದರೆ ಅವುಗಳಿಗಿರುವ ಮಿತಿಗಳನ್ನು ಗುರುತಿಸಿ ಒಪ್ಪಿಕೊಳ್ಳಿ. ನಿಮ್ಮ ಮನಸ್ಸಿನ ನೋವು ಕ್ರಿಯೆಯಾಗುವುದು ಸಾಧ್ಯವಾದಾಗ ಮಾತ್ರ ಸಾರ್ಥಕತೆಯ ಅನುಭವ ಕೊಡುತ್ತದೆ.

• ಎಂಎಸ್‌ಸಿ ಪದವೀಧರೆ. 6 ವರ್ಷದಿಂದ ದುಬೈನಲ್ಲಿ ಕೆಲಸ ಮಾಡುವವನೊಬ್ಬನನ್ನು ಪ್ರೀತಿಸುತ್ತಿದ್ದೇನೆ. ಅವನು ನನ್ನೊಡನೆ ಸಂಪರ್ಕದಲ್ಲಿದ್ದರೂ ಅವನಿಗೆ ಭಾರತಕ್ಕೆ ಹಿಂದಿರುಗಲಾಗುತ್ತಿಲ್ಲ. ಮನೆಯಲ್ಲಿ ಮದುವೆಯಾಗುವಂತೆ ಒತ್ತಾಯಿಸುತ್ತಿದ್ದಾರೆ. ಅವನಿಗೆ ಕಾಯಬೇಕೋ ನನ್ನ ಜೀವನದಲ್ಲಿ ಮುಂದುವರೆಯಬೇಕೋ ನಿರ್ಧರಿಸಲಾಗುತ್ತಿಲ್ಲ. ಅಭದ್ರತೆ ಮತ್ತು ನಕಾರಾತ್ಮಕ ಯೋಚನೆಗಳಿಂದಾಗಿ ಕೆಲಸ ಮತ್ತು ಭವಿಷ್ಯದ ಬಗೆಗೆ ಗಮನಹರಿಸಲಾಗುತ್ತಿಲ್ಲ. ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರೀತಿಯ ಬಗೆಗೆ ಮನೆಯಲ್ಲಿ ಇನ್ನೂ ಚರ್ಚೆ ಮಾಡಿದಂತಿಲ್ಲ. ಪತ್ರದ ಧಾಟಿಯನ್ನು ನೋಡಿದರೆ ನಿಮ್ಮಿಬ್ಬರಲ್ಲೂ ಮುಂದಿನ ದಾರಿಯ ಕುರಿತು ಸ್ಪಷ್ಟತೆ ಇರುವಂತೆ ಕಾಣುವುದಿಲ್ಲ. ಇಬ್ಬರ ಬದುಕಿನ ದಾರಿಗಳು ಸೇರುವ ಸಾಧ್ಯತೆಯಿಲ್ಲದಿದ್ದರೆ ಇಂತಹ ಗೊಂದಲದಲ್ಲಿ ಎಷ್ಟು ಕಾಲ ಮುಂದುವರೆಯುತ್ತೀರಿ? ಸ್ಪಷ್ಟವಾದ ಮತ್ತು ನಿಮಗೆ ಒಪ್ಪಿಗೆಯಾಗಬಹುದಾದ ಬದುಕಿನ ಸಾಧ್ಯತೆಗಳ ಕುರಿತು ಹುಡುಗನ ಜೊತೆ ಮಾತನಾಡಿ. ಸಮಯದ ಮಿತಿಯಲ್ಲಿ (ಉದಾಹರಣೆಗೆ 3-6 ತಿಂಗಳು) ಹುಡುಗ ಖಚಿತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ನಿಮಗೆ ಅನ್ನಿಸಿದರೆ ನಿಮ್ಮ ಭವಿಷ್ಯವನ್ನು ನೀವೇ ಹುಡುಕಿಕೊಳ್ಳಿ. ಇಷ್ಟೆಲ್ಲಾ ವರ್ಷಗಳ ಆಕರ್ಷಣೆಯನ್ನು, ಪ್ರೀತಿಯನ್ನು ಮರೆಯುವುದು ಸಹಜವಾಗಿ ನೋವಿನ ವಿಷಯ. ಆದರೆ ಗೊತ್ತುಗುರಿಗಳೇ ಇಲ್ಲದ ದಾರಿಯಲ್ಲಿನ ಆತಂಕ ಇನ್ನೂ ಹೆಚ್ಚಾಗಿರುತ್ತದೆ ಎಂದು ಮರೆಯದಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಬೆಳಗಿನ ಕಷಾಯ, ಕಾಳುಮೆಣಸಿನ ಕಷಾಯ

ನಳಪಾಕ

ವೇದಾವತಿ ಎಚ್. ಎಸ್.



ಕಷಾಯ ಎಂದರೆ ಕಾಯಿಲೆ ಬಂದಾಗ ಮಾತ್ರ ತಯಾರಿಸಿ ಕುಡಿಯುವುದಲ್ಲ. ಯಾವಾಗ ಬೇಕಾದರೂ ಇಲ್ಲಿರುವ ಕಷಾಯವನ್ನು ತಯಾರಿಸಿ ಕುಡಿಯಬಹುದು. ಇವು ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತವೆ. ಶೀತ, ಕೆಮ್ಮು, ಕಫ, ಜ್ವರ, ಅಜೀರ್ಣ, ಅಸಿಡಿಟಿ, ತಲೆ ನೋವು, ವಾಂತಿ ಮುಂತಾದ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೂ ಇದು ಮದ್ದು. ಕಾಫಿ, ಟೀ ಬದಲಿಗೆ ದಿನನಿತ್ಯವೂ ಕಷಾಯವನ್ನು ಕುಡಿಯಬಹುದು.

ಬೆಳಗಿನ ಕಷಾಯ

ಬೇಕಾಗುವ ಸಾಮಗ್ರಿಗಳು: ಗೋಧಿ – 1 ಕಪ್, ರಾಗಿ – ಅರ್ಧ ಕಪ್, ಹೆಸರುಕಾಳು – ಕಾಲು ಕಪ್, ಜೀರಿಗೆ – 1 ಚಮಚ, ಕೊತ್ತಂಬರಿ ಬೀಜ – 2 ಚಮಚ, ಏಲಕ್ಕಿ – 2, ಕಾಳುಮೆಣಸು – 1 ಟೀ ಚಮಚ, ಲವಂಗ– 4

ತಯಾರಿಸುವ ವಿಧಾನ: ಬಾಣಲೆಗೆ ಗೋಧಿಯನ್ನು ಹಾಕಿ ಚಟಪಟ ಸದ್ದು ಬರುವವರೆಗೆ ಹುರಿಯಿರಿ. ರಾಗಿ, ಹೆಸರುಕಾಳನ್ನು ಕೆಂಬಣ್ಣ ಬರುವವರೆಗೆ ಹುರಿದುಕೊಳ್ಳಿ. ಕೊತ್ತಂಬರಿ, ಜೀರಿಗೆ, ಏಲಕ್ಕಿ, ಲವಂಗ, ಕಾಳುಮೆಣಸನ್ನು ಒಟ್ಟಿಗೆ ಬಾಣಲೆಗೆ ಹಾಕಿ ಪರಿಮಳ ಬರುವವರೆಗೆ ಹುರಿಯಿರಿ. ಹುರಿದ ಪದಾರ್ಥಗಳನ್ನು ಆರಲು ಬಿಡಿ. ನಂತರ ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಈ ಪುಡಿಯನ್ನು ಗಾಳಿಯಾಡದ ಡಬ್ಬಿಯಲ್ಲಿಟ್ಟರೆ 6 ತಿಂಗಳ ಕಾಲ ಉಪಯೋಗಿಸಬಹುದು.

ಕಷಾಯ ತಯಾರಿಸುವ ವಿಧಾನ: ಪಾತ್ರೆಗೆ 2 ಕಪ್ ನೀರು, 2 ರಿಂದ 3 ಟೇಬಲ್ ಚಮಚ ಬೆಲ್ಲ ಹಾಗೂ 2 ಟೇಬಲ್ ಚಮಚ ಕಷಾಯದ ಪುಡಿ ಸೇರಿಸಿ. ಸಣ್ಣ ಉರಿಯಲ್ಲಿ 10 ನಿಮಿಷ ಕುದಿಸಿ. ಕುದಿ ಬಂದ ನಂತರ 1 ಕಪ್ ಹಾಲು ಹಾಕಿ. ಒಂದು ಕುದಿ ಬರಲಿ. ನಂತರ ಕಷಾಯವನ್ನು ಸೋಸಿಕೊಳ್ಳಿ. ಆರೋಗ್ಯಕರವಾದ ಕಷಾಯವನ್ನು ತಯಾರಿಸಿ ದಿನವೂ ಸವಿಯಬಹುದು.

ಪ್ರಜಾವಾಣಿ ನೋಡಿಯೊ — ರೆಸಿಪಿಗಳ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಸಾಲೆ ಕಷಾಯ



ಬೇಕಾಗುವ ಸಾಮಗ್ರಿಗಳು: ಬಜೆ – 1 ಇಂಚು, ಜೇಷ್ಠಮಧು – 1 ಇಂಚು, ಜಾಯಿಕಾಯಿ – ಅರ್ಧ, ಅರಿಸಿನ ಕೊಂಬು – 2 ಇಂಚು, ಒಣಶುಂಠಿ – 2 ಇಂಚು, ಜೀರಿಗೆ – ಕಾಲು ಕಪ್, ಕೊತ್ತಂಬರಿ ಬೀಜ – ಅರ್ಧ ಕಪ್, ಕಾಳುಮೆಣಸು – ಕಾಲು ಕಪ್, ಸೋಂಪು – ಕಾಲು ಕಪ್, ಮೆಂತ್ಯ – 1 ಟೇಬಲ್ ಚಮಚ, ಲವಂಗ 10 ರಿಂದ 15, ಏಲಕ್ಕಿ ಸಿಪ್ಪೆ – 20, ಏಲಕ್ಕಿ – 4

ತಯಾರಿಸುವ ವಿಧಾನ: ಕುಟ್ಟಾಣಿಯಲ್ಲಿ ಅರಿಸಿನ ಕೊಂಬು, ಶುಂಠಿ, ಬಜೆ, ಜೇಷ್ಠಮಧು, ಜಾಯಿಕಾಯಿ ಹಾಕಿ ಕುಟ್ಟಿ ಪುಡಿ ಮಾಡಿಕೊಳ್ಳಿ. ನಂತರ ಮಿಕ್ಸಿಗೆ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬಾಣಲೆಗೆ ಕೊತ್ತಂಬರಿ, ಜೀರಿಗೆ, ಕಾಳುಮೆಣಸು, ಸೋಂಪು, ಮೆಂತ್ಯೆ, ಏಲಕ್ಕಿ ಸಿಪ್ಪೆ, ಲವಂಗ, ಏಲಕ್ಕಿಯನ್ನು ಹಾಕಿ ಸಣ್ಣ ಉರಿಯಲ್ಲಿ ಪರಿಮಳ ಬರುವವರೆಗೆ ಹುರಿಯಿರಿ. ಇದನ್ನು ಆರಲು ಹಾಕಿ. ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಮೊದಲು ಪುಡಿ ಮಾಡಿಕೊಂಡ ಪದಾರ್ಥಗಳೊಂದಿಗೆ ಸೇರಿಸಿ.

ಕಷಾಯ ತಯಾರಿಸುವ ವಿಧಾನ: 1 ಕಪ್ ನೀರನ್ನು ಬಿಸಿ ಮಾಡಿಕೊಳ್ಳಿ. 1 ಟೇಬಲ್ ಚಮಚ ಕಷಾಯ ಪುಡಿಯನ್ನು ಹಾಕಿ. ಕಾಲು ಟೀ ಚಮಚ ಅರಿಸಿನ ಪುಡಿಯನ್ನು ಹಾಕಿ. 1 ಇಂಚು ಹಸಿಶುಂಠಿಯನ್ನು ಜಜ್ಜಿ ಹಾಕಿ. ಬೆಲ್ಲ ನಿಮ್ಮ ಸಿಹಿಗೆ ಅನುಗುಣವಾಗಿ ಹಾಕಿ. ಸಣ್ಣ ಉರಿಯಲ್ಲಿ ಅರ್ಧ ಕಪ್ ಬರುವವರೆಗೆ ಕುದಿಸಿ. ಮುಕ್ಕಾಲು ಕಪ್ ಹಾಲು ಹಾಕಿ. ಒಂದು ಕುದಿ ಬರುವವರೆಗೆ ಕುದಿಸಿ ಒಲೆಯಿಂದ ಇಳಿಸಿ ಸೋಸಿಕೊಳ್ಳಿ. ಆರೋಗ್ಯಕರವಾದ ಕಷಾಯವನ್ನು ಸವಿಯಿರಿ.

ಕಾಳುಮೆಣಸಿನ ಕಷಾಯ



ಬೇಕಾಗುವ ಸಾಮಗ್ರಿಗಳು: ಕಾಳುಮೆಣಸು – 30, ಬೆಳ್ಳುಳ್ಳಿ ಎಸಳುಗಳು – 5 ರಿಂದ 8, ಈರುಳ್ಳಿ – 1 ಚಿಕ್ಕದಾಗಿ ಕತ್ತರಿಸಿಕೊಳ್ಳಿ, ಶುಂಠಿ – 2 ಇಂಚು, ಅರಿಸಿನಪುಡಿ – ಅರ್ಧ ಟೀ ಚಮಚ, ಲವಂಗ – 4 ರಿಂದ 6, ಜೇಷ್ಠಮಧು – 1 ಇಂಚು, ಕೊತ್ತಂಬರಿ ಬೀಜ – 2 ಟೀ ಚಮಚ, ಬೆಲ್ಲದ ಪುಡಿ – 2 ಟೇಬಲ್ ಚಮಚ, ನೀರು – 2 ಲೀಟರ್.

ತಯಾರಿಸುವ ವಿಧಾನ: ಮಿಕ್ಸಿಯಲ್ಲಿ ಕೊತ್ತಂಬರಿ, ಬೆಳ್ಳುಳ್ಳಿ, ಶುಂಠಿ, ಜೇಷ್ಠಮಧು, ಲವಂಗ, ಈರುಳ್ಳಿ, ಕಾಳುಮೆಣಸು ಹಾಕಿ ತರಿತರಿಯಾಗಿ ಪುಡಿ ಮಾಡಿಕೊಳ್ಳಿ. ಪಾತ್ರೆಗೆ ನೀರನ್ನು ಹಾಕಿ ಬಿಸಿ ಮಾಡಿಕೊಳ್ಳಿ. ರುಬ್ಬಿಕೊಂಡ ಮಿಶ್ರಣಕ್ಕೆ ಅರಿಸಿನ, ಬೆಲ್ಲವನ್ನು ಹಾಕಿ. ಮುಚ್ಚಳವನ್ನು ಕುದಿ ಬರುವವರೆಗೆ ಮುಚ್ಚಿ. ನಂತರ ಮುಚ್ಚಳವನ್ನು ತೆಗೆದು ಒಂದು ಲೀಟರ್ ಕಷಾಯ ಕಾಲು ಭಾಗ ಬಂದಾಗ ಒಲೆಯನ್ನು ಆರಿಸಿ. ಸೋಸಿಕೊಂಡು ಬಿಸಿ ಇರುವಾಗಲೇ ಕುಡಿಯಿರಿ.

ಅಡುಗೆ ಮನೆಯೂ ವ್ಯಾಯಾಮ ಶಾಲೆಯೂ



ಸಾಂದರ್ಭಿಕ ಚಿತ್ರ

ಸುಕೃತ ಎಸ್.

ಗೃಹಿಣಿಯರಿಗೆ ಅಡುಗೆ ಮನೆ ಎಂಬುದು ಅಕ್ಷರಶಃ ಮನೆಯೇ ಎಂಬಂತಾಗಿ ಹೋಗಿದೆ. ಪ್ರತಿದಿನವೂ ಬೆಳಿಗ್ಗೆ ತಿಂಡಿಯಿಂದ ಶುರು ಆಗುವ ಅಡುಗೆ ಮನೆ ನಂಟು ರಾತ್ರಿ ಹಾಲುಹೆಪ್ಪು ಹಾಕುವಲ್ಲಿಗೆ ಮುಗಿಯುತ್ತದೆ. ಈ ಎಲ್ಲದರ ಮಧ್ಯೆ ಜಿಮ್, ವ್ಯಾಯಾಮಕ್ಕಾಗಿಯೇ ದಿನದ ಒಂದು ತಾಸು ವ್ಯಯಿಸುವುದು ಎಂದರೆ ಹಲವು ಗೃಹಿಣಿಯರಿಗೆ ಕಷ್ಟಸಾಧ್ಯ. ಹಾಗಾದರೆ, ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಮಾರ್ಗ ಯಾವುದು? ಒಂದು ವೇಳೆ ಅಡುಗೆ ಮನೆಯೇ ಜಿಮ್ಮಾದರೆ...

ಬೆಂಗಳೂರಿನ ಫಿಟ್‌ನೆಸ್ ತರಬೇತುದಾರ ಶೀತಲ್ ಕಿರಣ್ ಅವರು, ಅಡುಗೆ ಮನೆಯಲ್ಲಿಯೇ ಸುಲಭವಾಗಿ, ಅಡುಗೆ ಮನೆಯ ವಸ್ತುಗಳನ್ನೇ ಉಪಯೋಗ ಮಾಡಿ, ಹೇಗೆಲ್ಲಾ ವ್ಯಾಯಾಮ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇದರ ವಿಡಿಯೊಗಳು ಯೂಟ್ಯೂಬ್‌ನಲ್ಲಿ ಲಭ್ಯ ಇವೆ.

‘ಹಿಂದೆಲ್ಲಾ ಅಡುಗೆ ಮನೆಯ ವಿನ್ಯಾಸವು ಬಗ್ಗಿ, ಎದ್ದು, ಕೂತು ಕೆಲಸ ಮಾಡುವಂತೆ ಇರುತ್ತಿತ್ತು. ಆದರೆ, ಈಗ ಎಲ್ಲವನ್ನೂ ನಿಂತುಕೊಂಡೇ ಮಾಡುತ್ತೇವೆ. ಇದರಿಂದ ಬೆನ್ನು ನೋವು, ಹಿಮ್ಮಡಿ ನೋವು, ಮಂಡಿ ನೋವು ಬರುತ್ತದೆ. ಹೆಚ್ಚಿನ ಮನೆಗಳಲ್ಲಿ ಅಡುಗೆ ಮಾಡುವ ಕಟ್ಟೆಗಳ ಎತ್ತರ ಕಡಿಮೆ ಇರುತ್ತವೆ. ಅದರ ಮೇಲೆ ತರಕಾರಿ ಹೆಚ್ಚುವುದು, ಹೆಚ್ಚು ಹೊತ್ತು ನಿಂತು ಬೇಯಿಸುವುದು, ಕೈಯಾಡಿಸುವುದು ಮಾಡುವುದರಿಂದ ಕುತ್ತಿಗೆ ನೋವು, ಭುಜ ನೋವು ಕಾಣಿಸಿಕೊಳ್ಳುತ್ತದೆ’ ಎನ್ನುತ್ತಾರೆ ಶೀತಲ್ ಕಿರಣ್ ಅವರು.

ಅಡುಗೆ ಮಾಡುತ್ತಲೇ ಕೆಲವು ವ್ಯಾಯಾಮ ಮಾಡುವುದರಿಂದ ಈ ಎಲ್ಲಾ ನೋವುಗಳ ನಿವಾರಣೆ ಆಗುತ್ತದೆ. ಲಟ್ಟಣಿಗೆ, ಸಿಂಕ್ ಮುಂದೆ ಹಾಕಿರುವ ಮ್ಯಾಟ್, ಗೋಡೆ ಇವುಗಳನ್ನೇ ಪರಿಕರಗಳನ್ನಾಗಿ ಬಳಸಿ ವ್ಯಾಯಾಮ ಮಾಡುವುದು ಹೇಗೆ ಎಂದು ಅವರು ವಿವರಿಸುತ್ತಾರೆ.

• ಗೋಡೆಗಿಂತ ಒಂದು ತೋಳಿನ ಅಂತರದಲ್ಲಿ ನಿಲ್ಲುವುದು. ತೋರು ಬೆರಳು ಮತ್ತು ಮಧ್ಯದ ಬೆರಳನ್ನು ನಡಿಗೆ ರೀತಿಯಲ್ಲಿ ಗೋಡೆಯ ಮೇಲ್ಮುಖವಾಗಿ ಚಲಿಸುತ್ತಾ ಹೋಗುವುದು. ಒಂದು ದೂರದವರೆಗೆ ಭುಜ ನೋಯಲು ಶುರು ಆಗುತ್ತದೆ. ನಂತರ ಬೆರಳುಗಳನ್ನು ನಿಧಾನಕ್ಕೆ ಇಳಿಸುತ್ತಾ ಬರುವುದು. ಇದರಿಂದ ಫ್ರೋಝನ್ ಶೋಲ್ಡರ್ ಸಮಸ್ಯೆ ಕೂಡ ನಿವಾರಿಸಿಕೊಳ್ಳಬಹುದು.

• ನಿಂತೇ ಇರುವುದರಿಂದ ರಕ್ತ ಚಲನೆಗೆ ಪೆಟ್ಟು ಬೀಳುತ್ತದೆ. ಪಾತ್ರೆ ತೊಳೆಯುವಾಗ, ಅಡುಗೆ ಮಾಡುವಾಗ ಅಡುಗೆ ಮನೆಯಲ್ಲಿನ ಮ್ಯಾಟ್‌ಗೆ ಕಾಲನ್ನು ಉಜ್ಜುವುದರಿಂದ ರಕ್ತ ಸಂಚಾರ ಸರಾಗವಾಗುತ್ತದೆ. ಮ್ಯಾಟ್ ಕೊಳ್ಳುವಾಗ ನುಣ್ಣಗೆ ಇರುವುದನ್ನು ಖರೀದಿಸಬಾರದು. ಒರಟಾದದ್ದನ್ನು ಅಥವಾ ಪಾದಕ್ಕೆ ಲಘುವಾಗಿ ಒತ್ತುವ ಮ್ಯಾಟ್‌ಗಳನ್ನು ಖರೀದಿಸಿ. ಇದು ಅಕ್ಯುಪಂಕ್ಚರ್ ಅನುಭವ ನೀಡುತ್ತದೆ.

• ಲಟ್ಟಣಿಗೆಯನ್ನು ತಲೆಯ ಮೇಲೆ ವೃತ್ತಾಕಾರದಲ್ಲಿ ತಿರುಗಿಸುವುದರಿಂದ ಕೂಡ ಭುಜಕ್ಕೆ ವ್ಯಾಯಾಮ ಆಗುತ್ತದೆ. ಊಟಕ್ಕೆ ಕೂರುವ ಮಣೆಯ ಮೇಲೆ ಮೊದಲು ಬಲಗಾಲು ಇಡುವುದು, ನಂತರ ಎಡಗಾಲು ಇಡುವುದು. ನಂತರ ಎಡಗಾಲು ಕೆಳಗಿಡುವುದು ಆಮೇಲೆ ಬಲಗಾಲು ಕೆಳಗಿಡುವುದು. ಇದನ್ನು ಲಯಬದ್ಧವಾಗಿ ಮಾಡುವುದು ಸಹ ಉಪಯುಕ್ತ. 3–15 ಕೌಂಟ್‌ವರಗೆ 6–7 ಸೆಟ್ ಮಾಡಬಹುದು. ಒಂದು ಸೆಟ್‌ನಿಂದ ಪ್ರಾರಂಭ ಮಾಡಿ, ನಿಧಾನವಾಗಿ ಸೆಟ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳಬಹುದು. ಇದು ಏರೋಬಿಕ್ಸ್ ವ್ಯಾಯಾಮದ ಅನುಭವ ನೀಡುತ್ತದೆ.

• ಅಡುಗೆ ಮನೆಯಲ್ಲೇ ತುಂಬಾ ಹೊತ್ತು ಇರುವುದರಿಂದ ಬೇಗ ಬೇಗ ಅಡುಗೆ ಮಾಡಿ ಮುಗಿಸಬೇಕು ಎನ್ನುವಂಥ ಒತ್ತಡ ಗೃಹಿಣಿಯರನ್ನು ಕಾಡುತ್ತದೆ. ಈ ಒತ್ತಡ ನಿವಾರಣೆಗೆ ಸುಲಭ ಉಪಾಯವಿದೆ. ಒತ್ತಡದಲ್ಲಿ ಕೆಲಸ ಮಾಡಿ, ಮುಗಿಸಿದ ಬಳಿಕ ಒಂದು ಐದು ನಿಮಿಷ ಓಂಕಾರ ಉಚ್ಚರಣೆ ಮಾಡುವುದು, ಇಲ್ಲವೇ ನಿಧಾನವಾಗಿ ಉಸಿರಾಡುವುದು ಮಾಡಿದರೆ, ಒತ್ತಡ ನಿವಾರಣೆ ಆಗುತ್ತದೆ.

‘ಎಷ್ಟೊ ಬಾರಿ ಮನೆ ಕಟ್ಟಿಸುವ ಸಂದರ್ಭದಲ್ಲಿ ಮಹಿಳೆಯರ ದೃಷ್ಟಿಯಿಂದ ಅಡುಗೆ ಮನೆ ವಿನ್ಯಾಸವನ್ನು ಯೋಚಿಸುವುದಿಲ್ಲ. ಅವರೇ ಹೆಚ್ಚು ಹೊತ್ತು ಅಲ್ಲಿ ಕೆಲಸ ಮಾಡುವುದರಿಂದ ಅವರ ಅನುಕೂಲ, ಅವರ ಎತ್ತರಕ್ಕೆ ಸಮನಾಗಿ ಅಡುಗೆ ಕಟ್ಟೆ ನಿರ್ಮಿಸಬೇಕು. ಡೈನಿಂಗ್ ಟೇಬಲ್ ಕೂಡ ಅಲ್ಲೇ ಇರುವುದರಿಂದ ತರಕಾರಿ ಹೆಚ್ಚುವಾಗ ಕೂತು ಹೆಚ್ಚಬಹುದು. ಇದರಿಂದ ನಿಂತೇ ಇರುವುದು, ಬಾಗಿ ಕೆಲಸ ಮಾಡುವುದು ತಪ್ಪುತ್ತದೆ’ ಎನ್ನುತ್ತಾರೆ ಶೀತಲ್ ಕಿರಣ್. ❖



ಶೀತಲ್ ಕಿರಣ್ ಅವರು ಮೂಲತಃ ಬೆಂಗಳೂರಿನವರು. ಸುಮಾರು 15 ವರ್ಷಗಳಿಂದ ದೈಹಿಕ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಫಿಟ್‌ನೆಸ್ ತರಬೇತುದಾರರಾಗಿದ್ದು, ಯೋಗವನ್ನೂ ಹೇಳಿಕೊಡುತ್ತಾರೆ.

ಕ್ರಿಕೆಟ್, ಕಬಡ್ಡಿ, ಕುಸ್ತಿಗಳ ಹಲವು ಕ್ರೀಡಾಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ‘ಟಾಪ್ ಸ್ಪೋರ್ಟ್ಸ್ ಕೋಚ್ ಆಫ್ ಕರ್ನಾಟಕ–2018’ ಪ್ರಶಸ್ತಿಯನ್ನು ಸಹ ಪಡೆದುಕೊಂಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮ್ಮ ಸಮಯವೇ ನಿಮ್ಮ ಬದುಕು. ಹೀಗಾಗಿ, ನೀವು ಯಾರಿಗಾದರೂ ನೀಡಬಹುದಾದ ಮಹತ್ವದ ಉಡುಗೊರೆಯೆಂದರೆ ಅದು ನಿಮ್ಮ ಸಮಯವೇ ಆಗಿರುತ್ತದೆ. -ರಿಕ್ ವಾರನ್

ಎಲ್ಲರೂ ನಿಯಮ ಪಾಲಿಸಬೇಕು ನಿಯಮವು ಸಂವಿಧಾನಕ್ಕೆ ತಕ್ಕಂತಿರಬೇಕು

ಕೇಂದ್ರ ಸರ್ಕಾರ ರೂಪಿಸಿರುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳ ಪರವಾಗಿ ನಡೆದ ಅಭಿಯಾನದ ನೇತೃತ್ವ ವಹಿಸಿದ್ದ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಅವರು ಸಾಮಾಜಿಕ ಜಾಲತಾಣ ಕಂಪನಿಗಳಿಗೆ ಎಚ್ಚರಿಕೆಯೊಂದನ್ನು ನೀಡಿದ್ದಾರೆ. ಈ ಕಂಪನಿಗಳು ಭಾರತದಲ್ಲಿ ಕೆಲಸ ಮುಂದುವರಿಸಬೇಕು ಎಂದಾದಲ್ಲಿ ಅವು ಭಾರತದ ಕಾನೂನುಗಳನ್ನು ಪಾಲಿಸಬೇಕು ಎಂದು ಸಚಿವ ಪ್ರಸಾದ್ ಹೇಳಿದ್ದಾರೆ. ಹೊಸ ಐ.ಟಿ. ನಿಯಮಗಳು ಹಿಂದಿನ ತಿಂಗಳು ಜಾರಿಗೆ ಬಂದಿವೆ. ಈ ನಿಯಮಗಳಲ್ಲಿ ಇರುವ ಕೆಲವು ಅಂಶಗಳ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ಸಾಮಾಜಿಕ ಜಾಲತಾಣ ಕಂಪನಿಗಳ ನಡುವೆ ಹಗ್ಗಜಗ್ಗಾಟ ನಡೆದಿದೆ. ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುವ ಅನಿಸಿಕೆ, ಅಭಿಪ್ರಾಯಗಳನ್ನು, ಡಿಜಿಟಲ್ ಸುದ್ದಿ ಮಾಧ್ಯಮಗಳನ್ನು ನಿಯಂತ್ರಣಕ್ಕೆ ತರುವ ಅವಕಾಶ ಈ ನಿಯಮಗಳ ಅಡಿ ಇದೆ. ಸಾಮಾಜಿಕ ಜಾಲತಾಣಗಳನ್ನು ಹಾಗೂ ಡಿಜಿಟಲ್ ಸುದ್ದಿ ಮಾಧ್ಯಮಗಳನ್ನು ಸರ್ಕಾರದ ಮೇಲ್ವಿಚಾರಣೆಯ ಅಡಿ ತರುವ ಉದ್ದೇಶ ಇದು. ಈ ಬಗೆಯ ನಿಯಂತ್ರಣ ಹಾಗೂ ಮೇಲ್ವಿಚಾರಣೆ ವಿಚಾರದಲ್ಲಿ ಇರುವ ಪ್ರಮುಖ ತಕರಾರು ಇವು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತವೆ ಎಂಬುದು. ಭಾರತದಲ್ಲಿ ಜನಪ್ರಿಯತೆ ಪಡೆದುಕೊಂಡಿರುವ ಸಾಮಾಜಿಕ ಜಾಲತಾಣ ಕಂಪನಿಗಳಲ್ಲಿ ಹೆಚ್ಚಿನವು ವಿದೇಶಿ ಮೂಲದವಾಗಿದ್ದರೂ, ಅವುಗಳನ್ನು ಬಳಸಿಕೊಂಡು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿರುವವರು ಭಾರತದ ಪ್ರಜೆಗಳು. ಅಂದರೆ, ಈ ಕಂಪನಿಗಳು ನಡೆಸುವ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ವಸ್ತು-ವಿಷಯಗಳನ್ನು ನಿಯಂತ್ರಿಸುವುದು ದೇಶದ ಪ್ರಜೆಗಳ ಹಕ್ಕುಗಳಿಗೆ ಅಡ್ಡಿ ಉಂಟುಮಾಡುವಂಥದ್ದಾಗುತ್ತದೆ.



ಕಂಪನಿಗಳು ಭಾರತದ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು. ಹಾಗೆಯೇ, ಕಂಪನಿಗಳು ಪಾಲಿಸಬೇಕಿರುವ ಕಾನೂನುಗಳನ್ನು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ರೂಪಿಸಬೇಕಾಗುತ್ತದೆ

‘ಅಭಿವ್ಯಕ್ತಿ ಸ್ವಾತಂತ್ರ್ಯ’ ಹಾಗೂ ‘ಪ್ರಜಾತಂತ್ರ’ದ ಬಗ್ಗೆ ಭಾರತಕ್ಕೆ ಪಾಠ ಹೇಳಿಕೊಡಲು ಬರಬೇಡಿ ಎಂದು ಸಚಿವರು ಸಾಮಾಜಿಕ ಜಾಲತಾಣ ಕಂಪನಿಗಳಿಗೆ ತಾಕೀತು ಮಾಡಿದ್ದಾರೆ. ಕಂಪನಿಗಳು ಭಾರತದಲ್ಲಿ ತಮ್ಮ ವಾಣಿಜ್ಯ ವಹಿವಾಟು ಮುಂದುವರಿಸಬೇಕು ಎಂದಾದರೆ ‘ಭಾರತದ ಸಂವಿಧಾನ ಹಾಗೂ ಭಾರತದ ಕಾನೂನುಗಳನ್ನು’ ಪಾಲಿಸಬೇಕು ಎಂದೂ ಸಚಿವರು ಹೇಳಿದ್ದಾರೆ. ನಿಜ, ವಿದೇಶಿ ಕಂಪನಿಗಳು ಭಾರತದ ಕಾನೂನುಗಳನ್ನು ಪಾಲಿಸಲೇಬೇಕು. ಅವು ಭಾರತೀಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಅಥವಾ ಪ್ರಜಾತಂತ್ರದ ಬಗ್ಗೆ ಬೋಧನೆ ಮಾಡಬೇಕಾದ ಅಗತ್ಯ ಇಲ್ಲ. ಆದರೆ, ಟೂಲ್‌ಕಿಟ್ ಬಗ್ಗೆ ಅಥವಾ ಜನರ ಮೇಲೆ ದಾಳಿ ನಡೆದಾಗ ಟ್ವೀಟ್ ಮಾಡಿದ್ದಕ್ಕೆ, ಕೆಲವು ಘಟನೆಗಳ ಬಗ್ಗೆ ವರದಿ ಮಾಡಿದ್ದಕ್ಕೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಾದಾಗ ದೇಶದ ಜನ ಕಳವಳಗೊಳ್ಳಬೇಕಾಗುತ್ತದೆ. ಕಂಪನಿಗಳು ಭಾರತದ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು. ಹಾಗೆಯೇ, ಕಂಪನಿಗಳು ಪಾಲಿಸಬೇಕಿರುವ ಕಾನೂನುಗಳನ್ನು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ರೂಪಿಸಬೇಕಾಗುತ್ತದೆ. ಹಾಗೆ ರೂಪಿಸದೆ ಇದ್ದರೆ, ಅವುಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸಂದೇಶದ ಮೂಲ ಎಲ್ಲಿದೆ ಎಂಬುದನ್ನು ಬಹಿರಂಗಪಡಿಸಬೇಕಾಗುತ್ತದೆ ಎನ್ನುವ ಬೇಡಿಕೆಯು, ಸಂವಿಧಾನ ಖಾತರಿಪಡಿಸಿರುವ ಖಾಸಗಿತನದ ಹಕ್ಕಿನ ಉಲ್ಲಂಘನೆ ಎಂದು ಹೇಳಲಾಗುತ್ತಿದೆ. ಐ.ಟಿ. ನಿಯಮಗಳು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವ್ಯಾಪ್ತಿಯನ್ನೂ ಮೀರಿದ್ದಾಗಿವೆ, ಈ ನಿಯಮಗಳಿಗೆ ಶಾಸನಾತ್ಮಕ ಬೆಂಬಲ ಇಲ್ಲ ಎಂಬ ಮಾತುಗಳು ಇವೆ. ಇಂತಹ ಕೆಲವು ವಿಚಾರಗಳು ಈಗ ನ್ಯಾಯಾಲಯದ ಅಂಗಳದಲ್ಲಿ ಇವೆ. ನ್ಯಾಯಾಲಯದ ತೀರ್ಮಾನ ಪ್ರಕಟ ಆಗುವವರೆಗೆ ಸಚಿವರು ಕಾಯಬೇಕು.

‘ಭಾರತದಲ್ಲಿ ಚುನಾವಣೆಗಳು ಮುಕ್ತವಾಗಿಯೂ ನ್ಯಾಯಸಮ್ಮತವಾಗಿಯೂ ನಡೆಯುತ್ತವೆ. ಇಲ್ಲಿ ಸ್ವತಂತ್ರವಾದ ನ್ಯಾಯಾಂಗ ಇದೆ. ಮಾಧ್ಯಮಗಳು ಹಾಗೂ ನಾಗರಿಕ ಸಮಾಜ ಇಲ್ಲಿ ಸ್ವತಂತ್ರವಾಗಿ ಕೆಲಸ ಮಾಡುತ್ತಿವೆ’ ಎಂದು ಸಚಿವರು ಹೇಳಿದ್ದಾರೆ. ಇಂತಹ ಮಾತುಗಳ ಆಶಯಕ್ಕೆ ವಿರುದ್ಧವಾಗಿರುವ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಆಗುವುದಿಲ್ಲ. ಅವರು ಆಡಿರುವ ಮಾತುಗಳಲ್ಲಿ ಸತ್ಯವೆಷ್ಟಿದೆ, ಸುಳ್ಳು ಎಷ್ಟಿದೆ ಎಂಬುದು ಈಗ ಹಲವೆಡೆ ಪ್ರಶ್ನೆಗೆ ಒಳಗಾಗಿದೆ. ಹೊಸ ಐ.ಟಿ. ನಿಯಮಗಳು ಸಾಮಾಜಿಕ ಜಾಲತಾಣಗಳನ್ನು ‘ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಮಾತ್ರ ಅನ್ವಯಿಸುತ್ತವೆ’ ಎಂದು ಸಚಿವರು ಹೇಳಿರುವ ಮಾತು ವಿಶ್ವಾಸಾರ್ಹವಾಗಿಲ್ಲ. ಅವು ಕೊನೆಯಲ್ಲಿ ಸರ್ಕಾರವು ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ದಾರಿ ಮಾಡಿಕೊಡಬಹುದು. ಕೇಂದ್ರ ಸರ್ಕಾರವು ತನ್ನ ಕೆಲವು ಕ್ರಮಗಳಿಗೆ ವಿರುದ್ಧವಾಗಿ ಸಾಮಾಜಿಕ ಜಾಲತಾಣಗಳಲ್ಲಿ ತೀಕ್ಷ್ಣ ಅಭಿಪ್ರಾಯಗಳು ವ್ಯಕ್ತವಾಗುವುದು ಆರಂಭವಾದ ನಂತರ ಈ ನಿಯಮಗಳನ್ನು ಜಾರಿಗೆ ತಂದಿದೆ, ನಿಯಮಗಳನ್ನು ಕಂಪನಿಗಳು ಪಾಲಿಸಲೇಬೇಕು ಎಂದು ಖಡಾಖಂಡಿತವಾಗಿ ಹೇಳುತ್ತಿದೆ. ಪೌರತ್ವ ತಿದ್ದುಪಡಿ ಕಾಯ್ದೆ, ಕೃಷಿಗೆ ಸಂಬಂಧಿಸಿದ ಮೂರು ಕಾನೂನುಗಳು, ಕಾಶ್ಮೀರ ಸಮಸ್ಯೆಯನ್ನು ಕೇಂದ್ರವು ನಿಭಾಯಿಸಿದ ಬಗೆ, ದೇಶದ ಅರ್ಥ ವ್ಯವಸ್ಥೆಯಲ್ಲಿ ಕಂಡುಬಂದಿರುವ ಕುಸಿತ... ಇಂಥವುಗಳ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಜನರ ಅಭಿಪ್ರಾಯವು ಜಗತ್ತಿನ ಹಲವೆಡೆ ಅನುರಣಿಸುತ್ತಿದೆ. ಇದು ಕೇಂದ್ರ ಸರ್ಕಾರಕ್ಕೆ ರುಚಿಸದಂತೆ ಆಯಿತೇ? ಭಾರತೀಯ ಸಮಾಜದ ನಿರ್ದಿಷ್ಟ ಸಮುದಾಯವೊಂದನ್ನು ಉದ್ದೇಶಿಸಿ ದ್ವೇಷ ಹರಡುವ ವಸ್ತು-ವಿಷಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹೇರಳವಾಗಿ ಹರಿದಾಡುತ್ತವೆ. ಇವು ದೇಶದ ಸಾಮರಸ್ಯ ಕದಡುವ ಶಕ್ತಿ ಹೊಂದಿವೆ. ಆದರೆ, ಇಂತಹ ಸಂದೇಶಗಳ ವಿಚಾರದಲ್ಲಿ ಕೇಂದ್ರದ ಸಚಿವರು ವೀರಾವೇಶದಿಂದ ಮಾತನಾಡಿದ ನಿದರ್ಶನಗಳು ನಗಣ್ಯ. ಇದು ಏನನ್ನು ಸೂಚಿಸುತ್ತದೆ? ಇಬ್ಬಂದಿತನವನ್ನೇ?

ದಿನದ ಟ್ವೀಟ್

ತುರ್ತುಪರಿಸ್ಥಿತಿ... ಅಂದು, ಇಂದು



ಘೋಷಿತ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಬಾಲಿವುಡ್ ಸೂಪರ್‌ಸ್ಟಾರ್‌ಗಳಾದ ದೇವಾನಂದ್, ಕಿಶೋರ್ ಕುಮಾರ್, ಮನೋಜ್ ಕುಮಾರ್, ರಾಜ್‌ಕುಮಾರ್ ಅವರಂಥವರು ಅದನ್ನು ಬಹಿರಂಗವಾಗಿ ವಿರೋಧಿಸಿದ್ದರು. ಈಗಿನ ಅಘೋಷಿತ ತುರ್ತು ಪರಿಸ್ಥಿತಿಯಲ್ಲಿ, ಬಾಲಿವುಡ್ ಸೂಪರ್‌ಸ್ಟಾರ್‌ಗಳು ಕನಿಷ್ಠಪಕ್ಷ ಏರುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಪ್ರತಿಕ್ರಿಯಿಸಲು ಸಹ ಹೆದರುತ್ತಾರೆ.

ಜಾಯ್ ದಾಸ್, ನಾಗರಿಕ

ಹೀಗಿರುವುದು ಏಕೆಂದರೆ...



ಇಂತಹ ಸ್ಥಿತಿ ಬಂದಿರುವುದು ಏಕೆಂದರೆ, ಜಗತ್ತಿನ ಎಲ್ಲೆಡೆಯೂ ಪ್ರಜಾಪ್ರಭುತ್ವದ ಸುಸ್ಥಿರತೆಯಲ್ಲಿ ವಿರೋಧ ಪಕ್ಷದ ಪಾತ್ರ ಮುಖ್ಯವಾಗಿರುತ್ತದೆ. ಆದರೆ ನಮ್ಮಲ್ಲಿ ಅಕ್ಷರಶಃ ವಿರೋಧ ಪಕ್ಷವಿಲ್ಲ. ಎಲ್ಲ ವಿರೋಧ ಪಕ್ಷಗಳೂ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿವೆ ಮತ್ತು ಅವುಗಳ ನಾಯಕರು ದುರ್ಬಲರಾಗಿದ್ದಾರೆ.

ರಮೇಶ್ ಕುಮಾರ್, ನಾಗರಿಕ

50 ವರ್ಷಗಳ ಹಿಂದೆ

ಶನಿವಾರ, 26-6-1971

● **ರಾಜಕಾರಣಿಗಳಿಗೆ ಸಿಮೆಂಟ್ ಸಂಸ್ಥೆ ಹಣ**

ನವದೆಹಲಿ, ಜೂನ್ 25– ಸ್ವತಂತ್ರ ಪಕ್ಷದ ನಾಯಕ ಸಿ. ರಾಜಗೋಪಾಲಾಚಾರಿಅವರನ್ನೊಳಗೊಂಡು ಅನೇಕ ಮಂದಿ ರಾಜಕೀಯ ನಾಯಕರುಗಳು 1966ರಲ್ಲಿ ಸಿಮೆಂಟ್ ವಿತರಣೆ ಮತ್ತು ಸಮನ್ವಯ ಸಂಸ್ಥೆಯಿಂದ ಹಣ ಪಡೆದಿದ್ದಾರೆ.

ಸಿ. ರಾಜಗೋಪಾಲಾಚಾರಿ ಅವರು ಸ್ವತಂತ್ರ ಪಕ್ಷಕ್ಕೆ ವಂತಿಗೆಯಾಗಿ ಈ ಸಂಸ್ಥೆಯಿಂದ 50 ಸಾವಿರ ರೂ.ಗಳನ್ನು ಪಡೆದಿದ್ದಾರೆ. ಒರಿಸ್ಸಾದ ಮಾಜಿ ಮುಖ್ಯ ಮಂತ್ರಿ ಆರ್.ಎನ್. ಸಿಂಗ್‌ದೇವ್ ಅವರು ಎರಡು ಲಕ್ಷ ರೂ.ಗಳನ್ನು ಪಡೆದಿದ್ದಾರೆಂದೂ ಕಂಪನಿ ವ್ಯವಹಾರಗಳ ಶಾಖೆ ಸಚಿವ ರಘುನಾಥ ರೆಡ್ಡಿಯವರು ಇಂದು ಲೋಕಸಭೆಯಲ್ಲಿ ನುಗ್ಗೇನಹಳ್ಳಿ ಶಿವಪ್ಪನವರಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಜನಸಂಘವು ನಾನಾದೇಶಮುಖ್ ಅವರ ಮುಖಾಂತರ 1,25,000 ರೂ.ಗಳನ್ನು ಹಾಗೂ ಜಗದೀಶ ಪ್ರಸಾದ್ ಮಾಥೂರ್ ಮೂಲಕ 1,25,000 ರೂ.ಗಳನ್ನು ಈ ಸಂಸ್ಥೆಯಿಂದ ಪಡೆದಿದೆ. ಬಲರಾಜ ಮಧೋಕ್, ಬಕ್ಷಿ ಗುಲಾಂ ಮಹಮದ್, ಎಚ್.ಕೆ. ಶಾಸ್ತ್ರಿ, ಸಾವಿತ್ರಿ ನಿಗಂ ಮೊದಲಾದ ರಾಜಕಾರಣಿಗಳು ಈ ಸಂಸ್ಥೆಯಿಂದ ಹಣ ಸ್ವೀಕರಿಸಿದ್ದಾರೆಂದು ಅವರು ಉತ್ತರದಲ್ಲಿ ತಿಳಿಸಿದ್ದಾರೆ.

● **‘ಬಾಂಗ್ಲಾ ದೇಶದ ಸಮಸ್ಯೆಗೆ ಭಾರತದಿಂದ ತನ್ನದೇ ಆದ ಕ್ರಮ’**

ನವದೆಹಲಿ, ಜೂನ್ 25– ಬಾಂಗ್ಲಾ ದೇಶದ ಸಮಸ್ಯೆಗೆ ಶೀಘ್ರವಾಗಿ ತೃಪ್ತಿಕರ ರಾಜಕೀಯ ಪರಿಹಾರ ಹುಡುಕದಿದ್ದರೆ ‘ತಾನಾಗಿಯೇ’ ಭಾರತ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಬಹುದೆಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್‌ರವರು ಇಂದು ಸಂಸತ್ತಿನ ಕಾಂಗ್ರೆಸ್ ಪಕ್ಷಕ್ಕೆ ತಿಳಿಸಿದರು.

ಶ್ರಮದ ಅಸಮ ಹಂಚಿಕೆಯನ್ನೇ ಸಮಯದ ಮೌಲ್ಯವಾಗಿಸುವ ನವ ಗುಲಾಮಗಿರಿ

ದಿಕ್ಸೂಚಿಯೇ ಇಲ್ಲದ ತಕ್ಕಡಿ...



ವಿಶ್ಲೇಷಣೆ

ಸಬಿತಾ ಬನ್ನಾಡಿ

ಮಾನವ ಇತಿಹಾಸದಲ್ಲಿ ಮನುಷ್ಯರನ್ನು ಮನುಷ್ಯರೇ ಗುಲಾಮರನ್ನಾಗಿಸಿ ಆಳುವ ಕಾಲವೊಂದಿತ್ತು. ಅದರಿಂದ ಹೊರಬರಲು ಎಷ್ಟೆಲ್ಲಾ ಕ್ರಾಂತಿಗಳು ಆಗಬೇಕಾಯಿತು. ಇಂದು ನಾವು ಇನ್ನೊಂದು ತಿರುವಿನಲ್ಲಿ ನಿಂತಿದ್ದೇವೆ. 1861ರಲ್ಲಿ ಬಂದ ಲಿಂಡಾ ಬ್ರೆಂಟ್‌ಳ ‘ದ ಇನ್ಸಿಡೆಂಟ್ಸ್ ಇನ್ ದ ಲೈಫ್ ಆಫ್ ಅ ಸ್ಲೇವ್‌ಗರ್ಲ್’ ಮೊತ್ತಮೊದಲ ಮಹಿಳಾ ಆತ್ಮಕಥನ. ಅದರಲ್ಲಿ ಅವಳು ಗುಲಾಮಗಿರಿಯ ಒಳ ಹೊರಗಿನ ಹಿಂಸೆಗಳನ್ನು ಅನಾವರಣ ಮಾಡುತ್ತಾ ಹೋಗುತ್ತಾಳೆ.

ಆರನೇ ವಯಸ್ಸಿಗೇ ಗುಲಾಮಳಾದ ಅವಳು, ಹದಿಹರೆಯದಲ್ಲಿದ್ದಾಗ ತಂದೆಯ ಮರಣವಾರ್ತೆ ಬರುತ್ತದೆ. ಅಲ್ಲೇ ಹತ್ತಿರದಲ್ಲಿದ್ದರೂ ಮೇಲಿಂದ ಮೇಲೆ ಕೆಲಸ ಹೇಳಿ, ಅಲ್ಲಿಗವಳು ತಕ್ಷಣ ಹೋಗದಂತೆ ಮಾಡಲಾಗುತ್ತದೆ. ಆ ಕಾಲಗಳು ಸಂದು ಒಳ್ಳೆಯ ಕಾಲ ಬಂತೆಂಬ ನಿಟ್ಟುಸಿರಿಡುವಾಗಲೇ, ಮನುಷ್ಯನ ವಿರುದ್ಧ ಮನುಷ್ಯನನ್ನು ಸ್ಪರ್ಧಿಯಾಗಿಸಿ ಕಣ್ಣಿಗೆ ಕಾಣದ ಹೊಸ ಗುಲಾಮಗಿರಿಗೆ ತಳ್ಳುತ್ತಿದೆಯೇನೋ ಎಂಬ ಸಂಶಯ ಕಾಡುತ್ತಿದೆ. ಇಂದು 24 × 7 ಅವಿರತ ದುಡಿಮೆ ಎಂಬ ಪರಿಕಲ್ಪನೆಯಲ್ಲಿಯೂ ಅವಳಿಗಾದಂತೆ ಸ್ವಾತಂತ್ರ್ಯ ಮತ್ತು ವೈಯಕ್ತಿಕತೆಯ ನಾಶವಾಗತೊಡಗಿದೆ.


ಕೈಗಾರಿಕೀಕರಣದ ಜೊತೆ ಜೊತೆಗೇ ಈ ಪರಿಕಲ್ಪನೆ ಹುಟ್ಟಿರಬಹುದಾದರೂ, ಕಂಪ್ಯೂಟರ್ ಜೊತೆಗೆ ಇದೊಂದು ಮೌಲ್ಯವೇ ಆಗಿ ಪರಿವರ್ತನೆಯಾಯಿತು. ಕೈಗಾರಿಕೀಕರಣವು ಹಗಲು- ರಾತ್ರಿ ಪಾಳಿಯನ್ನು ಶುರು ಮಾಡಿತಾದರೂ, ಅದು ಇಬ್ಬರ ನಡುವೆ ಹಂಚಿಕೆಯಾಗಿ ಉದ್ಯೋಗ ಹೆಚ್ಚಿಸಿತು. ಆದರೆ ಮೂಲತಃ ಸೇವಾಕ್ಷೇತ್ರಕ್ಕಾಗಿ ಮಾತ್ರ ಹುಟ್ಟಿಕೊಂಡ 24 × 7 ಪರಿಕಲ್ಪನೆ ಕ್ರಮೇಣ ಮಾರುಕಟ್ಟೆಯನ್ನು ಆಕ್ರಮಣ ಮಾಡಿಕೊಳ್ಳಲು ದಾಳವಾಗಿಯೂ, ಬರಬರುತ್ತಾ ಉದ್ಯೋಗಿಗಳ ಜುಟ್ಟು ಹಿಡಿದು ದುಪ್ಪಟ್ಟು ಕೆಲಸ ಮಾಡಿಸಿಕೊಳ್ಳುವ ಸಾಧನವಾಗಿಯೂ ಬದಲಾಗಿದೆ.

ಇಂದು ಸರ್ಕಾರಿ, ಖಾಸಗಿ ಎಂಬ ವ್ಯತ್ಯಾಸವಿಲ್ಲದಂತೆ ಕೈಯಲ್ಲಿನ ಮೊಬೈಲ್‌ನಲ್ಲಿ ಇಂಟರ್‌ನೆಟ್ ಸದಾ ಆನ್‌ನಲ್ಲೇ ಇಡಬೇಕು. ಕ್ಷಣ ಕ್ಷಣವೂ ಆದೇಶ, ಮಾಹಿತಿಗೆ ಬೇಡಿಕೆ ಮತ್ತು ಅದೆಲ್ಲವೂ ತಕ್ಷಣವೇ ಸಲ್ಲಿಕೆಯಾಗಬೇಕೆಂಬ ಧಾವಂತ ಅಲ್ಲಿರುತ್ತದೆ. ಸರಿಯಾಗಿ ಗಮನಿಸಿದರೆ, ಅದರಲ್ಲಿ ಎಷ್ಟೋ ಕೆಲಸಗಳ ಅವಶ್ಯಕತೆಯೇ ಇರುವುದಿಲ್ಲ ಅಥವಾ ಇನ್ನೆಷ್ಟೋ ಕೆಲಸಗಳನ್ನು ಅವಸರವಿಲ್ಲದೆ, ಯೋಜಿತವಾಗಿ ಮಾಡುವುದಕ್ಕೂ ಸಾಧ್ಯ ಇರುತ್ತದೆ. ಆದರೆ ಒಂದೋ ನಾವು ಕೆಲಸ ಮಾಡುತ್ತಲೇ ಇದ್ದೇವೆ ಎಂಬ ಹುಸಿ ಸಂತೃಪ್ತಿ, ಇಲ್ಲವೇ ನಾವು ಕೆಲಸ ಮಾಡಿಸುತ್ತಲೇ ಇದ್ದೇವೆ ಎಂಬ ಅಹಂನ ತೃಪ್ತಿ ಇಲ್ಲಿ ಹೆಚ್ಚು ಕಾಣಿಸುತ್ತಿದೆ. ಆದರೆ ಇದು ಮನುಷ್ಯನ ಸಂತಸ ಮತ್ತು ಆರೋಗ್ಯವನ್ನು ನಾಶ ಮಾಡುತ್ತಿರುವುದನ್ನು ನಿರ್ಲಕ್ಷಿಸಲಾಗುತ್ತಿದೆ.

ಅದೊಂದು ಕಾಲ ಇತ್ತು. ರಾತ್ರಿ ಹತ್ತು ಗಂಟೆಗೆ ರೇಡಿಯೊ ಬಂದ್ ಆಗುತ್ತಿತ್ತು. ಮುಂದೆ ಬಂದ ಟಿ.ವಿ ಕೂಡ ಹತ್ತಕ್ಕೋ ಹನ್ನೊಂದಕ್ಕೋ ಆಫ್ ಆಗುತ್ತಿತ್ತು. ಅಂದರೆ ಅಲ್ಲಿಗೆ ದಣಿವಾರಿಸಿಕೊಳ್ಳಲು ಅಣಿಯಾಗಿ ಎಂಬ ಸಂದೇಶ ರವಾನೆಯಾಗುತ್ತಿತ್ತು. ಅಬ್ಬ! ಈಗ ಎಣಿಸಿಕೊಂಡರೆ ಅದು ಎಂತಹ ದೊಡ್ಡ ಶಾಂತಿಯ ಸಾಗರ ಅನ್ನಿಸುತ್ತಿದೆ. ಆಗೆಲ್ಲ, ಸಾರ್ವಜನಿಕ ಕಾರ್ಯಕ್ರಮಗಳೂ ಅತಿ ವಿರಳ. ಅಪರೂಪಕ್ಕೆ ಸಿಗುವ ಮೈಕ್‌ನ ಧ್ವನಿ ಕೇಳಲು ಜನ ಸಂಭ್ರಮ ಪಡುತ್ತಿದ್ದರು. ಇಂದು ಬೆಳಗ್ಗಿನ ಕಸದ ವಾಹನದಿಂದಲೇ ಗದ್ದಲ ಶುರುವಾದರೆ, ಯಾವುದನ್ನು ನೋಡಬೇಕು, ಏನನ್ನು ಕೇಳಬೇಕು, ಯಾವುದರಲ್ಲಿ ತೊಡಗಿಸಿಕೊಳ್ಳಬೇಕು ಎಂಬುದೇ ತಿಳಿಯದ ಅಯೋಮಯ.

ಬಾಲ್ಯದಲ್ಲಿ ಭಾನುವಾರ ಬೆಳಿಗ್ಗೆ ಹತ್ತು ಗಂಟೆಗೆ ಮಾತ್ರ ಪ್ರಸಾರ ಆಗುತ್ತಿದ್ದ ಕೋರಿಕೆಯ ಚಿತ್ರಗೀತೆ ಕೇಳಲು ಎಲ್ಲರೂ ರೇಡಿಯೊ ಸುತ್ತ ಕುಳಿತು ಕಾತರದಿಂದ ಕಾಯುತ್ತಿದ್ದ ಆ ಸುಖವನ್ನಾಗಲೀ, ವರ್ಷದಲ್ಲಿ ಒಂದೋ ಎರಡೋ ಕ್ರಿಕೆಟ್ ಟೆಸ್ಟ್ ಮ್ಯಾಚ್, ರಣಜಿ ಮ್ಯಾಚ್‌ನ ಕಮೆಂಟರಿ ಕೇಳುವಾಗ ಸಿಗುತ್ತಿದ್ದ ವರ್ಣಾತೀತ ಸಂಭ್ರಮವಾಗಲೀ, ನೆಂಟರು ಬಂದಾಗ ಮಾತ್ರ ಸಿಗುತ್ತಿದ್ದ ವಿಶೇಷ ನಾನ್‌ವೆಜ್ ಊಟದ ಬ್ರಹ್ಮಾನಂದವಾಗಲೀ, ಹಬ್ಬದ ದಿನ ಮಾತ್ರ ಸಿಗುತ್ತಿದ್ದ ಹೋಳಿಗೆ ಪಾಯಸದ ರಸಸ್ಪರ್ಶದ ತೃಪ್ತಿಯಾಗಲೀ ಇಂದಿನ ಮಿತಿಯಿಲ್ಲದ ಅತಿಯಲ್ಲಿ, ಒಳಹೊರಗಿನ ಕೆಲಸದ ಒತ್ತಡದಲ್ಲಿ ಮರೆಯಾಗಿ ಹೋಗಿವೆ.

ಇಂದು ಎಲ್ಲವೂ ವ್ಯಸನದಂತೆ ನಮ್ಮನ್ನು ಆವರಿಸಿಕೊಂಡು, ಅಂತರ ಪಿಶಾಚಿಗಳಂತೆ ಬಳಲುವುದಕ್ಕೆ ಪೂರಕವಾಗುವ ವ್ಯವಸ್ಥೆಯನ್ನೇ ಮತ್ತೆ ಮತ್ತೆ ಅಪ್ಪಿಕೊಳ್ಳುವ ತಪ್ಪುಗಳನ್ನು ಮಾಡುತ್ತಿದ್ದೇವೆ. 24 × 7ನ ಮುಖತೊಟ್ಟ ದುಡಿಮೆಯ ಸಂಸ್ಕೃತಿಯು ಖಾಸಗಿ ಕ್ಷಣಗಳನ್ನೇ ಧ್ವಂಸ ಮಾಡಿಹಾಕಿದೆ. ಪ್ರತಿಯೊಂದನ್ನೂ ಲಾಭ ತರುವ ಸರಕಿನಂತೆಯೇ ನೋಡುವ ನಿರ್ಮಾನುಷತೆಯನ್ನು ಈ ಪ್ರವೃತ್ತಿಯು ಬೆಳೆಸುತ್ತದೆ. ಇದು ತನ್ನ ಮತ್ತು ಸುತ್ತಲಿನ ಬದುಕಿನ ಗುರಿಯೇನು ಎಂಬುದನ್ನು ದಿಕ್ಕೆಡಿಸಿದೆ. ಪ್ರಜಾಪ್ರಭುತ್ವವೊಂದು ತನ್ನೆಲ್ಲಾ ಪ್ರಜೆಗಳ



ಸ್ವಸ್ಥ ಬದುಕಿಗೆ ಬೇಕಾದ್ದನ್ನೂ ತನ್ನ ದೇಶದ ಪ್ರಾಕೃತಿಕ ಸಂಪತ್ತನ್ನೂ ಆರ್ಥಿಕತೆಯನ್ನೂ ಕಾಪಾಡುವ ಸಮಸೂತ್ರ ಹೆಣೆದು, ಪ್ರಜೆಗಳ ಒತ್ತಡ ಕಡಿಮೆ ಮಾಡಬೇಕು. ಆದರೆ ಅನವಶ್ಯಕ ಒತ್ತಡ, ಅಸಮಾನತೆಯ ಸೃಷ್ಟಿ ಇಂದಿನ ದುರಂತ.


ಈಚೆಗೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಗೊಂಡ ‘ಶೇರ್ನಿ’ ಸಿನಿಮಾ ನಮ್ಮ ಪಾಡಿನ ಬಿಂಬದಂತಿದೆ. ಇದೊಂದು ಹೆಣ್ಣುಹುಲಿಯ ಸುತ್ತ ಕಟ್ಟದ ಕತೆಯಾದರೂ, ಸಾಮರ್ಥ್ಯ, ಉತ್ಸಾಹ, ಇಚ್ಛಾಶಕ್ತಿ, ಪ್ರಾಣಿ ಮತ್ತು ಜನರ ಬಗೆಗೆ ಕಾಳಜಿ, ಕೆಲಸದ ಬಗೆಗೆ ಪ್ರೀತಿ ಎಲ್ಲವೂ ಇರುವ ಅಧಿಕಾರಿ ಮತ್ತವಳ ತಂಡಕ್ಕೆ ಕೆಲಸ ಮಾಡಲು ಬಿಡದ ವ್ಯವಸ್ಥೆಯ ಚಕ್ರವ್ಯೂಹವನ್ನೂ, ಹುಲಿ ಮತ್ತು ಅಧಿಕಾರಿಣಿಯನ್ನೇ ಖಳರನ್ನಾಗಿಸುವ ವ್ಯಂಗ್ಯವನ್ನೂ, ಸ್ವಯಂಸೇವಾ ಸಂಸ್ಥೆ, ಸರ್ಕಾರಿ ಅಧಿಕಾರಿಗಳು, ಸ್ಥಳೀಯ ಹಾಲಿ, ಮಾಜಿ ರಾಜಕಾರಣದ ಜಿದ್ದಿ, ಗಣಿಗಾರಿಕೆಯ ದಾಹ ಎಲ್ಲವೂ ಸೇರಿ ಹುಲಿ ಮರಿಗಳನ್ನು ಅನಾಥಗೊಳಿಸಿದಂತೆಯೇ ವ್ಯವಸ್ಥೆನ್ನು ಅನಾಥಗೊಳಿಸುವ, ಎಡಬಿಡಂಗಿಗಳಿಗೆ ಮಾತ್ರ ಮಣೆಹಾಕುವ ಮೂರ್ಖಸಾಮ್ರಾಜ್ಯ ಸೃಷ್ಟಿಯ ವಿಷಾದವನ್ನೂ ಎದೆಗಿಳಿಸುತ್ತದೆ.

ಸಿನಿಮಾದ ಅಂತ್ಯವಂತೂ ಈ ಕಾಲದ ಬಹುದೊಡ್ಡ ರೂಪಕವೇ ಆಗಿದೆ. ಜೀವಿ ಸಂಪತ್ತು ಉಳಿಸಬಲ್ಲ ಸಾಮರ್ಥ್ಯ ಇರುವ ಅಧಿಕಾರಿಣಿಯನ್ನು ಸತ್ತ ಪ್ರಾಣಿಗಳ ಮ್ಯೂಜಿಯಂ ಉಸ್ತುವಾರಿಗೆ ಕಳಿಸಲಾಗುತ್ತದೆ. ಅಲ್ಲೂ ಏನು ಮಾಡಬಹುದು ಎಂದು ಅವಳು ನೋಡುವಾಗ, ಕ್ಯಾಮೆರಾ ಒಂದೊಂದೂ ಪ್ರಾಣಿಯ ಮೇಲೆ, ಅದರ ಕಣ್ಣುಗಳ ಮೇಲೆ ಫೋಕಸ್ ಆಗುತ್ತದೆ. ಅವು ಎಷ್ಟು ಕತೆಗಳನ್ನು ಅಡಗಿಸಿಕೊಂಡಿವೆಯೋ, ಏನನ್ನು ಹೇಳುತ್ತಿವೆಯೋ ನಾವು ಕೇಳಿಸಿಕೊಳ್ಳಬಲ್ಲೆವೇ? ಅಥವಾ ನಾವಿಂದು ಮನುಷ್ಯರನ್ನೂ ಹೀಗೇ ನಾಶ ಮಾಡಿ ಮಣಭಾರದ ಅಲಂಕಾರ ಹೊತ್ತು ಓಡಾಡುವ ಜೀವಂತ ಶವಗಳನ್ನಾಗಿ ಪರಿವರ್ತಿಸ ಹೊರಟಿದ್ದೇವೆಯೇ? ಇಡೀ ಭೂಮಿಯನ್ನೇ ಇಂತಹ ಮ್ಯೂಸಿಯಂ ಮಾಡುವುದೇ ನಮ್ಮ ಗುರಿಯಾಗುತ್ತಿದೆಯೇ? ಇದಕ್ಕಾಗಿ ನಾವು 24 × 7 ಕೆಲಸ ಮಾಡಿ ಆ ಮ್ಯೂಸಿಯಂನ ಪಾತ್ರಧಾರಿಗಳಾಗಬೇಕೇ ಎಂದು ಕೇಳುತ್ತಿರುವಂತಿದೆ.

ಹಗಲಿಡೀ ದುಡಿದ ಸೂರ್ಯನೂ ಕಡಲಿಗೆ ಇಳಿದು ದಣಿವಾರಿಸಿಕೊಂಡು ನಿದ್ದೆಗೆ ಜಾರುತ್ತಾನೆ ಎಂಬುದು ಚೇತೋಹಾರಿಯಾದ ಕಲ್ಪನೆ. ಆದರೆ ಈಚೆಗೆ ಇಪ್ಪತ್ಮೂರು, ಇಪ್ಪತ್ನಾಲ್ಕರ ವಯಸ್ಸಿನ, ಈಗಷ್ಟೇ ಉತ್ಸಾಹದಿಂದ ವೈದ್ಯಕೀಯ ಪದವಿ ಮುಗಿಸಿ ಇಂಟರ್ನ್‌ಶಿಪ್‌ನಲ್ಲಿರುವ ಯುವಕರು ಅದಾಗಲೇ ಚೈತನ್ಯ ಕಳೆದುಕೊಂಡವರಂತಿದ್ದರು. ದಿನಕ್ಕೆ ಎರಡು-ಮೂರು ತಾಸಿನ ನಿದ್ದೆಯೂ ತಕ್ಕ ಆಹಾರವೂ ಇಲ್ಲದೆ ದಣಿದಿದ್ದರು. ಯಾವುದೋ ಜಂಕ್‌ಫುಡ್ ಆದರೂ ಸರಿ ಹೊಟ್ಟೆಗಿಷ್ಟು ಸಿಕ್ಕಿದರೆ ಸಾಕು ಎಂಬಂತಾಗಿದ್ದರು! ಪೌಷ್ಟಿಕ ಆಹಾರ, ಕಣ್ತುಂಬ ನಿದ್ದೆಯನ್ನು ಪೇಷಂಟ್‌ಗಳಿಗೆ ಹೇಳುವವರೇ ಪಾಲಿಸಲಾಗದ ವ್ಯಂಗ್ಯವಿದು.

ಯಾವ ದೇಶದಲ್ಲಿ ಉದ್ಯೋಗವಿಲ್ಲದೆ ಹೊಟ್ಟೆಗೇನೋ ಸಿಕ್ಕಿದರೆ ಸಾಕು ಎಂಬ ಸ್ಥಿತಿ ಇದೆಯೋ ಅಲ್ಲಿ ಹೀಗೂ ಇದೆ. ಕೆಲಸ ಹಂಚಿಕೊಳ್ಳಲು ಶಕ್ತವಾದ ಕೋಟಿ ಕೋಟಿ ಕೈಗಳಿರುವಾಗ, ಅವರಿಗೆ ಕೆಲಸ ನೀಡದೆ ಯಾವ ದಣಿವನ್ನು ತಣಿಸಲು, ಮತ್ತ್ಯಾರ್ಯಾರ ದಣಿವನ್ನು ಹೆಚ್ಚಿಸಲು ಈ ಅಸಮ ಉಸಿರಿನ 24 × 7 ಖಳ ಬೇಕು?

ಚುರುಮುರಿ



ನಾನೇ ಮುಖ್ಯಮಂತ್ರಿ!

● ಬಿ.ಎನ್.ಮಲ್ಲೇಶ್

ಲಾಕ್‌ಡೌನ್ ಸಡಿಲ ಆಗಿದ್ದೇ ತಡ, ಖುಷಿ ತಡೀಲಾರದೆ ಹರಟೆಕಟ್ಟೆ ಗೆಳೆಯರೆಲ್ಲ ಒಂದೆಡೆ ಸೇರಿ ಫುಲ್ ಟೈಟಾದರು. ಸುಖ ದುಃಖ ಎಲ್ಲ ಹಂಚಿಕೊಂಡರು. ದೇಶ ವಿದೇಶ ಎಲ್ಲ ಮುಗಿಸಿ ರಾಜ್ಯ ರಾಜಕೀಯಕ್ಕೆ ಬಂದರು. ಮಾತು ಜೋಲಿ ಹೊಡೆಯತೊಡಗಿತು.

ಗುಡ್ಡೆ ತೊದಲುತ್ತ ‘ಲೇಯ್ ಕೇಳ್ರಲೆ ಇಲ್ಲಿ, ಮುಂದಿನ ಮುಖ್ಯಮಂತ್ರಿ ನಾನೇ’ ಎಂದ.

ಪರ್ಮೇಶಿಗೆ ನಗು ಬಂತು. ‘ಯಾಕಲೆ ಹೆಂಗೈತಿ ಮೈಯಾಗೆ, ನಿಂಗಿಂತ ಸೀನಿಯರ್ ನಾನು, ನಾನೇ ಮುಖ್ಯಮಂತ್ರಿ’ ಎಂದ.

‘ಅಗ್ರಿ ಅಗ್ರಿ ಯಾವನಾದ್ರು ಮುಖ್ಯಮಂತ್ರಿ ಆಗ್ರಿ... ಆದಮೇಲೆ ನಮಗೂ ಒಂದು ಒಳ್ಳೆ ಇನ್‌ಕಂ ಇರೋ ಬೋರ್ಡೋ ನಿಗಮಾನೋ ಕೊಡ್ರಿ...’ ದುಬ್ಬೀರ ಬೇಡಿಕೆ ಸಲ್ಲಿಸಿದ.

‘ನಂಗೆ ಈ ಬೋರ್ಡು ಗೀರ್ಡು ಏನೂ ಬ್ಯಾಡಪ, ಎಣ್ಣೆ ರೇಟು ಒಂದು ಇಳಿಸಿಬಿಡ್ರಿ ಸಾಕು...’ ಸಣ್ಣೀರ ಕಿಸಕ್ಕೆಂದ.

ಅಪರೂಪಕ್ಕೆ ಹರಟೆಕಟ್ಟೆಗೆ ಬಂದಿದ್ದ ಕೊಟ್ರೇಶಿ ಸುಮ್ಮನೆ ಕೂತಿದ್ದನ್ನ ಕಂಡ ದುಬ್ಬೀರ ‘ಯಾಕೋ ಕೊಟ್ರ ನೀನು ಮುಖ್ಯಮಂತ್ರಿ ಆಗಲ್ವ?’ ಎಂದ.

‘ಅಯ್ಯೋ ಒಲ್ಲೆಪಾ, ನಂಗೇನ್ ಈಗ ಅಂಥ ಅರ್ಜೆಂಟಿಲ್ಲ. ಮುಂದೆ ನೋಡಾಣ’ ಕೊಟ್ರೇಶಿ ಒಂದೇ ಗುಟುಕಿಗೆ ಎತ್ತಿ ಕಪ್ ಕೆಳಗೆ ಇಟ್ಟ.

‘ಆತು, ತಗಂಡಿದ್ದು ಸಾಕು, ಈಗ ಮುಖ್ಯಮಂತ್ರಿ ಆಗೋರಲ್ಲಿ ಯಾರಾದ್ರೂ ಒಬ್ರು ಬಿಲ್ ಕೊಡ್ರಿ... ಮನಿಗೆ ಹೋಗಣ’ ಎಂದ ದುಬ್ಬೀರ. ಒಬ್ಬರೂ ಪಿಟಕ್ಕೆನ್ನಲಿಲ್ಲ.

ಇಷ್ಟೆಲ್ಲ ಚರ್ಚೆ ನಡೆಯುತ್ತಿದ್ದರೂ ತೆಪರೇಸಿ ಒಂದೂ ಮಾತಾಡದೆ ಸುಮ್ಮನೆ ಕೂತಿದ್ದ. ‘ಯಾಕೋ ತೆಪರ ಏನೂ ಮಾತಾಡ್ತಿಲ್ಲ? ಮುಖ್ಯಮಂತ್ರಿ ರೇಸಲ್ಲಿ ನೀನಿಲ್ವ?’ ಗುಡ್ಡೆ ಕೇಳಿದ.

‘ನಾನ್ಯಾಕೆ ಮಾತಾಡ್ಲಿ? ನನ್ನ ಮುಖ್ಯಮಂತ್ರಿ ಅಧಿಕಾರಾವಧಿ ಮುಗಿಯೋಕೆ ಇನ್ನೂ ಎರಡು ವರ್ಷ ಟೈಮಿದೆ’.

ತೆಪರೇಸಿ ಮಾತು ಕೇಳಿ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಬೆಳಕು ಆಗದಿರಲಿ ‘ಭಾರ’

ಖರೀದಿ ಬೆಲೆ ಕಡಿಮೆಯಾದರೂ ಹೆಚ್ಚುತ್ತಲೇ ಇದೆ ಮಾರಾಟದ ಬೆಲೆ!

● ಮಲ್ಲಿಕಾರ್ಜುನ ಹೆಗ್ಗಳಗಿ

ಕೃಷ್ಣಾ ನದಿಗೆ ಅವಿಭಜಿತ ಆಂಧ್ರಪ್ರದೇಶದಲ್ಲಿ ನಾಗಾರ್ಜುನ ಸಾಗರ ಹಾಗೂ ಕರ್ನಾಟಕದಲ್ಲಿ ಆಲಮಟ್ಟಿ ಜಲಾಶಯ ಕಟ್ಟಲು ಏಕಕಾಲಕ್ಕೆ ಚಾಲನೆ ನೀಡಲಾಯಿತು. ನಾಗಾರ್ಜುನ ಸಾಗರದ ನಿರ್ಮಾಣ ಕೆಲಸ 1967ರಲ್ಲಿ ಪೂರ್ಣಗೊಂಡಿತು. ಆದರೆ ಆಲಮಟ್ಟಿ ಕೆಲಸ ಇನ್ನೂ ಬಾಕಿ ಉಳಿದಿದೆ.

‘ನಾಗಾರ್ಜುನ ಕೆಲಸ ಪೂರ್ಣಗೊಂಡ ಬಳಿಕ ಅಲ್ಲಿ ಅತಿಥಿಗೃಹ ಕಟ್ಟಲಾಯಿತು. ಆಲಮಟ್ಟಿಯಲ್ಲಿ ಮೊದಲು ಅತಿಥಿಗೃಹ ಕಟ್ಟಿ ನಂತರ ಕೆಲಸ ಆರಂಭಿಸಲಾಯಿತು. ನಾಗಾರ್ಜುನಕ್ಕೆ ಬಂದ ಕಬ್ಬಿಣ, ಸಿಮೆಂಟ್ ದಕ್ಷತೆಯಿಂದ ಬಳಸಿದರು. ಆಲಮಟ್ಟಿಗೆ ಬಂದ ಕಬ್ಬಿಣ, ಸಿಮೆಂಟ್ ಕಳ್ಳರ ಪಾಲಾಯಿತು’ ಎಂದು ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ ವಿಷಾದದಿಂದ ಹೇಳುತ್ತಿದ್ದರು. ರಾಜ್ಯದ ವಿದ್ಯುತ್ ಬೆಲೆ ಏರಿಕೆಯ ಕಾರಣಗಳು ಇದೇ ಮಾದರಿಯ ವಿಷಾದದ ಕಥೆ ಹೇಳುತ್ತವೆ.

ರಾಜ್ಯ ಹಾಗೂ ದೇಶದಲ್ಲಿ ಬಹಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಕೇಳಿದಷ್ಟು ಕಡಿಮೆ ಬೆಲೆಗೆ ದೊರಕುತ್ತಿದೆ. ಹೀಗಿದ್ದೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುತ್ ದರವನ್ನು ಹೆಚ್ಚಿಸಿ ಗ್ರಾಹಕರಿಗೆ ಬಿಸಿ ಮುಟ್ಟಿಸುತ್ತಿದೆ. ಕೋವಿಡ್ ಸಂಕಷ್ಟದ ಈ ದಿನಗಳಲ್ಲೂ ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ಪ್ರತೀ ಯುನಿಟ್‌ಗೆ 30 ಪೈಸೆ ಹೆಚ್ಚಿಸಲಾಗಿದೆ. ಹಾಗೆಯೇ ಕೈಗಾರಿಕೆಗಳು ಬಳಸುವ ವಿದ್ಯುತ್ ದರದಲ್ಲಿ ಭಾರಿ ಏರಿಕೆ ಮಾಡಲಾಗಿದೆ.


ಈ ಉದಾಹರಣೆಗಳು ಗಮನಾರ್ಹ- ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಅನ್ನು ವಿದ್ಯುತ್ ಪ್ರಸರಣ ನಿಗಮವು 2010- 11ರಲ್ಲಿ ಪ್ರತೀ ಯುನಿಟ್‌ಗೆ ₹ 5.50ಕ್ಕೆ ಖರೀದಿಸುತ್ತಿತ್ತು. ಈಗ ಬೆಲೆಯನ್ನು ₹ 3.10ಕ್ಕೆ ಇಳಿಸಲಾಗಿದೆ. ಸೋಲಾರ್ ವಿದ್ಯುತ್ ಅನ್ನು ಯುನಿಟ್‌ಗೆ ₹ 17ಕ್ಕೆ ಖರೀದಿಸುತ್ತಿತ್ತು. ಈಗ ಅದನ್ನು ₹ 2ಕ್ಕೆ ಇಳಿಸಲಾಗಿದೆ. ಪವನ ವಿದ್ಯುತ್ ಬೆಲೆಯಲ್ಲಿ ₹ 2 ಕಡಿಮೆ ಮಾಡಲಾಗಿದೆ. ಖರೀದಿ ಬೆಲೆ ಕಡಿಮೆಯಾದರೆ ಮಾರಾಟದ ಬೆಲೆಯೂ ಕಡಿಮೆಯಾಗಬೇಕು. ಇದು ವ್ಯವಹಾರದ ಸೂತ್ರ ಮತ್ತು ನೀತಿ. ಅದು ವಿದ್ಯುತ್ ವಿಷಯದಲ್ಲಿ ಉಲ್ಟಾ ಪಲ್ಟಾ ಆಗಿ ನಿಂತಿದೆ.

ವಿದ್ಯುತ್ ಉತ್ಪಾದನೆಯ ವಿಜ್ಞಾನ, ತಂತ್ರಜ್ಞಾನ ಬಹಳಷ್ಟು ಬೆಳೆದಿದೆ. ನೈಸರ್ಗಿಕವಾಗಿ ದೊರಕುವ ಗಾಳಿ, ನೀರು, ಸೂರ್ಯನ ಬಿಸಿಲು, ಸಮುದ್ರದ ತೆರೆಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಗುಜರಾತ್ ಸರ್ಕಾರ ಹೆಚ್ಚುವರಿ ವಿದ್ಯುತ್ ಅನ್ನು ಕರ್ನಾಟಕಕ್ಕೆ ಮಾರಲು ರಾಜಕೀಯ ಒತ್ತಡ ಹೇರುತ್ತಿದೆ, ಮಾತ್ರವಲ್ಲ ಕೇಳಿದಷ್ಟು ಕಡಿಮೆ ಬೆಲೆಗೆ ಪೂರೈಸಲು ಸಿದ್ಧವಾಗಿದೆ.

ವಿದ್ಯುತ್ ಕೊಳ್ಳುವವರಿಲ್ಲದ ಕಾರಣ ರಾಜ್ಯದ ಕೆಲವು ವಿದ್ಯುತ್ ಉತ್ಪಾದನಾ ಘಟಕಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ಅಭಾವ ಅನೇಕ ಸಂಕಟಗಳಿಗೆ ಕಾರಣವಾದರೆ ಅತೀ ಹೆಚ್ಚು ಉತ್ಪಾದನೆ ಕೂಡ ಸಮಸ್ಯೆಗಳನ್ನು ಸೃಷ್ಟಿಸುತ್ತದೆ.

ರೈತರ 10 ಎಚ್‌ಪಿವರೆಗಿನ ನೀರಾವರಿ ಪಂಪ್‌ಸೆಟ್, ಭಾಗ್ಯಜ್ಯೋತಿ, ಕುಟೀರಜ್ಯೋತಿ ಯೋಜನೆಗಳಿಗೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಇದು ಸರ್ಕಾರದ ಯೋಜನೆಯಾಗಿದ್ದರಿಂದ ಉಚಿತವಾಗಿ ಪೂರೈಸಿದ ವಿದ್ಯುತ್ತಿಗೆ, ಸಂಬಂಧಿಸಿದ ಸಂಸ್ಥೆ ಅಥವಾ ಕಂಪನಿಗಳಿಗೆ ಪೂರ್ಣ ಹಣವನ್ನು ಸರ್ಕಾರ ಪಾವತಿ ಮಾಡುತ್ತಿದೆ. ಇದರಿಂದ ಸರಬರಾಜು ಸಂಸ್ಥೆಗೆ ಯಾವುದೇ ಭಾರ ಬೀಳುವುದಿಲ್ಲ.

ವಿದ್ಯುತ್ ನಿಗಮವು 2010-11ರಲ್ಲಿ ಖರೀದಿಸಿದ ಒಟ್ಟು ವಿದ್ಯುತ್ ಸರಾಸರಿ ಬೆಲೆ ಪ್ರತೀ ಯುನಿಟ್‌ಗೆ ₹ 7 ಇತ್ತು. ಅದು ಈಗ ₹ 3.75ಕ್ಕೆ ಇಳಿದಿದೆ. ವಾಸ್ತವ ಸಂಗತಿಗಳು ಇಷ್ಟು ನಿಚ್ಚಳವಾಗಿರುವಾಗ ಗ್ರಾಹಕರಿಗೆ ಪೂರೈಸುವ ವಿದ್ಯುತ್ ಬೆಲೆಯನ್ನು ಹೆಚ್ಚಿಸುತ್ತ ನಡೆದದ್ದು ಯಾಕೆ?



ವಿದ್ಯುತ್ ದೊಡ್ಡ ಪ್ರಮಾಣದಲ್ಲಿ ಕಳ್ಳತನವಾಗುವುದು ಹಾನಿಗೆ ಮುಖ್ಯ ಕಾರಣ. ವಿದ್ಯುತ್ ವಿಚಕ್ಷಕ ದಳಗಳಿದ್ದರೂ ಅವುಗಳ ಅಧಿಕಾರದ ಮಿತಿ ತುಂಬಾ ಕಡಿಮೆ. ವಿದ್ಯುತ್ ಕಳ್ಳತನದ ಪ್ರಕರಣಗಳು ದಾಖಲಾದರೆ ದಂಡ ತುಂಬಿ ದಾಟಿಕೊಳ್ಳಲು ಅವಕಾಶವಿದೆ. ವಿದ್ಯುತ್ ಪ್ರಸರಣ ಹಾಗೂ ವಿತರಣೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಸುವುದರಿಂದ ನಷ್ಟದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು.

ಮಧ್ಯಪ್ರದೇಶದಲ್ಲಿ 5 ವರ್ಷಗಳ ಹಿಂದೆ ಶೇ 50ರಷ್ಟು ವಿದ್ಯುತ್ ಕಳ್ಳತನವಾಗುತ್ತಿತ್ತು. ಅಲ್ಲಿಯ ಸರ್ಕಾರ ಆಧುನಿಕ ತಂತ್ರಜ್ಞಾನ ಬಳಸಿ ವಿದ್ಯುತ್ ಕಳ್ಳತನವನ್ನು ಪೂರ್ಣ ನಿಯಂತ್ರಣ ಮಾಡಿದೆ. ದೆಹಲಿ ರಾಜ್ಯದಲ್ಲಿ ಭಾರಿ ವಿದ್ಯುತ್ ಚೋರರು ತಳ ಊರಿದ್ದರು. ಈಗ ಅಲ್ಲಿಯೂ ವಿದ್ಯುತ್ ಕಳ್ಳತನಕ್ಕೆ ಪೂರ್ಣ ಬ್ರೇಕ್ ಹಾಕಲಾಗಿದೆ. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ವಿದ್ಯುತ್ ಕಳ್ಳತನ ಮಾಡುವ ಉದ್ದಿಮೆಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ.

ವಿದ್ಯುತ್ ಬಳಕೆ ಲೆಕ್ಕ ಪರಿಶೋಧನೆ ಕಾರ್ಯ ಸರಿಯಾಗಿ ನಡೆಯುವುದಿಲ್ಲ. ವಿದ್ಯುತ್ ಖರೀದಿ ಮತ್ತು ವಿತರಣೆ ನಡುವಿನ ವ್ಯತ್ಯಾಸವನ್ನು ಪ್ರತಿದಿನ ಲೆಕ್ಕ ಹಾಕಬೇಕು. ಸೋರಿಕೆ ಕಂಡುಹಿಡಿಯಲು ಇದರಿಂದ ಅನುಕೂಲವಾಗುತ್ತದೆ. ವಿದ್ಯುತ್ ಖರೀದಿಗೆ ಬಹಿರಂಗ ಟೆಂಡರ್ ವಿಧಾನ ಅಳವಡಿಸಬೇಕು. ಇದರಿಂದ ಸ್ಪರ್ಧಾತ್ಮಕ ವ್ಯವಹಾರ ಮತ್ತು ಪಾರದರ್ಶಕತೆ ಹೆಚ್ಚುವುದು. ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಆಧುನೀಕರಣಗೊಳಿಸಬೇಕು.

ಮನುಷ್ಯಕುಲಕ್ಕೆ ದೊರೆತ ಮಾಯಾದೇವತೆ ವಿದ್ಯುತ್ ಎಂದು ವಿಜ್ಞಾನಿಗಳು ಹೆಮ್ಮೆಯಿಂದ ಹೇಳುತ್ತಾರೆ. ಮನುಕುಲದ ಬದುಕನ್ನೇ ಆವರಿಸಿರುವ ಡಿಜಿಟಲ್ ಲೋಕ ವಿದ್ಯುತ್ ದೇವತೆಯ ಕೊಡುಗೆ. ಇದು ನ್ಯಾಯವಾದ ಬೆಲೆಯಲ್ಲಿ ದೊರಕುವಂತೆ ನೋಡಿಕೊಳ್ಳಬೇಕು.

ವಾಚಕರ ವಾಣಿ

ಹಣ ನೇರ ವರ್ಗಾವಣೆಯಾಗಲಿ

ಕಾರ್ಮಿಕರಿಗೆ ಕಳಪೆ ಆಹಾರದ ಕಿಟ್ ವಿತರಿಸಿ, ಪ್ರತೀ ಕಿಟ್‌ನಲ್ಲಿ ₹ 300 ಕಮಿಷನ್ ಹೊಡೆಯಲಾಗಿದೆ ಎಂದು ಕಾರ್ಮಿಕ ಸಂಘಟನೆಗಳು ಆರೋಪಿಸಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 25). ತಿನ್ನುವ ಆಹಾರಕ್ಕೆ ಹೀಗೆ ಹುಳ ಹಿಡಿದ ಬೇಳೆ, ಮುಗ್ಗಲು ಅಕ್ಕಿ ಕೊಟ್ಟರೆ ಕಾರ್ಮಿಕ ಕುಟುಂಬದವರ ಆರೋಗ್ಯದ ಮೇಲೆ ಎಂತಹ ಪರಿಣಾಮ ಆಗಬಹುದು? ಹೀಗೆ ಆಹಾರದ ಕಿಟ್‌ಗಳ ವಿತರಣೆಗೆಂದು ಕಂಪನಿಗಳಿಗೆ ಗುತ್ತಿಗೆ ಕೊಡುವ ಬದಲು ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡುವುದು ಸೂಕ್ತ.

ಇಂದಿರಾ ಶ್ರೀಧರ್, ಮಳಲಕೆರೆ

ಸರ್ಕಾರವೆಂಬ ದೇವರ ಹುಂಡಿ!

ದೇವಸ್ಥಾನದ ಹುಂಡಿಗಳಿಗೆ ಕಾಣಿಕೆ ಹಾಕುವಾಗ 51, 101, 501... ರೂಪಾಯಿ ಹಾಕುವುದು ರೂಢಿ. ಇತ್ತೀಚೆಗೆ ನನ್ನ ಬೈಕಿಗೆ ಪೆಟ್ರೋಲ್ ಬಂಕ್‌ನಲ್ಲಿ ಒಂದು ಲೀಟರ್ ಪೆಟ್ರೋಲ್ ಹಾಕಿಸಿದೆ. ನೂರು ರೂಪಾಯಿ ನೋಟನ್ನು ಕೊಟ್ಟೆ. ಪರಿಚಯದ ಹುಡುಗ ದರಪಟ್ಟಿ ತೋರಿಸುತ್ತಾ ‘ಇಂದಿನಿಂದ ಲೀಟರ್‌ಗೆ 101 ರೂಪಾಯಿ’ ಎಂದ. ನಾನು ಜೇಬಿನಲ್ಲಿ ತಡಕಾಡಿದಾಗ ಅಂತೂ ಒಂದು ರೂಪಾಯಿ ಸಿಕ್ಕಿತು. ಅವನಿಗೆ ಕೊಡುವಾಗ ನನ್ನ ಮನದಲ್ಲಿ, ಸರ್ಕಾರವೆಂಬ ದೇವರ ಹುಂಡಿಗೆ ಕಾಣಿಕೆ ಹಾಕಿದ ಅನುಭವ ಆದಂತಾಯಿತು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಹೋಟೆಲುಗಳಿಗೆ ಪ್ರಾಣವಾಯು: ಫಲಾನುಭವಿಗೆ ದಕ್ಕಲಿ

ಕೊರೊನಾದಿಂದ ಬಳಲಿದ ಹೋಟೆಲ್, ರೆಸ್ಟೋರೆಂಟ್, ರೆಸಾರ್ಟ್, ಮನರಂಜನಾ ಪಾರ್ಕ್‌ಗಳಿಗೆ ಸರ್ಕಾರ ಕೆಲವು ರಿಯಾಯಿತಿಯ ಪ್ರಾಣವಾಯು ನೀಡಿದೆ. ಏಪ್ರಿಲ್, ಮೇ, ಜೂನ್ ತಿಂಗಳ ನಿಗದಿತ ವಿದ್ಯುತ್ ಶುಲ್ಕ ಮನ್ನಾ ಮಾಡಿದೆ. ಇದು ಸ್ವಾಗತಾರ್ಹ ಹಾಗೂ ಅಭಿನಂದನಾರ್ಹ. ಜೊತೆಗೆ ಈ ವರ್ಗಗಳಿಗೆ 2021- 22ನೇ ಸಾಲಿನ ಆಸ್ತಿ ತೆರಿಗೆಯಲ್ಲಿ ಶೇ 50ರಷ್ಟು ಮನ್ನಾ ಮಾಡಿ, ಉಳಿದ ಹಣವನ್ನು ಡಿಸೆಂಬರ್ 31ರೊಳಗೆ ಪಾವತಿಸಲು ಸೂಚಿಸಿದೆ.

ಇಲ್ಲಿ ವಿಪರ್ಯಾಸವೆಂದರೆ, ರಾಜ್ಯದ ಬಹುತೇಕ ಹೋಟೆಲುಗಳು ಬಾಡಿಗೆ ಕಟ್ಟಡದಲ್ಲಿದ್ದು ಇದರ ಫಲ ಹೋಟೆಲ್ ನಡೆಸುವವರಿಗೆ ಸಿಗುವುದಿಲ್ಲ. ಬದಲಾಗಿ ಈ ಮೂರು ತಿಂಗಳ ಅವಧಿಯ ನೀರಿನ ತೆರಿಗೆ ಮನ್ನಾ ಮಾಡಬಹುದಿತ್ತು. ಹೋಟೆಲುಗಳನ್ನು ಎ, ಬಿ, ಸಿ, ಡಿ ಎಂದು ವರ್ಗೀಕರಿಸಿ ಪ್ರತ್ಯೇಕವಾಗಿ ತಲಾ ಇಂತಿಷ್ಟೆಂದು ಪರಿಹಾರ ಕೊಡಬಹುದಿತ್ತು. ಜೊತೆಗೆ ಹೋಟೆಲ್ ಕಾರ್ಮಿಕರಿಗೆ ಕಿಂಚಿತ್ತಾದರೂ ಧನ, ಕಿಟ್ ಸಹಾಯ ಮಾಡಬಹುದಿತ್ತು. ಇಲ್ಲೊಂದು ಸಮಸ್ಯೆ ಇದೆ. ಈಗಾಗಲೇ ನಿಯತ್ತಿನಿಂದ ಆಸ್ತಿ ತೆರಿಗೆ ಪಾವತಿಸಿರುವವರಿಗೆ ಶೇ 50 ಹಣ ಹಿಂದಿರುಗಿಸುವ ಬಗೆ ಹೇಗೆ?

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ಬೇಡದ ಕೆಲಸ ಬಿಡಿ, ಬೆವರು ಹರಿಸಿ

‘ಯುದ್ಧವಿಲ್ಲದಾಗ ಹೆಚ್ಚು ಬೆವರು ಹರಿಸಿದರೆ ಯುದ್ಧದ ಸಮಯದಲ್ಲಿ ಹೆಚ್ಚು ರಕ್ತ ಸುರಿಸಬೇಕಾಗುವುದಿಲ್ಲ’ ಎಂಬ ಮಾತಿದೆ. ಕೋವಿಡ್ ಸಾಂಕ್ರಾಮಿಕ ಜಗತ್ತನ್ನೇ ತಲ್ಲಣಗೊಳಿಸಿದೆ. ಸಾಮಾನ್ಯ ಜನರ ಜೀವ ಮತ್ತು ಜೀವನವನ್ನು ಹೈರಾಣಾಗಿಸಿದೆ. ಅಧಿಕಾರವಿಲ್ಲದೇ ಏನೂ ಕೆಲಸವಿಲ್ಲದೇ ಕುಳಿತಿರುವ ಕಾಂಗ್ರೆಸ್ ಪಕ್ಷ ಜನರಿಗೆ ಹತ್ತಿರವಾಗಲು ಇದೊಂದು ಸದವಕಾಶ. ಈ ದುರಿತ ಕಾಲದಲ್ಲಿ ನಿಜಕ್ಕೂ ನೊಂದಿರುವ, ಹತಾಶರಾಗಿರುವ, ಜೀವ ಮತ್ತು ಜೀವನವನ್ನೇ ಕಳೆದುಕೊಂಡಿರುವ, ಹಸಿದಿರುವ ಜನಕೋಟಿಗೆ ನೆರವಿನ ಹಸ್ತ ಚಾಚಬಹುದು. ಸರ್ಕಾರ ಎಲ್ಲೋ ಅಲ್ಲೊಂದು ಇಲ್ಲೊಂದು ಎಂಬಂತೆ ಘೋಷಿಸಿರುವ ನೆರವನ್ನು ಅರ್ಹರಿಗೆ ತಲುಪಿಸಲು ವ್ಯವಸ್ಥೆ ಮಾಡಬಹುದು. ಈ ದಿಸೆಯಲ್ಲಿ ಹಗಲೂ ರಾತ್ರಿ ದುಡಿದರೂ ಮುಗಿಯದಷ್ಟು ಕೆಲಸಗಳಿವೆ.

ಚುನಾವಣೆಗೆ ಇನ್ನೂ ಎರಡು ವರ್ಷ ಸಮಯವಿದೆ. ಈಗಿನಿಂದಲೇ ಮುಖ್ಯಮಂತ್ರಿ ಅಭ್ಯರ್ಥಿ ಬಗೆಗಿನ ಚರ್ಚೆ ಅನವಶ್ಯಕ. ಚುನಾವಣೆ ಎಂದರೆ ಅದೊಂದು ಮಹಾಸಮರ ಎಂಬಂತೆ ಕೆಲವು ಮಾಧ್ಯಮಗಳು ಬಿಂಬಿಸುತ್ತವೆ. ಅಂತಹ ಸಮರಕ್ಕೆ ತಯಾರಿ ನಡೆಸುವ ರೀತಿಯಲ್ಲಿ, ಮುಂಚೂಣಿಯಲ್ಲಿರುವ ನಾಯಕರು ತಳಮಟ್ಟದ ಕಾರ್ಯಕರ್ತರನ್ನು ಹುರಿದುಂಬಿಸಬಹುದು. ಫಲಾಪೇಕ್ಷೆ ಇಲ್ಲದೆ ಹಳ್ಳಿಯ ಕೊಂಪೆಗಳಿಗೂ ನಗರ ಪ್ರದೇಶದ ಗಲ್ಲಿ ಗಲ್ಲಿಗೂ ಹೋಗಿ ನೊಂದಿರುವ ಜೀವಗಳಿಗೆ ಸಹಾಯಹಸ್ತ ಚಾಚಲು ಮಾರ್ಗದರ್ಶನ ಮಾಡಬಹುದು. ಆಸ್ಪತ್ರೆ, ಔಷಧಗಳ ವ್ಯವಸ್ಥೆ ಮಾಡಬಹುದು. ಇಂತಹ ನೆರವಿನ ಅವಶ್ಯಕತೆ ಇರುವ ಇಂದಿನ ಈ ದಿನಗಳಲ್ಲಿ ಎಷ್ಟು ಬೆವರು ಹರಿಸುತ್ತೀರೋ, ಜನರಿಗೆ ಹತ್ತಿರವಾಗುವ ಅಷ್ಟು ಅವಕಾಶ ನಿಮ್ಮದಾಗುತ್ತದೆ ಎಂಬುದನ್ನು ಮರೆಯಬಾರದು.

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ನಿಷೇಧಿಸಬೇಕಾದುದು ಗಾಳಿಪಟ ಹಾರಿಸುವುದನ್ನಲ್ಲ!

ಒಬ್ಬ ಯುವಕ ವಾಹನ ಚಲಾಯಿಸುವಾಗ ದಾರಿಯಲ್ಲಿ ಗಾಳಿಪಟದ ದಾರದಿಂದ ಕುತ್ತಿಗೆಗೆ ಆಳವಾದ ಗಾಯವಾಗಿ, ಇದನ್ನು ತಪ್ಪಿಸಲು ತನ್ನ ಕೈ ಬೆರಳುಗಳಿಂದ ಎಳೆದಾಗ ಬೆರಳುಗಳೂ ಕೊಯ್ದು ರಕ್ತ ಹರಿಯುವಷ್ಟು ಕಠಿಣವಾದ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾನೆ. ಈ ಸಂದರ್ಭದಲ್ಲಿ ಆತ, ಸರ್ಕಾರ ಗಾಳಿಪಟ ಹಾರಿಸುವುದನ್ನು ನಿಷೇಧಿಸಬೇಕು ಎಂದು ಕೇಳಿಕೊಳ್ಳುವ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ನೋಡಿದೆ. ಆದರೆ ಆ ಅಪಘಾತ ನಡೆದದ್ದು ಗಾಳಿಪಟದಿಂದಲ್ಲ, ಬದಲಿಗೆ ಗಾಳಿಪಟ ಹಾರಿಸಲು ಬಳಸಿದ್ದ, ಚೀನಾ ತಯಾರಿಸಿದ, ಹತ್ತಿಯ ದಾರಕ್ಕೆ ನುಣುಪಾದ ಗಾಜಿನ ಪುಡಿ ಲೇಪಿತ ಹಾಗೂ ಅಂಟುದ್ರವ ಮಿಶ್ರಿತ ‘ಮಾಂಜಾ’ ಹೆಸರಿನ ದಾರದಿಂದ ಎಂಬುದು ಆ ಯುವಕನಿಗೆ ತಿಳಿದಿರಲಿಲ್ಲ ಎನಿಸುತ್ತದೆ.

ಸರ್ಕಾರ ಮಾಂಜಾ ಹೆಸರಿನ ದಾರವನ್ನು ಈಗಾಗಲೇ ನಿಷೇಧಿಸಿದೆ. ದುರ್ದೈವವೆಂದರೆ, ಅದನ್ನು ಸ್ವಲ್ಪ ಮಾರ್ಪಾಡು ಮಾಡಿ ಎಲ್ಲೆಡೆ ಮಾರಾಟ ಮಾಡಲಾಗುತ್ತಿದೆ. ಮನುಷ್ಯರಾದರೂ ತಮಗಾದ ನೋವನ್ನು, ಅನ್ಯಾಯವನ್ನು ಎಲ್ಲರ ಮುಂದೆ ಹೇಳಿಕೊಳ್ಳಬಹುದು. ಆದರೆ ಮೂಕ ಪ್ರಾಣಿ ಪಕ್ಷಿಗಳು ಈ ರೀತಿಯ ಅಪಾಯಕಾರಿ ಅಪಘಾತಕ್ಕೊಳಗಾದರೆ ನರಳಿ ಸಾಯುವುದೊಂದೇ ಅವುಗಳಿಗೆ ಉಳಿಯುವ ದಾರಿ. ದಯವಿಟ್ಟು ಇನ್ನಾದರೂ ಇಂತಹ ಪರಿಸರ ಮಾರಕ ದಾರಗಳನ್ನು ನಿಷೇಧಿಸಬೇಕೇ ವಿನಾ ಗಾಳಿಪಟ ಹಾರಿಸುವುದನ್ನಲ್ಲ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇವಸ್ಥಾನಗಳ ಅರ್ಚಕ ವೃತ್ತಿಗೆ ಬ್ರಾಹ್ಮಣೇತರರನ್ನು ನೇಮಿಸಬೇಕೇ?

ಅರ್ಚಕತ್ವ ಬಹಿರಾಚರಣೆಯಲ್ಲ

• ಗ.ನಾ.ಭಟ್ಟ



ಯಾವಾಗ ನಮ್ಮ ರಾಜಕಾರಣಿಗಳಲ್ಲಿ ಮತಬ್ಯಾಂಕ್ ಎಂಬ ಪರಮ ಲಾಭದಾಯಕ ನಿಧಿ ಕಾಣಿಸಿಕೊಂಡಿತೋ ಆಗಲೇ ಜಾತಿ ತಾರತಮ್ಯಗಳು, ಜಾತಿಗಳ ಮುಖಂಡರನ್ನು ಎತ್ತಿಹಿಡಿಯುವುದು, ಅವರ ಮೌಢ್ಯ, ಅಜ್ಞಾನಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದು, ಅವರಿಗೆ ಆಮಿಷ ಒಡ್ಡುವುದು ಮೊದಲಾದ ಅನಿಷ್ಟಗಳು ಹುಟ್ಟಿಕೊಂಡವು. ಹಿಂದುಳಿದವರು, ಅತಿ ಹಿಂದುಳಿದವರು, ಮೇಲ್ವರ್ಗದವರು, ಕೆಳವರ್ಗದವರು ಮುಂತಾಗಿ ದೊಡ್ಡ ಪ್ರಮಾಣದ ವಿಭಜನೆ, ಕಂದಕ ಸೃಷ್ಟಿಗೊಂಡಿತು. ಅದು ಈಗ ಎಲ್ಲಿಯವರೆಗೆ ಬಂದು ನಿಂತಿದೆಯೆಂದರೆ ಜಾತಿಯ ಬಗ್ಗೆ ಮಾತನಾಡಿದರೇ ಸಾಕು, ಅದು ಭಗ್ನತೆ ಹೊತ್ತಿಕೊಳ್ಳುತ್ತದೆ, ಜ್ವಲಿಸಿ ಹೋಗುವ ಸ್ಥಿತಿ ನಿರ್ಮಾಣವಾಗಿದೆ.

ತಮಾಷೆಯ ಸಂಗತಿಯೆಂದರೆ ಈಗ ದೊಡ್ಡ ಮಟ್ಟದ ಗುರಿ ಆಗಿರುವವರು ಬ್ರಾಹ್ಮಣರು. ಬ್ರಾಹ್ಮಣರು ಎಂದರೆ ಶೋಷಕರು, ವಿದ್ಯಾವಂತರು, ಮೇಲ್ವರ್ಗದವರು; ಸರ್ಕಾರದ ಎಲ್ಲಾ ಸೌಲಭ್ಯ ಅನುಭವಿಸುತ್ತಿದ್ದಾರೆ, ಸರ್ಕಾರದ ಆಯಕಟ್ಟಿನ ಜಾಗಗಳಲ್ಲಿ ತುಂಬಿಕೊಂಡಿದ್ದಾರೆ, ಹೇಗಾದರೂ ಮಾಡಿ ಅವರನ್ನು ಕೆಳಗಿಳಿಸಬೇಕು ಎಂಬ ಕೂಗು ಜೋರಾಗಿದೆ.

ಇದಕ್ಕೆ ಪೋಷಕವೋ ಎಂಬಂತೆ ತಮಿಳುನಾಡಿನಲ್ಲಿ ಮುಜರಾಯಿ ದೇವಸ್ಥಾನಗಳಿಗೆ ಹಿಂದುಳಿದವರನ್ನು ಮತ್ತು ಮಹಿಳೆಯರನ್ನು ಅರ್ಚಕರಾಗಿ ನೇಮಿಸುವುದಕ್ಕೆ ಅಲ್ಲಿಯ ರಾಜ್ಯ ಸರ್ಕಾರ ಅನುಮತಿಯನ್ನು ನೀಡಿದೆ. ಇದರಲ್ಲೇನೂ ವಿಶೇಷವಿಲ್ಲ. ದ್ರಾವಿಡ ಚಳವಳಿಯ ಮುಖಂಡ ಇ.ವಿ.ರಾಮಸ್ವಾಮಿ ಅವರು 'ದಲಿತರನ್ನು ದೇವಸ್ಥಾನದ ಅರ್ಚಕರ ಸ್ಥಾನದಲ್ಲಿ ನೋಡುವುದು ನನ್ನ ಕನಸು' ಎಂದು 1970ರಲ್ಲಿ ಸಾರಿದ್ದರು. ಆಗಲೇ ಅದರ ಬಗ್ಗೆ ಪ್ರಯತ್ನಗಳು ನಡೆದಿದ್ದವು. ಇನ್ನೊಂದು ಚೋದ್ಯದ ಸಂಗತಿಯೆಂದರೆ ದೇವಾಲಯಗಳ ನಾಡು ಎಂದೇ ಪ್ರಸಿದ್ಧವಾದ ತಮಿಳುನಾಡಿನಲ್ಲಿ ನಾಸ್ತಿಕರೇ ರಾಜ್ಯವಾಳುತ್ತಿರುವುದು. ಹಾಗಾಗಿ ಅಲ್ಲಿ ದಲಿತರೋ, ಇತರ ಹಿಂದುಳಿದವರೋ ದೇವಸ್ಥಾನಕ್ಕೆ ಅರ್ಚಕರಾದರೆ ವಿಶೇಷವೆನಿಸುವುದಿಲ್ಲ. ಯಾಕೆ ಅಂದರೆ ಅವರಿಗೆ ಯಾರೂ ವೇದ, ಉಪನಿಷತ್ತು, ಮಂತ್ರ ಬೇಕಿಲ್ಲ.

ಇರಲಿ. ಇಡೀ ದೇಶವನ್ನು ಗಮನಿಸುವುದಾದರೆ ಎಲ್ಲಾ ಕಡೆಯೂ, ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ತರಹದ ನೌಕರಿಯ ವಿಭಾಗಕ್ಕೂ ಮೀಸಲಾತಿ ಇದೆ. ಹಾಗಿರುವಾಗ ಮುಜರಾಯಿ ದೇವಸ್ಥಾನಗಳಿಗೆ ದಲಿತರನ್ನು ಅಥವಾ ಹಿಂದುಳಿದವರನ್ನು ಅರ್ಚಕರಾಗಿ ನೇಮಿಸುವುದರಲ್ಲಿ ಯಾವ ವಿಶೇಷವೂ ಇಲ್ಲ. ಅದು ಮುಖ್ಯ ವಿಷಯವಲ್ಲ. ಮುಖ್ಯ ವಿಷಯ ಅಂದರೆ-ಕಾವಿ ಬಟ್ಟೆ ತೊಟ್ಟ ಮಾತ್ರಕ್ಕೆ ಸನ್ಯಾಸಿಯಾಗುತ್ತಾರೆಯೇ? ವಿಭೂತಿಪಟ್ಟೆ, ಗೋಪಿಚಂದನನಾಮ, ಅಂಗಾರಕ, ಕುಂಕುಮಲೇಪನ, ಬಣ್ಣದ ಮಕುಟ ಮೊದಲಾದವನ್ನು ಧರಿಸಿದವರೆಲ್ಲ ಅರ್ಚಕರಾಗುತ್ತಾರೆಯೇ.

> ಲೌಕಿಕವಾಗಿ ನೋಡುವುದಾದರೆ ವೈದ್ಯ, ಎಂಜಿನಿಯರ್, ಪ್ರೊಫೆಸರ್ ಆಗುವುದಕ್ಕೆ ಎಷ್ಟೊಂದು ಶ್ರಮಿಸುತ್ತಾರೆ, ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎಂದು ಗಮನಿಸಿದರೆ ಆಯಾ ವಿದ್ಯೆ, ವೃತ್ತಿಗಳ ಮಹತ್ವ ಅರಿವಿಗೆ ಬರುತ್ತದೆ. ಹೀಗಿರುವಾಗ ಅರ್ಚಕತ್ವಕ್ಕೆ ಈ ಯಾವ ಸಾಧನೆ, ಪರಿಶ್ರಮವೂ ಬೇಡವೇ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ

ತಮಿಳುನಾಡಿನಲ್ಲಿ ಅರ್ಚಕರಾಗುವ ದಲಿತರಿಗೆ ಆಗಮೋಕ್ತಾನುಸಾರ ತರಬೇತಿ ನೀಡಲಾಗಿದೆ ಎಂಬ ಮಾತು ಬಂದಿದೆ. 'ತರಬೇತಿ' ಅಂದರೆ ಶಿಕ್ಷಣ, ಪ್ರಶಿಕ್ಷಣ ಎಂದು ಅರ್ಥ. ಆ ತರಬೇತಿಯನ್ನು ನಾವು ಮನುಷ್ಯರಾದಿಯಾಗಿ ಆನೆ, ಸಿಂಹ, ಚಿರತೆ, ನಾಯಿ, ಬೆಕ್ಕು, ಗಿಳಿ ಮೊದಲಾದ ಎಲ್ಲಾ ಪ್ರಾಣಿಗಳಿಗೂ ಕೊಡಬಹುದು. ತರಬೇತಿ ಅನ್ನುವುದು ಹೊರಗಿನದ್ದು, ವ್ಯವಹಾರಕ್ಕೆ ಸಂಬಂಧಪಟ್ಟದ್ದು, ಅದು ಅಂತರ್ಯವನ್ನು ಸ್ಪರ್ಶಿಸಲಾರದು. ಅರ್ಚಕತ್ವ ಸಿದ್ಧಿಸುವುದು ತರಬೇತಿಯಿಂದಲ್ಲ. ಅದು ಸಿದ್ಧಿಸುವುದು ವಿದ್ಯೆ, ಸಂಸ್ಕಾರಗಳಿಂದ. ಶಾಸ್ತ್ರದ ಪರಿಭಾಷೆಯಲ್ಲಿ 'ವಿದ್ಯೆ' ಅಂದರೆ 'ಬ್ರಹ್ಮವಿದ್ಯೆ' ಎಂದು ಅರ್ಥ. ಅದು ಮನುಷ್ಯನ ಅಂತರ್ಯಕ್ಕೆ, ಒಳಗಿನದಕ್ಕೆ ಸಂಬಂಧಪಟ್ಟಿದ್ದು. 'ಆಗಮಶಾಸ್ತ್ರ' ಅನ್ನುವುದು ಶಿಲ್ಪಶಾಸ್ತ್ರ, ದಂಡನೀತಿ, ವೇದಾಂತ, ಮೀಮಾಂಸಾ, ಅರ್ಥ ಶಾಸ್ತ್ರ ಮೊದಲಾದ ಶಾಸ್ತ್ರಗಳಂತೆ ಗಹನವಾದದ್ದು. ಅದು ತರಬೇತಿಯಿಂದ ದೊರೆಯಲಾರದು. ಅದು ನಾಲ್ಕೈದು ವರ್ಷ ಗುರುಮುಖೇನ ಅಧ್ಯಯನ ಮಾಡಿ ಪಡೆಯಬೇಕಾದುದು. ಹಾಗೆ ಪಡೆಯುವವರು ದಲಿತರೇ ಆಗಲೀ, ಇತರ ಹಿಂದುಳಿದವರೇ ಆಗಲೀ ದೇವಸ್ಥಾನದ ಅರ್ಚಕತ್ವಕ್ಕೆ ಅರ್ಹರಾಗುತ್ತಾರೆ.

ವೈದ್ಯ, ಎಂಜಿನಿಯರ್, ಪ್ರೊಫೆಸರ್ ಆಗುವುದಕ್ಕೆ ಎಷ್ಟೊಂದು ಶ್ರಮಿಸುತ್ತಾರೆ, ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎಂದು ಗಮನಿಸಿದರೆ ಆಯಾ ವಿದ್ಯೆ, ವೃತ್ತಿಗಳ ಮಹತ್ವ ಅರಿವಿಗೆ ಬರುತ್ತದೆ. ಹೀಗಿರುವಾಗ ಅರ್ಚಕತ್ವಕ್ಕೆ ಈ ಯಾವ ಸಾಧನೆ, ಪರಿಶ್ರಮವೂ ಬೇಡವೇ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಅರ್ಚಕತ್ವ ಅನ್ನುವುದು ವೇಷಭೂಷಣ ಮಾತ್ರದ್ದಲ್ಲ. ಅನುಕರಣೆಯ ಕ್ರಿಯಾಕಲಾಪವಲ್ಲ. ಅದು ಸಾಧ್ಯವಾಗುವುದು ಸಾಧನೆಯಿಂದ, ತಪಸ್ಸಿನಿಂದ. ತಪಸ್ಸು ಅಂದರೆ ಮೂಗು ಹಿಡಿದು, ಕಣ್ಣುಮುಚ್ಚಿ ಕುಳಿತುಕೊಳ್ಳುವುದಲ್ಲ. ಒಂದು ವಿಷಯದ ಕುರಿತು ಏಕಾಗ್ರವಾಗಿ ಧ್ಯಾನಿಸುವುದು ತಪಸ್ಸು ಅನ್ನಿಸಿಕೊಳ್ಳುತ್ತದೆ.

ಇನ್ನು ಅರ್ಚಕತ್ವಕ್ಕೆ ಅದರದ್ದೇ ಆದ ಸಂಪ್ರದಾಯ, ವಿಧಿವಿಧಾನಗಳಿವೆ; ಸ್ವತಃ ಬ್ರಾಹ್ಮಣರಲ್ಲೇ ಎಲ್ಲರೂ ಒಂದೇ ಮಟ್ಟದ ವೈದಿಕರಲ್ಲ. ಅರ್ಚಕರಲ್ಲ. ಅವರು ಗಳಿಸಿದ ವಿದ್ಯೆ, ಪರಿಣತಿಯ ಮೇಲೆ ಅವರಿಗೆ ಒಂದು ಪದವಿ, ಸ್ಥಾನ ನಿರ್ಧಾರವಾಗುತ್ತದೆ (ಇಲ್ಲಿ ಅರ್ಚಕ ಮತ್ತು ವೈದಿಕ ಪದವನ್ನು ಸಮಾನಪದವಾಗಿ ಬಳಸಿದ್ದೇನೆ). ಇದರ ಆಳ, ನೀಳ, ಅಗಲವನ್ನು ಅರಿಯದೇ ಕಂಡವರೆಲ್ಲ ಅರ್ಚಕರಾಗುತ್ತಾರೆ ಅನ್ನುವುದೇ ನಗೆಪಾಟಲು ಮತ್ತು ವಿಷಾದದ ಸಂಗತಿ.

ಹಾಗೆಯೇ ಪೂಜಾವಿಧಾನಕ್ಕೂ ಸಂಪ್ರದಾಯ, ಕ್ರಮಗಳಿವೆ. ಘಂಟಾರ್ಚನೆ, ಕಲಶಾರ್ಚನೆ, ಶಂಖಾರ್ಚನೆ, ಮಂಟಪಾರ್ಚನೆ, ಅಭಿಷೇಕ, ಪಂಚಾಮೃತಾಭಿಷೇಕ, ಆರತಿ, ಮಹಾ ಮಂಗಳಾರತಿ, ಮಂತ್ರಪುಷ್ಪ, ನೈವೇದ್ಯ, ಪ್ರಾರ್ಥನೆ, ಪ್ರಸಾದವಿತರಣೆ ಹೀಗೆ ಹಲವು ಹತ್ತು ಮೆಟ್ಟಿಲುಗಳಿವೆ. ಇಲ್ಲಿ ಕಾಣಿಸಿದ ಪ್ರತಿಯೊಂದು ಅರ್ಚನಾವಿಧಾನಕ್ಕೂ ಭಾವೋನ್ನತಿಕಾರಕವಾದ, ವಿಚಾರ ಪ್ರಚೋದಕವಾದ, ಸೊಗಸಾದ ಬೇರೆ ಬೇರೆ ಮಂತ್ರಗಳಿವೆ. ಇದನ್ನು ತಿಳಿಸಿಕೊಡುವುದಕ್ಕೆ ಕರ್ನಾಟಕದಲ್ಲಿ ಈಗಲೇ ಸಾಕಷ್ಟು ಸಂಖ್ಯೆಯಲ್ಲಿ ವೇದ-ಸಂಸ್ಕೃತ ಪಾಠಶಾಲೆಗಳೂ, ಕಾಲೇಜುಗಳೂ ಇವೆ. ನಿಜವಾಗಿ ಅರ್ಚಕರಾಗಬಯಸುವವರು ಯಾವುದೇ ಜಾತಿಯವರಾಗಿರಲಿ ಅಲ್ಲಿಂದಲೇ ಓದಿ, ಉತ್ತೀರ್ಣರಾಗಿ ಪ್ರಮಾಣಪತ್ರ ಪಡೆಯಬಹುದಲ್ಲ! ಅದನ್ನು ಯಾಕೆ ಹಿಂದುಳಿದವರು ಮಾಡುತ್ತಿಲ್ಲ? ಬ್ರಾಹ್ಮಣರೂ ಹತ್ತು-ಹನ್ನೆರಡು ವರ್ಷ ಕಷ್ಟಪಟ್ಟು ಓದಿಯೇ ಅಲ್ಲವೆ ವೈದಿಕರೂ, ಆಗಮಿಕರೂ, ಶಾಸ್ತ್ರಜ್ಞರೂ ಆಗಿದ್ದು. ಇದನ್ನು ಯಾಕೆ ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ?

ಇನ್ನೊಂದು ಮಾತು ಕೇಳಿಬಂದಿದೆ. 'ಅರ್ಚಕರಾಗುವವರು ಕಷ್ಟಪಡುವುದೇ ಬೇಕಿಲ್ಲ. ಪೂಜಾಕಲಾಪವೆಲ್ಲ ಪ್ರಾದೇಶಿಕ ಭಾಷೆಯಲ್ಲೇ ನಡೆದುಬಿಡಲಿ' ಎಂದು. ಇದು ಅನುಷ್ಠಾನಕ್ಕೆ ಬಂದಲ್ಲಿ ಮತ್ತೊಂದು ದುರಂತವಾಗುವುದರಲ್ಲಿ ಸಂದೇಹವಿಲ್ಲ. ಯಾಕೆ ಅಂದರೆ- ವೈದಿಕ ಕರ್ಮಾಚರಣೆಗೂ, ಅರ್ಚಕತ್ವಕ್ಕೂ, ದೇವರಿಗೂ ಪರಸ್ಪರ ಸೇತುವೆಯಾಗಿರುವುದು ಸಂಸ್ಕೃತ ಮತ್ತು ವೇದಭಾಷೆ. ಹೀಗಿರುವಾಗ ಪ್ರಾದೇಶಿಕ ಭಾಷೆ ತಂದಲ್ಲಿ ಗಣಪತಿ ಮಾಡಲು ಹೋಗಿ ಹನುಮಂತನನ್ನು ಮಾಡಿದಂತಾಗುತ್ತದೆ ಅಷ್ಟೇ!

ಒಂದು ಭಾಷೆಗೆ ಅದರದ್ದೇ ಆದ 'ಆವರಣ ಸನ್ನಿವೇಶ' ಅಂತ ಇರುತ್ತದೆ. 'ತಂಪು' ಮತ್ತು 'ತಣ್ಣಗೆ' ಎಂಬ ಪದಗಳ ಮೂಲ ಒಂದೇ ಆದರೂ ಅವುಗಳ 'ಧ್ವನಿ' ಬೇರೆಬೇರೆಯೇ. ಕೆಲವು ಪದಗಳಿಗೂ ಪದಪ್ರಯೋಗಗಳಿಗೂ ಕೋಶ ಕೊಡುವ ಅರ್ಥದೊಂದಿಗೆ ವಿಶೇಷವಾದ ಒಂದು ಸೂಚಕಶಕ್ತಿ ಇರುತ್ತದೆ. 'ಮಕರಂದ' ಎಂಬ ಮಾತಿನಿಂದ ಉಂಟಾಗುವ ಭಾವನೆಯು 'ಹೂವಿನ ರಸ' ಅಂದರೆ ಉಂಟಾಗುವುದಿಲ್ಲ. ವೇದಮಂತ್ರಗಳ ಉಚ್ಚಾರಣೆಯಿಂದ ಮನಸ್ಸಿಗೆ ಆಗುವ ಭವ್ಯ, ದಿವ್ಯ, ಮಂಗಳಕರ ಭಾವವೇ ಬೇರೆ. ಅದು ಪ್ರಾದೇಶಿಕ ಭಾಷೆಯಿಂದ ಉಂಟಾಗುವುದಿಲ್ಲ.

ಕೊನೆಯದಾಗಿ ಒಂದು ಮಾತು. ನಮ್ಮಲ್ಲಿ ಅನೇಕರಿಗೆ ಒಂದು ತಪ್ಪು ಅಭಿಪ್ರಾಯವಿದೆ. 'ವೇದವಿದ್ಯೆ ಸಂಸ್ಕೃತ ವಿದ್ಯೆ ಮೊದಲಾದವು ಬ್ರಾಹ್ಮಣರ ಸೊತ್ತಾಗಿ ಬಿಟ್ಟಿವೆ. ಅವರು ಇತರರಿಗೆ ಹೇಳಿಕೊಡಲಿಲ್ಲ. ಅವರು ಮಹಾಶೋಷಕರು' ಇತ್ಯಾದಿ. ಇದು ತಳಬುಡವಿಲ್ಲದ ಒಂದು ವಿಚಿತ್ರವಾದ. ವೇದವಿದ್ಯೆಯನ್ನು ಇತರರಿಗೆ ಹೇಳಿಕೊಡಬಾರದು, ಅದನ್ನು ಬಚ್ಚಿಟ್ಟುಕೊಳ್ಳಬೇಕು ಅನ್ನುವುದು ಅವರ ದೃಷ್ಟಿಯಲ್ಲ. ತಕ್ಕವರಿಗಾಗಿ, ಅರ್ಹರಿಗಾಗಿ ಕಾಪಾಡ ಬೇಕೆನ್ನುವುದು ಅವರ ದೃಷ್ಟಿ. ಇದನ್ನು ಸಮರ್ಥಿಸಲೋ ಎಂಬಂತೆ ಶ್ರೀಕೃಷ್ಣ ಹೇಳಿದ ಒಂದು ಮಾತು ಹೀಗಿದೆ-

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ |ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋsಭ್ಯಸೂಯತಿ

|| **ಭಗವದ್ಗೀತೆ: 18-67**

'ಯಾರಿಗೆ ತಿಳಿದುಕೊಳ್ಳಬೇಕೆಂಬ ಮನೋಭಾವ ಇಲ್ಲವೋ, ಯಾವನು ಭಕ್ತನಲ್ಲವೋ, ಯಾವನಿಗೆ ಕಲಿಯಬೇಕೆಂಬ ಶ್ರದ್ಧೆ ಇಲ್ಲವೋ, ಯಾವನು ಮತ್ಸರಿಸುವನೋ ಅಂತಹವರಿಗೆ ಇದನ್ನು ಹೇಳತಕ್ಕದ್ದಲ್ಲ' ಎಂದು ಕೃಷ್ಣ ಹೇಳಿದ ಈ ಮಾತು ಇಲ್ಲಿ ಸದಾ ಸ್ಮರಣೀಯವಾಗಿದೆ.

ಲೇಖಕ: ನಿವೃತ್ತ ಸಂಸ್ಕೃತ ಶಿಕ್ಷಕ, ಲೇಖಕ

ಪ್ರಜಾವಾಣಿ ಚರ್ಚೆ

ದೇವಸ್ಥಾನ ಸಾರ್ವಜನಿಕ ಸಂಸ್ಥೆ ಸಂವಿಧಾನ ಅದಕ್ಕೂ ಅನ್ವಯ

• ದು.ಸರಸ್ವತಿ



ನಿತ್ಯವೂ ಸಾವಿರ-ಲಕ್ಷ ಭಕ್ತರು ಭೇಟಿ ನೀಡುವ, ಅಪಾರ ಆದಾಯದ, ಸಾಂಸ್ಥಿಕ ರೂಪ ಪಡೆದು ಆ ಪ್ರದೇಶದ ಆರ್ಥಿಕತೆಯನ್ನು ರೂಪಿಸಿರುವ ಹಲವಾರು ದೇವಸ್ಥಾನಗಳು ದೇಶದಾದ್ಯಂತ ಇವೆ. ಕಲಾತ್ಮಕ ಸೌಂದರ್ಯ, ಪ್ರಭಾವದಿಂದಾಗಿ ಅಪಾರ ಜನಮನ್ನಣೆ ಗಳಿಸಿವೆ. ಜಗತ್ತಿನಲ್ಲಿ ಅತಿ ಹೆಚ್ಚು ವರಮಾನವಿರುವುದು ವ್ಯಾಟಿಕನ್ ಚರ್ಚ್‌ಗೆ, ಎರಡನೆಯದು ತಿರುಪತಿ. ಮುಜರಾಯಿ ಇಲಾಖೆಗೆ ಸೇರಿರುವ ದೇವಸ್ಥಾನಗಳು ಸಾರ್ವಜನಿಕ ಸಂಸ್ಥೆಗಳಾಗಿರುವುದರಿಂದ ಅವುಗಳಿಗೆ ನಾಡಿನ ಕಾನೂನು ಅನ್ವಯವಾಗುತ್ತದಲ್ಲದೆ ಅವು ಸಂವಿಧಾನಕ್ಕೆ ಬದ್ಧವಾಗಿರಬೇಕು.

ಸಂವಿಧಾನದ ಸರ್ವರ ಸಮಾನತೆಯ ಪ್ರಜಾಸತ್ತಾತ್ಮಕ ಮೌಲ್ಯಗಳು ಕುಟುಂಬ, ದೇವಸ್ಥಾನ ಮಾತ್ರವಲ್ಲದೆ ಸಾರ್ವಜನಿಕ ಸಂಸ್ಥೆಗಳೆಲ್ಲದರಲ್ಲಿಯೂ ಹರಡಿಕೊಂಡು ಬೇರು ಬಿಡುತ್ತ ಹೋಗಬೇಕು. ಯಾಕೆಂದರೆ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಉಪಾಸನಾ ಸ್ವಾತಂತ್ರ್ಯವನ್ನು ಭಾರತವಾಸಿಗಳೆಲ್ಲರಿಗೂ ನೀಡಿರುವ ಸಂವಿಧಾನವನ್ನು ಭಾರತೀಯ ಜನತೆಯಾಗಿ ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ. ಹಾಗಾಗಿ ದೇವಸ್ಥಾನಗಳಲ್ಲಿ ದೇವರ ಪೂಜೆ ಮಾಡಬಯಸುವ ಅರ್ಹರಿಗೆ ಹೆಣ್ಣು-ಗಂಡು, ಜಾತಿ-ಜನಾಂಗ-ಧರ್ಮ ಬೇಧವಿಲ್ಲದೆ ಅವಕಾಶ ಸಿಗಬೇಕು. ಪೂಜಾಕಾರ್ಯಗಳು ಸಂಸ್ಕೃತದಲ್ಲಿ ಮಾತ್ರವೇ ಏಕೆ? ಭಾರತದ ರಾಷ್ಟ್ರಭಾಷೆಗಳಲ್ಲಿಯೂ ನಡೆಯಬೇಕು. ಆಗ ಯಾರು ಬೇಕಾದರೂ ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡಬಹುದು.

ಬ್ರಾಹ್ಮಣೇತರರನ್ನು ಅರ್ಚಕರ ಹುದ್ದೆಗೆ ಆಹ್ವಾನಿಸುವಂತಹ ಬಹುದೊಡ್ಡ ಸವಾಲನ್ನು ತಮಿಳುನಾಡಿನ ಆಳುವ ಸರ್ಕಾರ ತೆಗೆದುಕೊಂಡಿದೆ. ಇದು ಆಗಲೇಬೇಕಾದದ್ದು. ಆದರೆ, ಸುಲಭದ್ದಲ್ಲ. ಕಾರಣ ಬಾಬಾಸಾಹೇಬರು ಹೇಳಿರುವಂತೆ ಅಸಮಾನತೆ ಪ್ರತಿ ಹಂತದಲ್ಲೂ ಉಸಿರಾಡುತ್ತಿರುವ ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯನಾಧರಿಸಿದ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡಿರುವಂತಹ ವೈರುಧ್ಯದಲ್ಲಿ ಬದುಕುತ್ತಿದ್ದೇವೆ. ಅಸಮಾನತೆ, ತಾರತಮ್ಯದ ಬೆಂಗಾಡಿನಲ್ಲಿ ಸಮಪಾಲು-ಸಮಬಾಳಿನ ಆಶಯಗಳು ಬೇರು ಬಿಡಬೇಕೆಂದರೆ ಅಗೆಯಬೇಕಾಗುತ್ತದೆ. ನೀರು, ಗೊಬ್ಬರ, ಸೂಕ್ಷ್ಮಾಣುಗಳು ನೆಲ ಹಸನು ಮಾಡಬೇಕಾಗುತ್ತದೆ. ಜನ ಹಿಡಿಯಷ್ಟು ಇರಲಿ, ಇಡಿ ಊರೇ ಇರಲಿ ಎಲ್ಲರಿಗೂ ಫಲ ಸಿಗಲಿ ಎಂಬ ಗುರಿಯಷ್ಟೆ ಮುಖ್ಯವಾದರೆ ನಮ್ಮ ಪ್ರಯತ್ನಗಳು ಅಗೆತ, ನೀರು, ಗೊಬ್ಬರ, ಸೂಕ್ಷ್ಮಾಣುಗಳಂತಾಗಬೇಕಾಗುತ್ತದೆ.

> ದೇವಸ್ಥಾನಗಳು ಸಾರ್ವಜನಿಕ ಸಂಸ್ಥೆಗಳಾಗಿರುವುದರಿಂದ ಅವುಗಳಿಗೆ ನಾಡಿನ ಕಾನೂನು ಅನ್ವಯವಾಗುತ್ತದಲ್ಲದೆ ಅವು ಸಂವಿಧಾನಕ್ಕೆ ಬದ್ಧವಾಗಿರಬೇಕು. ದೇವರು ಮತ್ತು ಆಲಯಗಳು ಸಂಸ್ಥೆಗಳಾಗಿ 'ಅರ್ಥ' ಪಡೆದುಕೊಂಡಾಗ ನಿಯಮಗಳಿಗೆ ಒಳಗಾಗಲೇಬೇಕು. ಅರ್ಥ ಕಳಚಿದಾಗ ಹಿಡಿದಿಟ್ಟುಕೊಳ್ಳಲೇನಿಲ್ಲ.

ದೇವ-ಭಕ್ತ ಸೇತುವಿನ ತಂತುಗಳು: ಅರ್ಚಕರ ಹುದ್ದೆಗೆ ಎಲ್ಲ ಜಾತಿಯವರು ಬೇಕೆ ಎಂಬ ವಿಷಯ ಕುರಿತು ಬರೆಯುವಾಗ ನನ್ನೊಳಗೆ ಮೂಡಿದ ವಿಚಾರಗಳ ತಿಳಿಸುವುದು ಸೂಕ್ತವೆನಿಸಿತು.

ಕೆಲವು ವರ್ಷಗಳ ಹಿಂದೆ ಒಡಿಶಾದ ಕುಯ್ಯಿ ಆದಿವಾಸಿಗಳ ಹಾಡಿಗೆ ಭೇಟಿ ಕೊಟ್ಟಿದ್ದೆ. ಏನೋ ಮಾತುಕತೆಯಲ್ಲಿ ಅಲ್ಲಿನ ಪುರೋಹಿತರು ಮಹಿಳೆ ಎಂದಾಗ ಆಶ್ಚರ್ಯವೆನಿಸಿತು. ಮರುದಿನವೇ ಆಕೆಯನ್ನು ಭೇಟಿಯಾಗುವ ಸಂದರ್ಭವೂ ಒದಗಿಬಂತು. ವಯಸ್ಸಾದ ಮುದುಕಿ. ಹೆಚ್ಚು ಮಾತನಾಡುವುದಿಲ್ಲ. ಆಡಿದರೂ ಆಳವಾದ ಮೌನದಿಂದ ಹೊರಟುಬಂದಂತೆ. ಮಾತನಾಡಿಸಬೇಕಾದವರು ಸಹ ತಮ್ಮ ತಲೆಹರಟೆ ಮಾತುಗಳನ್ನು ಕಟ್ಟಿಟ್ಟು ಮಾತನಾಡಿಸಬೇಕೆನಿಸುವಂತೆ.

ನಮ್ಮ ಅವ್ವನ ತೌರೂರಿನಲ್ಲಿ ಕಾಳ್ಗಟ್ಟಮ್ಮ-ಕರ್ಗಟ್ಟಮ್ಮನೆಂಬ ಊರು ಕಾಯುವ ದೇವತೆಗಳ ಪುಟ್ಟ ಗುಡಿಯಿದೆ. ಅಲ್ಲಿಗೆ ಯಾರು ಬೇಕಾದರೂ ಹೋಗಿ ಆ ದೇವತೆಗಳನ್ನು ತೊಳೆದು, ಸಿಂಗರಿಸಿ, ಕೋಳಿ ಕುಯ್ದು ಪೂಜೆಮಾಡಿ ಬರಬಹುದು. ಪೂಜಾರಿ ಇಲ್ಲ. ಹಟ್ಟಿಯಲ್ಲಿರುವ ವೆಂಕಟೇಶ್ವರನ ಗುಡಿಗೆ ಈಗೊಂದು ಕಾಂಕ್ರೀಟ್ ರೂಪವಿದೆ. ಅಲ್ಲಿನ ಪೂಜೆಯ ಜವಾಬ್ದಾರಿ ಒಬ್ಬರದೇ ಅಲ್ಲ. ಹುಂಡಿಯೂ ಇಲ್ಲದ ಅವುಗಳಿಂದ ಸಿಗುವ ಆದಾಯವು ಅಂತದ್ದೇನೂ ಇಲ್ಲ. ಮಂಗಳಾರತಿ ಸಮಯದಲ್ಲಿ ತಟ್ಟೆಗೆ ಯಾವಾಗಲೋ ಬೀಳುವ ಆರ್ಕಾಸು-ಮೂರ್ಕಾಸಿನಿಂದ ಪೂಜೆ ಮಾಡುವವರ ಬದುಕೇನೂ ನಡೆಯುವುದಿಲ್ಲ.

ಮಹಾನ್ ದೈವ ಭಕ್ತನಾಗಿದ್ದ ತಾತನ ಕುರಿತು ಅವ್ವ ಯಾವಾಗಲೂ 'ದೇವ್ರೊಂದು ಭಾಗ, ಅಪ್ಪ ಒಂದು ಭಾಗ' ಎನ್ನುತ್ತಿದ್ದಳು. ನನ್ನ ತಾಯಿಗೆ ಚಿಕ್ಕಪ್ಪನಾಗಬೇಕಿದ್ದ ಕರ್ಯಣ್ಣ ತಾತ ತಲ್ಲೀನನಾಗಿ ವಾರ ಮಾಡುವಾಗ ಮಕ್ಕಳೆಲ್ಲ ನಾಮ ಹಾಕಿಸ್ಕೊಳ್ಳೋಕೆ ಕಾಂಪೀಟ್ ಮಾಡ್ತಿದ್ವಿ. ಶಂಖ ಊದಿ, ಜಾಗ್ಟೆ ಬಡ್ದು 'ಲಕ್ಷ್ಮಿನಾರಯಣ್ನರ ಗೋವಿಂದ' ಎನ್ನುತ್ತಲೇ ಗೋ...ವಿಂದಾ ಅಂತ ಹುಮ್ಮಸ್ಸಿನಿಂದ ಅರುಚುತ್ತಿದ್ದೆವು. ಯಾರನ್ನು ಗಟ್ಟದನಿಯಲ್ಲೂ ಮಾತಾನಾಡಿಸದ ಇವರಿಬ್ಬರೂ ಎಲ್ಲರಿಗೂ ಒಳ್ಳೆಯದಾಗಲೆಂದು ಮನಸಾರೆ ಹರಸುತ್ತಿದ್ದವರು. ಇಂತಹ ಹಲವಾರು ದೇವಸ್ಥಾನಗಳು, ದೇವರೊಂದಿಗೆ ಬೆಸೆವ ತಂತುಗಳು ದೇಶದೆಲ್ಲೆಡೆ ಇವೆ.

ತಾನೆಂಬುದೆಲ್ಲವ ಕಳಚಿಹಾಕಿ ಲೀನವಾಗಲು ಮಧ್ಯಸ್ಥರಿರಬೇಕೆ?

ದೇವರಿಗೆ ಮುಡಿಸುವ ಹೂವ ತಾ ಮುಡಿದು ನೋಡಿಕೊಂಡು ಚೆಂದವೆನಿಸಿದರೆ ಮುಡಿಸುತ್ತಿದ್ದ ಆಂಡಾಳ್, ಕಣ್ಣನ್ನೇ ಕಿತ್ತು ಶಿವನಿಗರ್ಪಿಸಿದ ಕಣ್ಣಪ್ಪ, ಕೃಷ್ಣನ ಮೇಲಿನ ಭಕ್ತಿಗೆ ವಿಷ ಕುಡಿಯಲು ಹಿಂಜರಿಯದ ಮೀರಾ, ಚೆನ್ನಮಲ್ಲಿಕಾರ್ಜುನನ ಸಂಗಾತಿ ಮಾಡಿಕೊಂಡ ಅಕ್ಕ ಮಹಾದೇವಿ, ಇರುವೆಯ ಕಾಲ ಸದ್ದನ್ನೂ ಕೇಳಿಸಿಕೊಳ್ಳುವ ಅಲ್ಲಾನ ಕರೆಯಲ್ಯಾಕೆ ಅರಚುವಿರಿ ಎಂದ ಕಬೀರ... ದೇವ-ಭಕ್ತರ ನಡುವೆ ತಾನೆಂಬುದೆಲ್ಲವ ಕಳಚಿ ಹಾಕುವ ಭಕ್ತಿಯ ದಿವ್ಯ ಭಾವದಲ್ಲಿ ಮಧ್ಯಸ್ಥರ/ಮಧ್ಯಸ್ಥಿಕೆಯ ಅಗತ್ಯವನ್ನೆ ಕಾಣಲಿಲ್ಲ. ಇವರೆಲ್ಲರಿಗೆ ಒಲಿದ ದೇವರುಗಳಂತೂ ಅಪ್ಪಟ ಪ್ರಜಾತಂತ್ರಿಗಳು.

ಅಪ್ಪಟ ದೈವಭಕ್ತೆಯಾದ ಅವ್ವನಿಂದ ಪ್ರಭಾವಿತಳಾದ ನನಗೆ ತಂತಾನೆ ಹೊಮ್ಮುವ ಗಾಢಭಕ್ತಿಯಲ್ಲಿ ಯಾರೂ ನೆನಪಾಗುತ್ತಿರಲಿಲ್ಲ. ಇಷ್ಟಪಟ್ಟು ಮಾಡುತ್ತಿದ್ದ ಪೂಜೆಯಲ್ಲಿ ದೇವರಗಳನ್ನೆಲ್ಲ ಮುಟ್ಟಿ, ಉಜ್ಜಿ ತೊಳೆದು, ಇರಿಸಿದ ಗಂಧ, ಕುಂಕುಮ, ಮುಡಿಸಿದ ಹೂ, ಬೆಳಗಿದ ದೀಪದಲ್ಲಿ ದೇವರುಗಳು ಲಕಲಕಿಸುವುದ ಕಂಡು ಎಂತದೋ ಒಂದು ಆನಂದ ಮೈ-ಮನವನ್ನೆಲ್ಲ ಹೂವನಾವರಿಸಿದ ಘಮದಂತೆ ಆವರಿಸುತ್ತಿತ್ತು. ಬೆಳೆದಂತೆ ಪೂಜೆ ಇರಲಿ ದೇವಸ್ಥಾನಗಳಿಗೆ ಪ್ರವೇಶವನ್ನೂ ಪಡೆಯದ ಜಾತಿಗೆ ಸೇರಿದವಳೆಂಬುದು ತಿಳಿದಾಗ ಹತ್ತಿರ ಹೋಗಿ ನೋಡಲಾಗದ, ಮುಟ್ಟಲಾಗದ ದೇವರು ಅವರಿಗೇ ಇರಲಿ ನನಗ್ಯಾಕೆ ಅನಿಸಿತ್ತು. ಮುಂದೆ ಈ ಲೋಕವೆಂಬ ವಿಸ್ಮಯದೊಳಗೆ ಸಕಲ ಜೀವವೂ ವಿಸ್ಮಯದ ಪ್ರತಿಬಿಂಬವೇ, ಎಲ್ಲವನೂ ಹೆಣೆದ ಬೆಸುಗೆ ತಿಳಿಯಲು ಅರಿವು-ಅಂತಃಕರಣದ ಬೆಳಕಷ್ಟೆ ಸಾಕಲ್ಲ ಎನಿಸಿದಾಗ ಎಲ್ಲ ಬಿಟ್ಟೆ.

ದೇವರು ಮತ್ತು ಆಲಯಗಳು ಸಂಸ್ಥೆಗಳಾಗಿ 'ಅರ್ಥ' ಪಡೆದುಕೊಂಡಾಗ ನಿಯಮಗಳಿಗೆ ಒಳಗಾಗಲೇ ಬೇಕು. ಅರ್ಥ ಕಳಚಿದಾಗ ಹಿಡಿದಿಟ್ಟುಕೊಳ್ಳಲೇನಿಲ್ಲ.

ಲೇಖಕಿ: ಸಾಮಾಜಿಕ ಕಾರ್ಯಕರ್ತೆ, ಬರಹಗಾರ್ತಿ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಬ್ರಹ್ಮಸೂತ್ರದಲ್ಲಿದೆ ಜೀವನಸೂತ್ರ

ವೇದ, ವೇದಾಂತ, ಮಹಾಭಾರತ, 18 ಮಹಾಪುರಾಣ ಸೇರಿದಂತೆ ಹಲವು ಶಾಸ್ತ್ರಗಂಥಗಳನ್ನು ರಚಿಸಿದ ವ್ಯಾಸರನ್ನ ಹಿಂದೂ ಸನಾತನ ಧರ್ಮದ ಪ್ರವರ್ತಕರೆನ್ನಬಹುದು. ಸಪ್ತರ್ಷಿಮಂಡಲದಲ್ಲಿ ನಕ್ಷತ್ರಗಳಾಗಿರುವ ವಸಿಷ್ಠ-ಅರುಂಧತಿಯರ ಮಗ ಶಕ್ತಿಮಹರ್ಷಿ ಮತ್ತು ಅದೃಶ್ಯಂತಿ ಮಗ ಪರಾಶರ. ಪರಾಶರ ಮತ್ತು ಸತ್ಯವತಿ ಮಗನೇ ಕೃಷ್ಣ ದ್ವೈಪಾಯನ; ಅಂದರೆ ಕಪ್ಪುದ್ವೀಪದಲ್ಲಿ ಜನಿಸಿದವನು. ಮುತ್ತಾತ ವಸಿಷ್ಠರು ಋಗ್ವೇದದ ಹತ್ತು ಮಂಡಲಗಳಲ್ಲಿ ಏಳನೇ ಮಂಡಲ ರಚಿಸಿದರೆ, ಮುಮ್ಮಗ ಕೃಷ್ಣ ದ್ವೈಪಾಯನ ವೇದಗಳನ್ನು ನಾಲ್ಕು ಭಾಗ ಮಾಡಿ ವೇದವ್ಯಾಸರಾದರು. ಋಗ್ವೇದದ 5ನೇ ಮಂಡಲ ರಚಿಸಿದ ಸಪ್ತರ್ಷಿ ಅತ್ರಿ ಮತ್ತು ಅನಸೂಯ ಮಕ್ಕಳೇ ದತ್ತಾತ್ರೇಯ, ಚಂದ್ರ ಮತ್ತು ದೂರ್ವಾಸ ಮುನಿ. ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರ ಅಂಶದಿಂದ ಹುಟ್ಟಿದ ದತ್ತಾತ್ರೇಯ ನಾಥಪಂಥದ ಆದಿಗುರುವಾಗಿ ಅವಧೂತ ದತ್ತಗುರು ಅನ್ನಿಸಿಕೊಂಡಿದ್ದಾರೆ.

ವಿಷಯಕ್ಕೆ ತಕ್ಕಂತೆ ವೇದಗಳನ್ನು ವಿಭಾಗ ಮಾಡಿ ಸಂರಕ್ಷಿಸಿದ ವೇದವ್ಯಾಸರು ವೇದಾಂತವನ್ನು ರಚಿಸಿದ್ದಾರೆ. ಭಾರತೀಯ ಶಾಸ್ತ್ರಗ್ರಂಥಗಳು ಚರ್ವಿತಚರ್ವಣಗಳಲ್ಲ, ಅವು ಮಾನವರ ಬದುಕಿನ ಅರ್ಥಗರ್ಭಿತ ವಿವರಣೆಗಳುಳ್ಳ ತತ್ವಶಾಸ್ತ್ರಗಳು ಎಂಬುದನ್ನು ವೇದಾಂತಗಳಾದ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಮನದಟ್ಟುಮಾಡಿಸುತ್ತವೆ. ವಿಶ್ವ ಆಧ್ಯಾತ್ಮಿಕ ದರ್ಶನಶಾಸ್ತ್ರಕ್ಕೆ ಮುನ್ನುಡಿ ಬರೆದಂತಿರುವ ಈ ವೇದಾಂತಗಳು ಸಾರ್ವಕಾಲಿಕ ಶ್ರೇಷ್ಠ ಗ್ರಂಥಗಳಾಗಿವೆ. ಪ್ರಸ್ಥಾನತ್ರಯಗಳೆನಿಸಿದ ಉಪನಿಷತ್‌ನ್ನು ಉಪದೇಶಪ್ರಸ್ಥಾನ ಮತ್ತು ಶ್ರುತಿಪ್ರಸ್ಥಾನವಾಗಿ, ಬ್ರಹ್ಮಸೂತ್ರವನ್ನು ಸೂತ್ರಪ್ರಸ್ಥಾನ ನ್ಯಾಯಪ್ರಸ್ಥಾನ ಮತ್ತು ಯುಕ್ತಿಪ್ರಸ್ಥಾನವಾಗಿ ಹಾಗೂ ಭಗವದ್ಗೀತೆಯನ್ನು ಸಾಧನಾ ಪರಸ್ಥಾನ ಮತ್ತು ಸ್ಮೃತಿಪ್ರಸ್ಥಾನವಾಗಿ ಗುರುತಿಸಲಾಗಿದೆ. ಆದಿ ಶಂಕರಾಚಾರ್ಯರು ಮತ್ತು ಮಧ್ವಾಚಾರ್ಯರು ಮೂರೂ ಪ್ರಸ್ಥಾನಗಳಿಗೂ ಭಾಷ್ಯ ಬರೆದಿದ್ದರೆ, ರಾಮಾನುಜಾಚಾರ್ಯರು 'ಬ್ರಹ್ಮಸೂತ್ರ' ಮತ್ತು 'ಭಗವದ್ಗೀತೆ'ಗೆ ಮಾತ್ರ ಭಾಷ್ಯ ಬರೆದಿದ್ದಾರೆ.

ಬಾದರಾಯಣ ಬರೆದ 'ಬ್ರಹ್ಮಸೂತ್ರ'ದಲ್ಲಿ ಒಟ್ಟು 555 ಸೂತ್ರಗಳಿವೆ. ಇವುಗಳನ್ನು ನಾಲ್ಕು ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಒಂದೊಂದು ಅಧ್ಯಾಯಕ್ಕೂ ನಾಲ್ಕು ಪಾದಗಳಿವೆ. ಈ ಪಾದಗಳಿಗೆ ಅಧಿಕರಣ ಮತ್ತು ಸೂತ್ರಗಳಿವೆ. ಮನೋವೈಜ್ಞಾನಿಕ, ಖಭೌತವಿಜ್ಞಾನ, ಅಧ್ಯಾತ್ಮತತ್ವಜ್ಞಾನದ ಮೂಲಕ ವಿಶ್ವದರ್ಶನ ಮಾಡಿಸುವ ಬ್ರಹ್ಮಸೂತ್ರ ಜಗತ್ತಿನ ಸೂತ್ರವಾಗಿದೆ. ಈ ಜಗತ್ತಿನ ಸೂತ್ರದಲ್ಲಿ ಜೀವಾತ್ಮಗಳ ಜೀವನಸೂತ್ರವೂ ಅಡಗಿದೆ. ಅದನ್ನು ತಿಳಿಯುವ ಗುಣಗ್ರಾಹಿ ಮನಸ್ಸಿರಬೇಕಷ್ಟೆ. 'ಬ್ರಹ್ಮಸೂತ್ರ'ದ ಮೊದಲ ಅಧ್ಯಾಯವಾದ ಸಮನ್ವಯದಲ್ಲಿ ಹೇಳುವ ತತ್ವವಿಚಾರಗಳನ್ನು ನಮ್ಮ ಅನುಭವಗಳಿಗೆ ಅಳವಡಿಸಿಕೊಂಡರೆ ಉತ್ತಮ ಬದುಕನ್ನು ರೂಪಿಸಿಕೊಳ್ಳಬಹುದು. ಎರಡನೆಯದಾದ ಅವಿರೋಧಾಧ್ಯಾಯದಿಂದ ಯಾರಲ್ಲೂ ವಿರೋಧ ಕಟ್ಟಿಕೊಳ್ಳದೆ ನೆಮ್ಮದಿಯ ಜೀವನ ನಡೆಸಬಹುದು. ಮೂರನೆಯದಾದ ಸಾಧನಾಧ್ಯಾಯ ವಿವೇಚನೆಯಿಂದ ಬದುಕುವ ಮಾರ್ಗ ಕಲಿಸುತ್ತದೆ. ನಾಲ್ಕನೆಯದಾದ ಫಲಾಧ್ಯಾಯವು ಅನುಭವ-ಮಿತ್ರತ್ವ-ಸಾಧನೆಯಿಂದ ಬದುಕಿನಲ್ಲಿ ಉತ್ತಮ ಫಲಪಡೆಯಬಹುದೆಂಬುದನ್ನು ಹೇಳುತ್ತದೆ.

ಬ್ರಹ್ಮಜ್ಞಾನವನ್ನು ಜಗತ್ತಿನ ಜ್ಞಾನದಂತೆ ನೋಡಿದಂತೆಯೇ, ಬ್ರಹ್ಮಸೂತ್ರವನ್ನು ಬದುಕಿನ ಸೂತ್ರದಂತೆ ವಿಶ್ಲೇಷಿಸಿದರೆ ಜೀವನದ 'ಸತ್ಯ'ದರ್ಶನವಾಗುತ್ತದೆ. ಯಾವುದೇ ಅನುಭವವಿಲ್ಲದೆ ಯಾವ ಕೆಲಸದಲ್ಲೂ ತೊಡಗಬಾರದು, ಮಾಡುವ ಕೆಲಸದಲ್ಲಿ ವಿರೋಧಾಭಾಸದ ಗಾಳಿ ಸುಳಿಯದಂತೆ ಎಚ್ಚರವಹಿಸಿ ಸಾಧನೆ ಮಾಡಿದರೆ, ಉತ್ತಮ ಫಲಿತ ಖಂಡಿತ ಸಿಗುತ್ತದೆ ಎಂಬುದನ್ನು ಬ್ರಹ್ಮಸೂತ್ರ ಸೂಚ್ಯವಾಗಿ ತಿಳಿಸುತ್ತದೆ. ಇದೇ ರೀತಿ ಭಾರತೀಯ ಶಾಸ್ತ್ರಗ್ರಂಥಗಳನ್ನೆಲ್ಲ ನಮ್ಮ ವಾಸ್ತವಿಕ ಬದುಕಿಗೆ ಒರೆಗಚ್ಚಿ ನೋಡಿದರೆ, ಅದರ ದಿವ್ಯಾಮೃತ ಸಿದ್ಧಿಸುತ್ತದೆ. ಬಿತ್ತುವ ಮುನ್ನ ಭೂಮಿ ಖಾಲಿಯಾಗೇ ಇರುತ್ತೆ. ಅಲ್ಲಿ ಅನುಭವಿ ಕೃಷಿಕ ಉತ್ತಿ-ಬಿತ್ತಿ ಶ್ರಮಪಟ್ಟಾಗಲೇ ಬೆಳೆ ಕಾಣುತ್ತೆ. ಹಾಗೇ, ಯಾವುದೇ ಶಾಸ್ತ್ರಗ್ರಂಥಗಳನ್ನು ಆನುಭಾವಿಕ ಪ್ರಜ್ಞೆಯಿಂದ ನೋಡಿದಾಗ ಮಾತ್ರ ಅಮೂಲ್ಯಸಾರ ಗೋಚರಿಸುತ್ತದೆ. ಹೀಗಾಗಿ ಸಾವಿರಾರು ವರ್ಷಗಳಿಂದ ಅನುಭವಜನ್ಯವಾಗಿ ಬಂದ ಶಾಸ್ತ್ರಗ್ರಂಥಗಳ ಜ್ಞಾನಾಮೃತ ಸವಿದವರು ಮಾತ್ರ 'ಸಚ್ಚಿದಾನಂದ'ಭಾವದಲ್ಲಿ ಪ್ರಜ್ವಲಿಸುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

'ಪ್ರಧಾನಿ ನರೇಂದ್ರ ಮೋದಿ ಅವರನ್ನು 153 ದೇಶಗಳ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಮೋದಿ ವಿರೋಧಿಗಳು ಇದನ್ನು ಗಮನಿಸುವುದೇ ಇಲ್ಲ. ಆದರೆ ಮೋದಿ ಅಭಿಮಾನಿಗಳು ಈ ವಿಡಿಯೊವನ್ನು ಹಂಚಿಕೊಳ್ಳದೇ ಇರುವುದಿಲ್ಲ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಮೋದಿ ಮತ್ತು ಡೊನಾಲ್ಡ್ ಟ್ರಂಪ್ ಅವರು ವೇದಿಕೆಯೊಂದರಲ್ಲಿ ಇರುವ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ.

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'2015ರಲ್ಲಿ ನರೇಂದ್ರ ಮೋದಿ ಅವರು ಕ್ಯಾಲಿಫೋರ್ನಿಯಾದಲ್ಲಿ ಅನಿವಾಸಿ ಭಾರತೀಯರ ಜತೆ ನಡೆಸಿದ ಸಂವಾದದ ವಿಡಿಯೊವನ್ನು ತಪ್ಪಾಗಿ ಹಂಚಿಕೊಳ್ಳಲಾಗಿದೆ. 153 ದೇಶಗಳ ಅಧ್ಯಕ್ಷ ಅಥವಾ ಮುಖ್ಯಸ್ಥನ ಹುದ್ದೆ ಎಂಬುದೇ ಅಸ್ತಿತ್ವದಲ್ಲಿ ಇಲ್ಲ. ಮೋದಿ ಅವರನ್ನು 153 ದೇಶಗಳ ಮುಖ್ಯಸ್ಥನಾಗಿ ಆಯ್ಕೆ ಮಾಡಲಾಗಿದೆ ಎಂಬುದು ಸುಳ್ಳು ಸುದ್ದಿ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಜೂನ್ 26, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ದ್ವಿತೀಯ. ಗಂ. 35-39 (ರಾ. 8-19) ಶನಿವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 0-47 (ಬೆ. 6-23) ಉಪರಿ ಉತ್ತರಾಷಾಢ ಗಂ. 57-45 (ಬೆ.ಝಾ. 5-29) ಐಂದ್ರ ನಾಮ ಯೋಗ ಗಂ. 40-39 ತೈತಲ ಕರಣ ಗಂ. 8-1 ವಿಷ ಗಂ. 20-2 ಅಮೃತ ಗಂ. 43-8 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-59 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 7

ಮೇಷ: ವಿದ್ಯಾಭ್ಯಾಸದಲ್ಲಿ ಪ್ರಗತಿ. ಉದ್ಯೋಗ ಬದಲಾವಣೆ ಸಾಧ್ಯತೆ. ಸರ್ಕಾರಿ ಸವಲತ್ತುಗಳು ಲಭ್ಯವಾಗುವವು. ಬರಹಗಾರರು, ವಿದ್ವಾಂಸರು, ಕಲಾವಿದರುಗಳಿಗೆ ಗೌರವಾದರಗಳು ಪ್ರಾಪ್ತವಾಗುವವು.

ವೃಷಭ: ವೃತ್ತಿಯಲ್ಲಿ ಯಶಸ್ಸು. ಪ್ರೇಮಿಗಳಿಗೆ ಶುಭಫಲ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ. ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ ಕಾಣಬಹುದು.

ಮಿಥುನ: ಹಿರಿಯರ ಅನಾರೋಗ್ಯದಿಂದಾಗಿ ವೆಚ್ಚ ಭರಿಸಬೇಕಾದೀತು. ವ್ಯವಹಾರದಲ್ಲಿ ಸಮಾಧಾನಕರ ಆದಾಯ. ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಸಂಭವ. ಅಪರೂಪದ ಅತಿಥಿಗಳ ಆಗಮನ ಸಾಧ್ಯತೆ.

ಕರ್ಕಾಟಕ: ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ. ಆಧ್ಯಾತ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಪ್ರಗತಿ. ದಾಂಪತ್ಯದ ಸಮಸ್ಯೆಗಳು ನಿವಾರಣೆಯಾಗಿ ಸಂತೃಪ್ತಿ. ಆಯುಧಗಳ ಬಗ್ಗೆ ನಿರ್ಲಕ್ಷ ಸಲ್ಲ.

ಸಿಂಹ: ಆರ್ಥಿಕ ಸಂಪನ್ಮೂಲಗಳು ಕ್ರೋಢೀಕರಣಗೊಂಡು ವ್ಯವಹಾರಗಳು ಉತ್ತಮವಾಗಿ ನಡೆಯಲಿವೆ. ವಿದೇಶ ಪ್ರಯಾಣದ ಭಾಗ್ಯ. ಮಹಿಳೆಯರಿಗೆ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ದೊರಕುವುದು.

ಕನ್ಯಾ: ಹೊಸ ಮನೆ ಯೋಜನೆಗಳು ರೂಪುಗೊಳ್ಳುವ ಸಾಧ್ಯತೆ. ವಾಹನ ವಿಷಯದಲ್ಲಿ ಜಾಗರೂಕರಾಗಿರಿ. ದೈನಂದಿನ ವ್ಯವಹಾರಗಳು ಸುಗಮವಾಗುವವು. ಬಂಧುಗಳೊಂದಿಗಿನ ಭಿನ್ನಾಭಿಪ್ರಾಯ ನಿವಾರಣೆ.

ತುಲಾ: ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ಆರೋಗ್ಯದಲ್ಲಿ ಸ್ಥಿರತೆಯಿಂದಾಗಿ ಸಂತಸದ ವಾತಾವರಣ. ವಿಶೇಷ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಾಧ್ಯತೆ. ಮಕ್ಕಳಿಂದ ನೆಮ್ಮದಿ. ಮನೆಯಲ್ಲಿ ಸಂತಸ.

ವೃಶ್ಚಿಕ: ಹಳೆಯ ಸಾಲಗಳಿಂದ ಮುಕ್ತರಾಗಿ ನೆಮ್ಮದಿ. ಅನಾವಶ್ಯಕ ಚಿಂತೆಗಳನ್ನು ದೂರ ಮಾಡಿಕೊಳ್ಳಿ. ಸ್ತ್ರೀಯರಿಗೆ ಇಷ್ಟಾರ್ಥ ಸಿದ್ಧಿಯಿಂದಾಗಿ ನೆಮ್ಮದಿ. ರಾಜಕಾರಣಿಗಳಿಗೆ ಯಶಸ್ಸು. ಸಾಮಾಜಿಕ ಮಾನ್ಯತೆ ದೊರಕುವ ಸಾಧ್ಯತೆ.

ಧನು: ಅತ್ಯಂತ ಲವಲವಿಕೆಯ ದಿನ. ಎಲ್ಲ ಕೆಲಸ ಕಾರ್ಯಗಳಲ್ಲಿ ಚಟುವಟಿಕೆಯಿಂದ ಕೂಡಿರುವಿರಿ. ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ದಿನ. ಪ್ರಯಾಣಕ್ಕಾಗಿ ಅಧಿಕ ಖರ್ಚು. ಆಯಾಸದಿಂದಾಗಿ ದೇಹಾಲಸ್ಯ.

ಮಕರ: ಬ್ಯಾಂಕ್, ಹಣಕಾಸು ಸಂಸ್ಥೆಗಳಿಗೆ ಜಾಮೀನು ನೀಡದಿರುವುದೇ ಒಳ್ಳೆಯದು. ಆರೋಗ್ಯದಲ್ಲಿ ಕಿರುಕುಳದಿಂದಾಗಿ ನಿರುತ್ಸಾಹ. ಸಂಗಾತಿಯಿಂದ ಸಾಂತ್ವನದ ಮಾತುಗಳು ಧೈರ್ಯ ನೀಡುವವು.

ಕುಂಭ: ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ. ಸರ್ಕಾರಿ ಉದ್ಯೋಗಿಗಳಿಗೆ ಪ್ರಶಂಸೆಯ ಸಾಧ್ಯತೆ. ಸ್ವಂತ ಉದ್ಯಮದಲ್ಲಿ ತೊಡಗಿದವರಿಗೆ ಉತ್ತಮ ಲಾಭ. ಸ್ನೇಹಿತರಿಗಾಗಿ ನಡೆಸುವ ಕೆಲಸಗಳಲ್ಲಿ ಯಶಸ್ಸು.

ಮೀನ: ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ತೊಂದರೆ. ಮಕ್ಕಳಿಂದ ನೆಮ್ಮದಿ. ಸಕುಟುಂಬ ತೀರ್ಥಕ್ಷೇತ್ರ ದರ್ಶನ ಸಾಧ್ಯತೆ. ಸಂಗಾತಿಯಿಂದ ಉತ್ತಮ ಸಹಕಾರ ದೊರೆತು ಸಂತೃಪ್ತಿ.


ನಿಮ್ಮ ಜನ್ಮದಿನ 26-ಜೂನ್ ಈ ದಿನ ಅತ್ಯಂತ ಶುಭಕರ. ವಿವೇಕ ಚಿತ್ತದಿಂದ ವಿರೋಧಿಗಳನ್ನು ಎದುರಿಸಿ ಯಶಸ್ಸು ಸಾಧಿಸಲಿದ್ದೀರಿ. ಉದ್ಯೋಗ ರಂಗದಲ್ಲಿ ತಲೆಬಾಗದ ನಿಲುವು. ಸ್ವಯಂ ಉದ್ಯೋಗದಲ್ಲಿ ಹೆಚ್ಚಿನ ಯಶಸ್ಸು. ಉನ್ನತ ಯೋಜನೆಗಳಿಂದಾಗಿ ಆರ್ಥಿಕ ಲಾಭ ದ್ವಿಗುಣಗೊಳ್ಳುವುದು. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ.

ಪದಬಂಧ 4639

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಒಪ್ಪವಾಗಿ ಮೂಡಿರುವ ಪ್ರೀತಿ (4)
5.ಈತ ಲಂಕಾಧಿಪತಿ (3)
6.ತಾಯಿಯ ಮನೆ ಕಿಟಕಿ (4)
8.ಗುಡಿಸಲ ಹತ್ತಿರವಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ಬರದಲ್ಲಿರುವ ಅನಾಗರಿಕ! (3)
16.ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ
1.ಬೇರೆಯವರನ್ನು ಆಶ್ರಯಿಸಿರುವವನು (5)
2.ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4. ಇದು ಸುಲಭ ಸಾಧ್ಯವಲ್ಲದುದು (3)
7.ಯಥಾಸ್ಥಿತಿಯಲ್ಲಿರುವ ತಪಸ್ವಿ! (2)
9.ದನವಿರುವ ಆಲಯ (3)
10.ಇದು ಕನ್ನಡಿಗನ ಎಕ್ಸಾಂಪಲ್! (5)
11.ಹದ ಪದದ ವಿರುದ್ಧ ಪದ (2)
12.ಮಂದಿಯ ಮನಸ್ಸು (4)
13.ತಪಸ್ಸಿನ ಪ್ರಭಾವ (4)
14.ಉತ್ತರದವರ ವೇತನ (3)



4638ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಜಾಪತಿ 3.ಪರಿಚ್ಛೇದ 4.ರತಿ 5.ಹಣವಂತ 7.ತಭೂ 8.ಪನ್ನ 9.ಮಿತವ್ಯಯ 11.ಬೆಂಕಿ 13.ಕಡುಕೋಪ 14.ಮಲಯಜ

ಮೇಲಿಂದ ಕೆಳಕ್ಕೆ: 1.ಪ್ರಭೆ 2.ಪದಾತಿ 3.ಪರಿಮಾಣ 4.ರಣಭೂಮಿ 5.ಹರೆಯ 6.ತಪರಾಕಿ 10.ವ್ಯರ್ಥಾಲಾಪ 11.ಬೆಂಬಲ 12.ಹುಂಜ

ಸುಡೊಕು 5025

		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9	8	5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5024 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಕಪ್ಪು ಶಿಲೀಂಧ್ರ: ಹಾಸಿಗೆ ವಿವರ ಪ್ರದರ್ಶನಕ್ಕೆ ಸೂಚನೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿತರಿಗೆ ಚಿಕಿತ್ಸೆ ಒದಗಿಸಲು ಹಾಸಿಗೆಗಳನ್ನು ಮೀಸಲಿಡುವ ಜತೆಗೆ ಲಭ್ಯವಿರುವ ಹಾಸಿಗೆಗಳ ವಿವರವನ್ನು ಪ್ರದರ್ಶಿಸುವಂತೆ ಆಸ್ಪತ್ರೆಗಳಿಗೆ ಸರ್ಕಾರ ಸೂಚಿಸಿದೆ. ಈ ಬಗ್ಗೆ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

‘ಪಕ್ಷದ ಸಿದ್ಧಾಂತ ಮತ್ತು ನಾಯಕತ್ವ ನಂಬಿ ಬರುವವರಿಗೆ ಮಾತ್ರ ಪ್ರವೇಶ’

ವ್ಯಕ್ತಿ ಪೂಜೆ ಮಾಡುವವರು ಬೇಡ: ಡಿಕೆಶಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ವ್ಯಕ್ತಿ ಪೂಜೆ, ಗುಂಪುಗಾರಿಕೆ ಮಾಡಿ ಪಕ್ಷ ಹಾಳು ಮಾಡುವವರು ನಮಗೆ ಬೇಡ. ಪಕ್ಷ ಪೂಜೆ ಮಾಡುವ, ಪಕ್ಷದ ಸಿದ್ಧಾಂತ ಮತ್ತು ನಾಯಕತ್ವ ನಂಬಿ ಬರುವವರಿಗೆ ಮಾತ್ರ ಪ್ರವೇಶವಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಹಾಸನ ಜಿಲ್ಲೆಯ ಬೇಲೂರು ಪುರಸಭೆಗೆ ಆಯ್ಕೆಯಾಗಿರುವ ಕಾಂಗ್ರೆಸ್ ಸದಸ್ಯರನ್ನು ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಅಭಿನಂದಿಸಿ ಹಾಗೂ ಇತರ ಪಕ್ಷಗಳ ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಂಡ ಬಳಿಕ ಅವರು ಮಾತನಾಡಿದರು.

‘ಬೇರೆ ಪಕ್ಷದಿಂದ ಬಂದು ಗುಂಪುಗಾರಿಕೆ ಮಾಡಿ, ಕಾಂಗ್ರೆಸ್‌ಗೆ ಹಾನಿ ಮಾಡುವವರ ಬಗ್ಗೆ ಎಚ್ಚರಿಕೆ ವಹಿಸಿ. ಅಂತಹ ವ್ಯಕ್ತಿಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದು ಬೇಡ. ಕಾಂಗ್ರೆಸ್‌ನ ತತ್ವ, ಸಿದ್ಧಾಂತ ಮತ್ತು ನಾಯಕತ್ವ ಒಪ್ಪಿಕೊಂಡು ಬರುವವರಿಗೆ ಮಾತ್ರ ಅವಕಾಶ ಕಲ್ಪಿಸಬೇಕು. ಇದಕ್ಕಾಗಿ ಪಕ್ಷ ಸೇರಲು ಬಯಸುವವರ ಪಟ್ಟಿಯನ್ನು ಸ್ಥಳೀಯ ಸಮಿತಿಗಳ ಮುಂದೆ ಇಟ್ಟು, ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕು’ ಎಂದು ಹಾಸನ ಜಿಲ್ಲೆಯ ಕಾಂಗ್ರೆಸ್ ಮುಖಂಡರಿಗೆ ಅವರು ಸೂಚಿಸಿದರು.

ಹಲವರು ಸಂಪರ್ಕದಲ್ಲಿ: ’ಬಿಜೆಪಿ ಸೇರಿದಂತೆ ವಿವಿಧ ಪಕ್ಷಗಳ ಹಲವು ಮುಖಂಡರು ನನ್ನ ಸಂಪರ್ಕದಲ್ಲಿದ್ದಾರೆ. ಎಷ್ಟು ಮಂದಿ ಸಂಪರ್ಕಿಸಿದ್ದಾರೆ ಎಂಬುದನ್ನು ಈಗಲೇ ಹೇಳುವುದಿಲ್ಲ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಅನೇಕರಿಗೆ ಖಚಿತವಾಗಿದೆ‘ ಎಂದು ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಕ್ಕೆ ಸ್ಪಂದಿಸಲು ಬಿಜೆಪಿಯವರಿಗೆ ಒಳ್ಳೆಯ ಅವಕಾಶವಿತ್ತು. ಆದರೆ, ಅವರು ಜನರಿಗೆ ಸ್ಪಂದಿಸುವ ಬದಲಿಗೆ ಸ್ಮಶಾನದ ಬೂದಿ ನೀಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಪ್ರತಿ ಹಳ್ಳಿಗಳಲ್ಲೂ ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಜನರನ್ನು ಗುರುತಿಸಿ, ಸಾಂತ್ವನ ಹೇಳುವ ಕೆಲಸ ಮಾಡಬೇಕು ಎಂದರು.

ಪದಾಧಿಕಾರಿಗಳ ಬದಲಾವಣೆ: ಎಲ್ಲ ಹಂತದ ಪದಾಧಿಕಾರಿಗಳನ್ನು ಶೀಘ್ರದಲ್ಲಿ ನೇಮಿಸಲಾಗುವುದು. ಸಕ್ರಿಯವಾಗಿಲ್ಲದವರನ್ನು ಕೈಬಿಡಲಾಗುವುದು. ಪಂಚಾಯಿತಿ ಮಟ್ಟದಲ್ಲಿ ವಿದ್ಯಾರ್ಥಿಗಳು, ಮಹಿಳೆಯರು, ದಲಿತರು, ಹಿಂದುಳಿದ ವರ್ಗಗಳ ಜನರು ಮತ್ತು ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನೀಡಿ ಸಮಿತಿಗಳನ್ನು ರಚಿಸಲಾಗುವುದು ಎಂದು ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಹುದ್ದೆಗೆ ಡಿಕೆಶಿ, ಖರ್ಗೆ, ಪರಮೇಶ್ವರ ಅರ್ಹರು: ಎಚ್.ವಿಶ್ವನಾಥ್

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಗಲು ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನಖರ್ಗೆ, ಜಿ.ಪರಮೇಶ್ವರ ಅತ್ಯಂತ ಅರ್ಹರು. ಅಂತಹವರಿಗೇ ಮುಖ್ಯಮಂತ್ರಿ ಹುದ್ದೆ ಕೊಡಬೇಕು ಎಂದು ವಿಧಾನಪರಿಷತ್ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ತಿಳಿಸಿದ್ದಾರೆ.

ಆ ಪಕ್ಷದಲ್ಲಿ ಅತ್ಯಂತ ಹಿರಿಯ ಪ್ರಭಾವಿ ನಾಯಕರು ಇದ್ದರೂ ಬೇರೆ ಪಕ್ಷದಿಂದ ಬಂದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಲಾಗಿತ್ತು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ವಿಧಾನಸಭಾ ಚುನಾವಣೆಗೆ ಸಾಕಷ್ಟು ಸಮಯ ಇದ್ದರೂ ಈಗಿನಿಂದಲೇ ತಮ್ಮ ಕಡೆಯವರ ಮೂಲಕ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುವ ಪ್ರಯತ್ನ ಸಿದ್ದರಾಮಯ್ಯ ನಡೆಸಿದ್ದಾರೆ. ಈಗಲೇ ಅವರು ಆ ರೀತಿ ಹೇಳುವುದು ಸರಿಯಲ್ಲ. ಚುನಾವಣೆಯಲ್ಲಿ ಗೆದ್ದ ಬಳಿಕ ಹೇಳಿಕೊಳ್ಳಲಿ ಎಂದರು.

ಸಿದ್ದರಾಮಯ್ಯ ಅವರ ಹಿಂಬಾಲಕರು ಈಗಲೇ 150 ಸೀಟು ಗೆಲ್ಲುತ್ತೇವೆ ಎನ್ನುತ್ತಿದ್ದಾರೆ . ಹಿಂದಿನ ಚುನಾವಣೆಯು ಸಿದ್ದರಾಮಯ್ಯ ನೇತೃತ್ವದಲ್ಲೇ ನಡೆಯಿತು. ಆಗ ಕಾಂಗ್ರೆಸ್ 70 ಕ್ಕೂ ಹೆಚ್ಚು ಸ್ಥಾನ ಗೆಲ್ಲಲು ಸಾಧ್ಯವಾಗಲಿಲ್ಲ. ಇವರಿಗೆ ಈಗ ಸ್ವಂತ ಕ್ಷೇತ್ರ ಇಲ್ಲದೆ, ಗೆಲ್ಲಬಹುದಾದ ಸುರಕ್ಷಿತ ಕ್ಷೇತ್ರಕ್ಕೆ ಹುಡುಕಾಟ ನಡೆಸಿದ್ದಾರೆ. ಮಾಜಿ ಮುಖ್ಯಮಂತ್ರಿಗೆ ಇಂತಹ ಪರಿಸ್ಥಿತಿ ಬರಬಾರದಿತ್ತು ಎಂದು ವಿಶ್ವನಾಥ್ ಲೇವಡಿ ಮಾಡಿದ್ದಾರೆ. ಜಮೀರ್ ಅಹಮ್ಮದ್ ಅವರನ್ನು ಮುಂದಿಟ್ಟುಕೊಂಡು ಹೋದರೆ ಸಿದ್ದರಾಮಯ್ಯ ಅವರಿಗೆ ಒಳ್ಳೆಯದಾಗುವುದಿಲ್ಲ ಎಂದಿದ್ದಾರೆ.

ನಾನೂ ಸಿ.ಎಂ ಸ್ಥಾನದ ಆಕಾಂಕ್ಷಿ: ತನ್ವೀರ್




ಮೈಸೂರು: ‘ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇಟ್ಟುಕೊಳ್ಳುವುದರಲ್ಲಿ ತಪ್ಪೇನಿಲ್ಲ. ನಾನೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದು, ಇತರರಿಗೆ ಪೈಪೋಟಿ ನೀಡುವಷ್ಟರ ಮಟ್ಟಿಗೆ ಬೆಳೆದಿದ್ದೇನೆ’ ಎಂದು ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು.

ಶುಕ್ರವಾರ ಮಾಧ್ಯಮದವರ ಜತೆ ಮಾತನಾಡಿ, ‘ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂಬುದನ್ನು ನಾನು, ನನ್ನ ಬೆಂಬಲಿಗರಿಂದ ಹೇಳಿಸಿಕೊಳ್ಳುವುದು ಸರಿಯಲ್ಲ. ಪಕ್ಷವನ್ನು ಅಧಿಕಾರಕ್ಕೆ ತರುವುದೇ ನಮ್ಮ ಮೊದಲ ಆದ್ಯತೆ. ಮುಖ್ಯಮಂತ್ರಿ ಯಾರು ಆಗುವರು ಎಂಬುದನ್ನು ತೀರ್ಮಾನಿಸುವುದು ವರಿಷ್ಠರಿಗೆ ಬಿಟ್ಟ ವಿಚಾರ’ ಎಂದರು.

‘ಕೆಪಿಸಿಸಿ ಅಧ್ಯಕ್ಷರಾಗಿರುವವರು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂಬುದು ಕಾಂಗ್ರೆಸ್‌ನಲ್ಲಿ ಹಿಂದಿನಿಂದಲೂ ಬಂದಿರುವ ಸಂಪ್ರದಾಯ. ಈಗಿನ ಪರಿಸ್ಥಿತಿಯಲ್ಲಿ ಒಬ್ಬರಿಂದಲೇ ಪಕ್ಷವನ್ನು ಅಧಿಕಾರಕ್ಕೆ ತರುವುದು ಕಷ್ಟ. ಸಾಮೂಹಿಕ ನಾಯಕತ್ವದಲ್ಲಿ ಮುಂದಿನ ಚುನಾವಣೆ ಎದುರಿಸಬೇಕು. ಎಲ್ಲ ನಾಯಕರು ಅವರವರ ಶಕ್ತಿಗೆ ಅನುಗುಣವಾಗಿ ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸ ಮಾಡುತ್ತಾರೆ’ ಎಂದು ನುಡಿದರು.

‘ಮುಂದಿನ ಸಿ.ಎಂ. ಚರ್ಚೆ ನೇಣು ಹಾಕಿಕೊಂಡಂತೆ’


ಕಾಗೋಡು ತಿಮ್ಮಪ್ಪ

ಸಾಗರ: ‘ರಾಜ್ಯದ ಮುಂದಿನ ಸಿ.ಎಂ. ಯಾರು ಎಂದು ಕಾಂಗ್ರೆಸ್ ನಾಯಕರು ಈಗಲೇ ಚರ್ಚಿಸುವುದು ನೇಣು ಹಾಕಿಕೊಂಡಂತಾಗಲಿದೆ’ ಎಂದು ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಹೇಳಿದರು.

ತಾಲ್ಲೂಕು ಆಡಳಿತದ ವೈಫಲ್ಯ ಖಂಡಿಸಿ ಕಾಂಗ್ರೆಸ್ ಶುಕ್ರವಾರ ಏರ್ಪಡಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ‘ಮುಂದಿನ ವಿಧಾನಸಭೆ ಚುನಾವಣೆ ಬರುವವರೆಗೂ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಕಾಂಗ್ರೆಸ್ ಹೋರಾಟ ನಡೆಸಬೇಕೇ ಹೊರತು, ಈಗಲೇ ಮುಂದಿನ ಸಿ.ಎಂ. ಯಾರು ಎಂದು ಚರ್ಚಿಸುವುದು ಸಾಧುವಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

ಸಿ.ಎಂ ಚರ್ಚೆ ಅಪಾಯಕಾರಿ: ಮಹದೇವಪ್ಪ



ಮೈಸೂರು: ‘ಮುಂದಿನ ಮುಖ್ಯಮಂತ್ರಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ಕೆಲ ನಾಯಕರು ಪರಸ್ಪರ ಕಚ್ಚಾಡಿಕೊಳ್ಳುವ ಮೂಲಕ ಕೋಮುವಾದಿಗಳ ಎದುರು ದುರ್ಬಲರಾಗಿ ಗೋಚರಿಸುವಂತಹ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಕಳವಳ ವ್ಯಕ್ತಪಡಿಸಿದ್ದಾರೆ.

‘ಮುಂದಿನ ಮುಖ್ಯಮಂತ್ರಿ ಯಾರು ಎಂಬುದು ಅಪಾಯಕಾರಿ ಚರ್ಚೆಯಾಗಿದೆ. ಇದರಿಂದ ಪಕ್ಷಕ್ಕೆ ಒಳಿತಿಗಿಂತ ಕೆಡುಕೇ ಹೆಚ್ಚು. ಬಿಜೆಪಿಯ ಕಳಪೆ ಆಡಳಿತದಿಂದ ಬೇಸತ್ತು ಕಣ್ಣೀರು ಹಾಕುತ್ತಿರುವ ಜನಸಾಮಾನ್ಯರ ಬದುಕಿಗೆ ವಿಶ್ವಾಸದ ಶಕ್ತಿಯಾಗಿ ನಿಲ್ಲಬೇಕಿದ್ದ ನಾಯಕರು ಕಚ್ಚಾಟದಲ್ಲಿ ನಿರತರಾಗಿರುವುದು ದುರದೃಷ್ಟಕರ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಜನಪರ ಆಡಳಿತವನ್ನು ನೀಡಲು ಎಲ್ಲ ರೀತಿಯಿಂದಲೂ ಶಕ್ತವಾಗಿರುವ, ಈಗಾಗಲೇ ಅದನ್ನು ಸಾಧಿಸಿ ತೋರಿಸಿರುವ ಕಾಂಗ್ರೆಸ್ ಪಕ್ಷದಲ್ಲಿ ಇಂತಹ ಚರ್ಚೆ ನಿಜಕ್ಕೂ ಒಳ್ಳೆಯದಲ್ಲ. ಮೊದಲು ಎಲ್ಲ ನಾಯಕರು ಜನಪರವಾಗಿ ಹೋರಾಡೋಣ. ಅಧಿಕಾರ ಕೊಡುವುದು, ಬಿಡುವುದು ಜನರ ವಿವೇಚನೆಗೆ ಬಿಟ್ಟ ವಿಚಾರ’ ಎಂದಿದ್ದಾರೆ.

ಕೋವಿಡ್: ಶೇ 2ರ ಗಡಿಯತ್ತ ದೃಢ ಪ್ರಮಾಣ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 3,310 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಸೋಂಕು ಧೃಡ ಪ್ರಮಾಣವು ಶೇ 2.09ಕ್ಕೆ ಇಳಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.58 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಬೆಂಗಳೂರಿನಲ್ಲಿ 614 ಮಂದಿ ಸೋಂಕಿರಾಗಿರುವುದು ಖಚಿತಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿವೆ. ಈ ಸಂಖ್ಯೆ 18 ಜಿಲ್ಲೆಗಳಲ್ಲಿ ಎರಡಂಕಿ ಹಾಗೂ ನಾಲ್ಕು ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.26 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 114 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಕಳೆದ ಎರುಡು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು ಇವಾಗಿವೆ. ಆದರೆ, ಮರಣ ಪ್ರಮಾಣ ದರವು ಶೇ 3.44ರಷ್ಟು ವರದಿಯಾಗಿದೆ. ರಾಜ್ಯದ 22 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

ಮೈಸೂರಿನಲ್ಲಿ 22 ಮಂದಿ, ಬೆಂಗಳೂರಿನಲ್ಲಿ 17 ಮಂದಿ ಹಾಗೂ ದಕ್ಷಿಣ ಕನ್ನಡದಲ್ಲಿ 14 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣ ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 34,539ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳು ಇಳಿಕೆ ಕಂಡಿದ್ದು, 1.07 ಲಕ್ಷ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 6,524 ಮಂದಿಗೆ ಕಾಯಿಲೆ ವಾಸಿಯಾಗಿದ್ದು, ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.84 ಲಕ್ಷ ದಾಟಿದೆ.

ಕಾಂಗ್ರೆಸಿಗರು 113 ಸ್ಥಾನ ಗೆಲ್ಲಲಿ: ಸಚಿವ ಭೈರತಿ ಬಸವರಾಜ ವ್ಯಂಗ್ಯ

ತುಮಕೂರು: ‘ಕಾಂಗ್ರೆಸ್ ಪಕ್ಷದವರು ಮೊದಲು 113 ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದ ನಂತರ ಮುಖ್ಯಮಂತ್ರಿ ಯಾರಾಗಬೇಕು ಎಂದು ತೀರ್ಮಾನಿಸಲಿ’ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ವ್ಯಂಗ್ಯವಾಡಿದರು.

‘ಮುಖ್ಯಮಂತ್ರಿ ಯಾರಾಗಬೇಕು ಎಂದು ಚುನಾವಣೆ ನಡೆಯುವ ಮುನ್ನವೇ ಕಾಂಗ್ರೆಸ್ ನಾಯಕರು ಕಿತ್ತಾಡುತ್ತಿದ್ದಾರೆ. ಮೊದಲು ತಮ್ಮ ಪಕ್ಷದಲ್ಲಿ ಉಂಟಾಗಿರುವ ಗೊಂದಲ ಸರಿಪಡಿಸಿಕೊಂಡು, ನಂತರ ಬಿಜೆಪಿ ಬಗ್ಗೆ ಮಾತನಾಡಲಿ’ ಎಂದು ಶುಕ್ರವಾರ ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಅಂಗನವಾಡಿಗಳಿಗೆ ವಿದ್ಯುತ್, ಫ್ಯಾನ್ ಒದಗಿಸಲು ಆದೇಶ

ಬೆಂಗಳೂರು: ರಾಜ್ಯದ ಅಂಗನವಾಡಿಗಳಿಗೆ ಮೂಲಸೌಕರ್ಯ ಒದಗಿಸಲು ಮಧ್ಯಂತರ ನಿರ್ದೇಶನ ನೀಡಲಾಗುವುದು ಎಂದು ಹೈಕೋರ್ಟ್ ತಿಳಿಸಿದೆ.

ಅಪೌಷ್ಟಿಕತೆಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಶೇ 50ರಷ್ಟು ಅಂಗನವಾಡಿಗಳಲ್ಲಿ ಮೂಲಸೌಕರ್ಯ ಇಲ್ಲ ಎಂಬುದನ್ನು ಗಮನಿಸಿತು.

‘ರಾಜ್ಯದ 65,911 ಅಂಗನವಾಡಿಗಳಲ್ಲಿ 14,948 ಕೇಂದ್ರಗಳಲ್ಲಿ ವಿದ್ಯುತ್ ಸಂಪರ್ಕ ಇಲ್ಲ. 18,974 ಕೇಂದ್ರಗಳಲ್ಲಿ ಫ್ಯಾನ್‌ಗಳಿಲ್ಲ, 13,690 ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ ಆಗಬೇಕಿದೆ’ ಎಂದು ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ಮಾಹಿತಿ ನೀಡಿತು.

‘ಲಭ್ಯ ಇರುವ ಅನುದಾನದಲ್ಲಿ 6,700 ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ, 8,300 ಕೇಂದ್ರಗಳಿಗೆ ಫ್ಯಾನ್‌ಗಳು ಮತ್ತು 3,542 ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸಲಾಗುವುದು’ ಎಂದು ವಿವರಿಸಿತು.

ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣ: ಅಂತಿಮ ವರದಿ ಸಲ್ಲಿಸದಂತೆ ಸೂಚನೆ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ಬಾಕಿ ಇರುವಾಗ ತನಿಖೆಯ ಅಂತಿಮ ವರದಿ ಸಲ್ಲಿಸಬಾರದು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಸೂಚನೆ ನೀಡಿತು.

‘ತನಿಖೆಯನ್ನು ಬೇರೆ ಸಂಸ್ಥೆಗೆ ವರ್ಗಾಯಿಸಬೇಕು ಎಂಬ ಮನವಿ ಆಧರಿಸಿ ವಿಚಾರಣೆಗಳು ನಡೆಯುತ್ತಿವೆ. ಇದರ ನಡುವೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವ ಆತಂಕ ಇದೆ’ ಎಂದು ಸಂತ್ರಸ್ತೆ ಪರ ಹಾಜರಾಗಿದ್ದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಆತಂಕ ವ್ಯಕ್ತಪಡಿಸಿದರು.

ವರದಿ ಸಲ್ಲಿಸದಂತೆ ಎಸ್‌ಐಟಿಗೆ ನಿರ್ದೇಶನ ನೀಡಿದ ಪೀಠ, ಜುಲೈ 5ಕ್ಕೆ ವಿಚಾರಣೆ ಮುಂದೂಡಿತು.


ಕಲಬುರ್ಗಿ ಜಿಲ್ಲೆಯ 10 ಕಡೆ ಐಸಿಎಂಆರ್ ತಂಡ ಭೇಟಿ, ಜನರ ರಕ್ತ ಮಾದರಿ ಸಂಗ್ರಹ

ಜನರ ರೋಗ ನಿರೋಧಕ ಶಕ್ತಿಯ ಅಧ್ಯಯನ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರ್ಗಿ ಜಿಲ್ಲೆ): ಕೋವಿಡ್ ಪ್ರಕರಣಗಳು ಹೆಚ್ಚು ವರದಿಯಾಗದ ಮತ್ತು ಕೋವಿಡ್‌ನಿಂದ ಸಾವು ಸಂಭವಿಸದ ಜಿಲ್ಲೆಯ 10 ಪ್ರದೇಶಗಳಿಗೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್)ಯ ತಜ್ಞರ ತಂಡ ಶುಕ್ರವಾರ ಭೇಟಿ ನೀಡಿ, ಹಲವು ಜನರ ರಕ್ತದ ಮಾದರಿ ಸಂಗ್ರಹಿಸಿತು.

ಚಿಂಚೋಳಿ ತಾಲ್ಲೂಕಿನ ನೀಮಾಹೊಸಹಳ್ಳಿಯಲ್ಲಿ ಮೂವರಿಗೆ ಮಾತ್ರ ಕೊರೊನಾ ಸೋಂಕು ತಗುಲಿದ್ದು, ಯಾರೂ ಸಾವನ್ನಪ್ಪಿಲ್ಲ ಎಂಬ ಮಾಹಿತಿಯನ್ನು ತಂಡದ ಸದಸ್ಯರು ದೃಢಪಡಿಸಿಕೊಂಡರು. ಈ ಗ್ರಾಮದಲ್ಲಿ ಲಸಿಕೆ ತೆಗೆದುಕೊಂಡವರು ಕೂಡ ಕಡಿಮೆ ಎಂಬ ಅಂಶ ಬೆಳಕಿಗೆ ಬಂತು.


ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕು ನೀಮಾಹೊಸಳ್ಳಿ ಗ್ರಾಮಕ್ಕೆ ಶುಕ್ರವಾರ ಭೇಟಿ ನೀಡಿದ ಐಸಿಎಂಆರ್ ತಜ್ಞರ ತಂಡದ ಸದಸ್ಯರು ಗ್ರಾಮಸ್ಥರ ರಕ್ತದ ಮಾದರಿ ಪಡೆದರು

‘ನೀಮಾಹೊಸಹಳ್ಳಿ ಗ್ರಾಮದಲ್ಲಿ 6 ರಿಂದ 9 ವರ್ಷದ ನಾಲ್ಕು ಮಕ್ಕಳು, 10 ರಿಂದ 17 ವರ್ಷ ವಯೋಮಾನದ ಎಂಟು ಮಕ್ಕಳು, 18 ವರ್ಷ ಮೇಲ್ಪಟ್ಟ 30 ಜನ ಹೀಗೆ ಒಟ್ಟು 42 ಜನರ ರಕ್ತದ ಮಾದರಿ ಸಂಗ್ರಹಿಸಿದ್ದೇವೆ. ಗ್ರಾಮದಲ್ಲಿ ಮದ್ಯ ಮಾರಾಟಕ್ಕೆ ಅವಕಾಶವಿಲ್ಲ. ಈ ವರೆಗೆ ಎರಡು ಕುಟುಂಬಗಳ ಮೂವರಲ್ಲಿ ಮಾತ್ರ ಕೊರೊನಾ ಸೋಂಕು ದೃಢಪಟ್ಟಿತ್ತು. ಕೋವಿಡ್ ಲಸಿಕೆ ಪಡೆಯಲು ಇಲ್ಲಿಯ ಜನರು ನಿರಾಸಕ್ತಿ ತೋರುತ್ತಿದ್ದಾರೆ. ಈ ಎಲ್ಲಾ ಅಂಶಗಳ ಬಗ್ಗೆ ಸಮೀಕ್ಷೆ ಮಾಡಲಾಗುವುದು’ ಎಂದು ಸಮೀಕ್ಷೆಯ ನೋಡಲ್ ಅಧಿಕಾರಿ ಐಸಿಎಂಆರ್‌ನ ಡಾ. ಚೇತನ್ ರಂಗರಾಜ್ ತಿಳಿಸಿದರು.

‘ಗ್ರಾಮಸ್ಥರಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗೆ ಕಾರಣವೇನು ಎಂಬುದನ್ನು ಪತ್ತೆ ಮಾಡಲು ರಕ್ತದ ಮಾದರಿ ಪಡೆದಿದ್ದು, ಚೆನ್ನೈ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು’ ಎಂದರು.

ಕಲಬುರ್ಗಿಯ ಶ್ರೀನಿವಾಸ ಸರಡಗಿ, ಉಮರ್ ಕಾಲೊನಿಯ ವಾರ್ಡ್ ಸಂಖ್ಯೆ-13, ಹೀರಾಪುರ ವಾರ್ಡ್ ಸಂಖ್ಯೆ-38, ಆಳಂದ ತಾಲ್ಲೂಕಿನ ಚಿಂಚೋಳಿ (ಬಿ), ಅಫಜಲಪುರದ ಅರ್ಜುಣಗಿ, ಸೇಡಂ ತಾಲ್ಲೂಕಿನ ಮುಧೋಳ, ಚಿತ್ತಾಪುರದ ಭೀಮನಳ್ಳಿ, ಜೇವರ್ಗಿಯ ಯಲ್ಗೋಡಕ್ಕೆ ತಂಡದ ಸದಸ್ಯರು ಭೇಟಿ ನೀಡಿದರು.

ವಿಶ್ವ ಆರೋಗ್ಯ ಸಂಸ್ಥೆಯ ಜಿಲ್ಲಾ ಪ್ರತಿನಿಧಿ ಡಾ. ಸತೀಶ ಘಾಟಗೆ ಮತ್ತು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ವಿವೇಕಾನಂದರೆಡ್ಡಿ ತಂಡದ ನೇತೃತ್ವ ವಹಿಸಿದ್ದರು.

ಸುಪ್ರೀಂ ಕೋರ್ಟ್ ನೇಮಿಸಿದ್ದ ರಾಷ್ಟ್ರೀಯ ಕಾರ್ಯಪಡೆ ಶಿಫಾರಸು ● ಆಮ್ಲಜನಕ ಹಂಚಿಕೆ ಸೂತ್ರ ಪ್ರಕಟ

‘ಆಮ್ಲಜನಕ ತುರ್ತು ಸಂಗ್ರಹಾಗಾರ ಬೇಕು’

ನವದೆಹಲಿ (ಪಿಟಿಐ): 'ದೇಶದಲ್ಲಿ 2-3 ವಾರಗಳಿಗೆ ಆಗುವಷ್ಟು ಆಮ್ಲಜನಕ ಸಂಗ್ರಹ ಸಾಮರ್ಥ್ಯವಿರುವ ಸಂಗ್ರಹಾಗಾರಗಳನ್ನು ಸ್ಥಾಪಿಸಬೇಕು. ತುರ್ತು ಬಳಕೆಗೆ ಇಂಧನ ಸಂಗ್ರಹಾಗಾರಗಳನ್ನು ಸ್ಥಾಪಿಸಿರುವಂತೆಯೇ, ಆಮ್ಲಜನಕದ ಸಂಗ್ರಹಾಗಾರಗಳನ್ನು ಸ್ಥಾಪಿಸಬೇಕು' ಎಂದು ಆಮ್ಲಜನಕ ಹಂಚಿಕೆ ಸೂತ್ರವನ್ನು ನಿಗದಿ ಮಾಡಲು ಸುಪ್ರೀಂ ಕೋರ್ಟ್ ರಚಿಸಿದ್ದ ರಾಷ್ಟ್ರೀಯ ಕಾರ್ಯ ಪಡೆ (ಎನ್‌ಟಿಎಫ್) ಶಿಫಾರಸು ಮಾಡಿದೆ.

ಸುಪ್ರೀಂ ಕೋರ್ಟ್‌ಗೆ ಎನ್‌ಟಿಎಫ್ ಸಲ್ಲಿಸಿರುವ ವರದಿಯಲ್ಲಿ ಈ ಶಿಫಾರಸು ಇದೆ. ಅಲ್ಲದೆ, ಆಮ್ಲಜನಕದ ಅಗತ್ಯವನ್ನು ಹೇಗೆ ಲೆಕ್ಕಹಾಕಬೇಕು ಮತ್ತು ಹೇಗೆ ಹಂಚಿಕೆ ಮಾಡಬೇಕು ಎಂಬುದನ್ನೂ ಎನ್‌ಟಿಎಫ್ ಸೂಚಿಸಿದೆ.

‘100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯಲ್ಲಿ ಶೇ 25ರಷ್ಟು ತುರ್ತು ಚಿಕಿತ್ಸಾ ಘಟಕ (ಐಸಿಯು) ಹಾಸಿಗೆಗಳು ಇದ್ದರೆ, ಪ್ರತಿದಿನ ಆ ಆಸ್ಪತ್ರೆಗೆ 1.5 ಟನ್ ಆಮ್ಲಜನಕ ಬೇಕಾಗುತ್ತದೆ. ಪರಿಸ್ಥಿತಿಗೆ ಅನುಗುಣವಾಗಿ ಈ ಸೂತ್ರದಲ್ಲಿ ಬದಲಾವಣೆ ಮಾಡಿಕೊಳ್ಳಬಹುದು' ಎಂದು ಎನ್‌ಟಿಎಫ್ ಹೇಳಿದೆ.

‘ತಮಗೆ ಹಂಚಿಕೆಯಾದ ಆಮ್ಲಜನಕವನ್ನು ಅದೇ ದಿನ ಸಂಜೆ 4ರ ಒಳಗೆ ರಾಜ್ಯ ಸರ್ಕಾರಗಳು ಪಡೆದುಕೊಳ್ಳದೇ ಇದ್ದರೆ, ಉಳಿದಿರುವ ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಹಂಚಿಕೆ ಮಾಡಬೇಕು' ಎಂದು ಎನ್‌ಟಿಎಫ್ ಶಿಫಾರಸು ಮಾಡಿದೆ.

‘ತುರ್ತು ಸಂದರ್ಭಗಳಲ್ಲಿ ಆಮ್ಲಜನಕದ ಅವಶ್ಯಕತೆ ಅಧಿಕವಾಗಿದ್ದರೆ, ಈ ಸೂತ್ರವನ್ನು ಬದಲಿಸಿಕೊಳ್ಳಬಹುದು. ಇದಕ್ಕಾಗಿ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ, ಆಮ್ಲಜನಕದ ಅವಶ್ಯಕತೆ ಇರುವ ರೋಗಿಗಳ ಸಂಖ್ಯೆ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳು ದುಪ್ಪಟ್ಟಾಗುವ ಅವಧಿಯನ್ನು ಪರಿಗಣಿಸಿ ಈ ಸೂತ್ರವನ್ನು ಬದಲಿಸಿಕೊಳ್ಳಬೇಕು' ಎಂದು ಎನ್‌ಟಿಎಫ್ ಹೇಳಿದೆ.

ಕೋವಿಡ್‌ನಂತಹ ಸಾಂಕ್ರಾಮಿಕಗಳು ಮತ್ತೆ ಬಂದರೆ, ಅದನ್ನು ಎದುರಿಸಲು ಅಗತ್ಯವಿರುವಷ್ಟು ಆಮ್ಲಜನಕ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಎನ್‌ಟಿಎಫ್ ಹೇಳಿದೆ. ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿನ ಆಸ್ಪತ್ರೆಗಳು ತಮ್ಮದೇ ಪ್ರತ್ಯೇಕ ಅನಿಲ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಹೊಂದಿರಬೇಕು. ತುರ್ತು ಸಂದರ್ಭದಲ್ಲಿ ಅಗತ್ಯವಿರುವಷ್ಟು ಅನಿಲ ಆಮ್ಲಜನಕವನ್ನು ಈ ಘಟಕಗಳ ಮೂಲಕ ಪಡೆದುಕೊಳ್ಳಬಹುದು. ಈ ಕೆಲಸ ತುರ್ತಾಗಿ ಆಗಬೇಕು ಎಂದು ಎನ್‌ಟಿಎಫ್ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಆಮ್ಲಜನಕ ಉತ್ಪಾದನೆ, ಹಂಚಿಕೆ ಮತ್ತು ಪೂರೈಕೆಗೆ ಸಂಬಂಧಿಸಿದಂತೆ ಆಸ್ಪತ್ರೆಗಳು, ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಏನು ಮಾಡಬೇಕು ಎಂಬುದನ್ನು ಎನ್‌ಟಿಎಫ್ ಶಿಫಾರಸು ಮಾಡಿದೆ.

ಆಸ್ಪತ್ರೆಗಳು
- ಆಸ್ಪತ್ರೆಗಳು ಸದಾ 6 ಸಿಲಿಂಡರ್‌ಗಳ ಹೆಚ್ಚುವರಿ ಆಮ್ಲಜನಕ ಸಂಗ್ರಹವನ್ನು ಹೊಂದಿರಬೇಕು
- ಮುಂದಿನ 24 ಗಂಟೆಗಳಲ್ಲಿ ಎಷ್ಟು ಆಮ್ಲಜನಕ ಬೇಕಾಗಬಹುದು ಎಂಬುದನ್ನು ಲೆಕ್ಕಹಾಕಬೇಕು
- ಆಮ್ಲಜನಕ ಬಳಕೆ ಲೆಕ್ಕಪರಿಶೋಧನೆ ನಡೆಸಬೇಕು

ಕೇಂದ್ರ ಸರ್ಕಾರ
- ಆಮ್ಲಜನಕ ಸಿಲಿಂಡರ್‌ಗಳ ತಯಾರಿಕೆ, ಆಮ್ಲಜನಕ ಉತ್ಪಾದನೆ ಸಾಮರ್ಥ್ಯ ಹೆಚ್ಚಳಕ್ಕೆ ಉತ್ತೇಜನ ನೀಡಬೇಕು
- ರಾಜ್ಯಗಳಲ್ಲಿನ ಆಸ್ಪತ್ರೆ ಹಾಸಿಗೆಗಳು, ಐಸಿಯು ಹಾಸಿಗೆಗಳು, ಆಮ್ಲಜನಕ ಅಗತ್ಯವಿರುವ ರೋಗಿಗಳ ಸಂಖ್ಯೆಯ ವಿವರವನ್ನು ಪರಿಶೀಲಿಸಬೇಕು
- ನಿಗದಿ ಮಾಡಲಾದ ಸೂತ್ರದ ಅನ್ವಯ ರಾಜ್ಯಗಳಿಗೆ ಆಮ್ಲಜನಕವನ್ನು ಹಂಚಿಕೆ ಮಾಡಬೇಕು
- ಹಂಚಿಕೆ ಮಾಡಲಾದ ಆಮ್ಲಜನಕವನ್ನು ಪೂರೈಸುವ ಕಾರ್ಯಯೋಜನೆಯನ್ನು ಸಿದ್ಧಪಡಿಸಬೇಕು. ಅಗತ್ಯವಿದ್ದರೆ ಆಮ್ಲಜನಕದ ಟ್ಯಾಂಕರ್‌ಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದು

ರಾಜ್ಯ ಸರ್ಕಾರಗಳು
- ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿನ ಐಸಿಯು ಹಾಸಿಗೆಗಳು, ಆಮ್ಲಜನಕ ಅವಶ್ಯಕತೆ ಇರುವ ರೋಗಿಗಳ ಸಂಖ್ಯೆಯ ವಿವರ ಇರುವ ಡ್ಯಾಶ್‌ಬೋರ್ಡ್ ನಿರ್ವಹಣೆ ಮಾಡಬೇಕು
- ರಾಜ್ಯದ ಆಸ್ಪತ್ರೆಗಳಲ್ಲಿ ಆಮ್ಲಜನಕ ಬಳಕೆಯ ಲೆಕ್ಕಪರಿಶೋಧನೆ ನಡೆಸಬೇಕು. ಆಸ್ಪತ್ರೆಗಳಲ್ಲಿನ ಸಂಗ್ರಹಾಗಾರಗಳು, ಸಿಲಿಂಡರ್‌ಗಳು, ಕೊಳವೆ ಮಾರ್ಗಗಳು, ಅನಿಲ ಆಮ್ಲಜನಕ ಉತ್ಪಾದನಾ ಘಟಕಗಳು, ಆಮ್ಲಜನಕ ಸಾಂದ್ರಕಗಳ ವಿವರವನ್ನು ಸಂಗ್ರಹಿಸಬೇಕು
- ರಾಜ್ಯದಲ್ಲಿನ ಆಮ್ಲಜನಕ ಟ್ಯಾಂಕರ್‌ಗಳ ಮೇಲೆ ನಿಗಾ ಇರಿಸಬೇಕು. ಆಮ್ಲಜನಕ ಅಗತ್ಯವಿರುವ ಆಸ್ಪತ್ರೆಗಳು ತುರ್ತು ಕರೆ ನೀಡಲು ವ್ಯವಸ್ಥೆ ಮತ್ತು ವಾರ್ ರೂಂ ರಚಿಸಬೇಕು
- ನಿಗದಿ ಮಾಡಿದ ಸೂತ್ರದ ಅನ್ವಯ ರಾಜ್ಯಕ್ಕೆ ಅಗತ್ಯವಿರುವ ಆಮ್ಲಜನಕದ ಪ್ರಮಾಣವನ್ನು ಲೆಕ್ಕ ಹಾಕಬೇಕು

ಸಾಯಿ ವಿ.ವಿ. ಪ್ರವೇಶ ಆರಂಭ

ಚೆನ್ನೈ: ಚೆನ್ನೈನ ಸಾಯಿ ವಿಶ್ವವಿದ್ಯಾಲಯವು 2021-2022ನೇ ಸಾಲಿನ ಪದವಿ ಕೋರ್ಸ್‌ಗಳ ಪ್ರವೇಶವನ್ನು ಆರಂಭಿಸಿದೆ.

ವಿಶ್ವವಿದ್ಯಾಲಯವು ಕಲೆ ಮತ್ತು ವಿಜ್ಞಾನ ಕಾಲೇಜು, ಸ್ಕೂಲ್ ಆಫ್ ಕಂಪ್ಯೂಟಿಂಗ್ ಅಂಡ್ ಡಾಟಾ ಸೈನ್ಸ್ ಮತ್ತು ಕಾನೂನು ಕಾಲೇಜನ್ನು ಹೊಂದಿದೆ. ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಎಸ್‌ಎಟಿ/ಎಸಿಟಿ/ಪಿಯರ್ಸನ್ ಅಂಡರ್ ಗ್ರಾಜುಯೇಟ್ ಎಂಟ್ರೆನ್ಸ್ ಎಕ್ಸಾಮ್‌ನ ಅಂಕಗಳನ್ನು ಪರಿಗಣಿಸಲಾಗುತ್ತದೆ ಎಂದು ವಿಶ್ವವಿದ್ಯಾಲಯವು ತಿಳಿಸಿದೆ.

‘ಸಮಸ್ಯೆಗಳನ್ನು ಪರಿಹರಿಸಲು ಸಮರ್ಥರನ್ನಾಗಿ ವಿದ್ಯಾರ್ಥಿಗಳನ್ನು ರೂಪಿಸುವುದು ಸಾಯಿ ವಿಶ್ವವಿದ್ಯಾಲಯದ ಗುರಿ. ವಿದ್ಯಾರ್ಥಿಗಳು ವಿಮರ್ಶಾತ್ಮಕವಾಗಿ ಯೋಚಿಸುವ, ಪರಿಸ್ಥಿತಿಗಳನ್ನು ವಿಶ್ಲೇಷಣಾತ್ಮಕವಾಗಿ ಗ್ರಹಿಸುವ ಮತ್ತು ಅತ್ಯುತ್ತಮವಾಗಿ ನಿರ್ವಹಣೆ ಮಾಡುವ ಸಾಮರ್ಥ್ಯವನ್ನು ಉದ್ದೀಪಿಸುವ ಕಲಿಕಾ ವಾತಾವರಣವನ್ನು ನಾವು ನಿರ್ಮಿಸುತ್ತೇವೆ’ ಎಂದು ಸಾಯಿ ವಿಶ್ವವಿದ್ಯಾಲಯದ ಸಂಸ್ಥಾಪಕ ಮತ್ತು ಛಾನ್ಸಲರ್ ಕೆ.ವಿ.ರಮಣಿ ಹೇಳಿದ್ದಾರೆ.

ಚೆನ್ನೈನ ಹಳೆ ಮಹಾಬಲಿಪುರಂ ರಸ್ತೆಯಲ್ಲಿರುವ ನವಲೂರಿನಲ್ಲಿನ 240 ವಿದ್ಯಾರ್ಥಿಗಳ ಸಾಮರ್ಥ್ಯದ ಕ್ಯಾಂಪಸ್ ನಿರ್ಮಾಣಕ್ಕೆ ಕಳೆದ ವರ್ಷ ಅಂದಿನ ಮುಖ್ಯಮಂತ್ರಿ ಇ. ಕೆ.ಪಳನಿಸ್ವಾಮಿ ಅವರು ಶಿಲಾನ್ಯಾಸ ನೆರವೇರಿಸಿದ್ದರು. ಪಯನೂರಿನಲ್ಲಿ ಮುಖ್ಯ ಕ್ಯಾಂಪಸ್ ನಿರ್ಮಾಣ ನಡೆಯುತ್ತಿದೆ ಎಂದು ವಿಶ್ವವಿದ್ಯಾಲಯವು ಹೇಳಿದೆ.

ಸಿ.ಎಂ ಬದಲು: ಮತ್ತೆ ಹುಯಿಲು

ಒಂದನೇ ಪುಟದಿಂದ

ಯಡಿಯೂರಪ್ಪ ಅವರ ಮಕ್ಕಳಾದ ಬಿ.ವೈ. ವಿಜಯೇಂದ್ರ, ಬಿ.ವೈ. ರಾಘವೇಂದ್ರ ಅವರು ಈ ಬೆಳವಣಿಗೆಯ ಆಸುಪಾಸಿನಲ್ಲೇ ದೆಹಲಿಗೆ ಹೋಗಿ ವಾಪಸ್ ಆಗಿರುವುದು, ಮೈತ್ರಿ ಸರ್ಕಾರ ಉರುಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರಮೇಶ ಜಾರಕಿಹೊಳಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಹೇಳಿರುವುದು ರಾಜ್ಯ ರಾಜಕೀಯದಲ್ಲಿ ‘ನಿಗೂಢ’ ಚಟುವಟಿಕೆಗಳು ನಡೆಯುತ್ತಿರುವುದರ ಸೂಚಕಗಳಾಗಿವೆ ಎಂದೂ ಹೇಳಲಾಗುತ್ತಿದೆ.

ವಿಜಯೇಂದ್ರ ದೆಹಲಿ ಭೇಟಿಯ ಗುಟ್ಟು?

ಒಂದನೇ ಪುಟದಿಂದ

‘ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸಚಿವ ಸಂಪುಟ ವಿಸ್ತರಣೆ ವೇಳೆ ರಾಘವೇಂದ್ರ ಅವರಿಗೆ ಸಚಿವ ಸ್ಥಾನ ಸಿಗುವುದು ಬಹುತೇಕ ಖಚಿತ. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಗೌರವಯುತವಾಗಿ ಬೀಳ್ಕೊಡಲು ಈ ದಾರಿಯನ್ನು ಪಕ್ಷದ ವರಿಷ್ಠರು ಹುಡುಕಿದ್ದಾರೆ. ದೆಹಲಿಗೆ ಭೇಟಿ ವೇಳೆ, ಯಡಿಯೂರಪ್ಪ ಮಕ್ಕಳಿಗೆ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಅದೊಂದನ್ನು ಬಿಟ್ಟರೆ ಬೇರೆ ಯಾವ ಬೇಡಿಕೆಯನ್ನು ಈ ಹಂತದಲ್ಲಿ ಈಡೇರಿಸಲಾಗದು’ ಎಂದು ವರಿಷ್ಠರು ಸೂಚಿಸಿದ್ದಾರೆ ಎಂದು ಬಿಜೆಪಿ ನಾಯಕರ ಮಧ್ಯೆ ಚರ್ಚೆಗಳು ನಡೆಯುತ್ತಿವೆ.

‘ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವೆ’

ಒಂದನೇ ಪುಟದಿಂದ

‘ಗಾಡ್‌ಫಾದರ್ ದೇವೇಂದ್ರ ಫಡಣವಿಸ್ ಭೇಟಿಯಾಗಲು ಮುಂಬೈಗೆ ಹೋಗಿದ್ದೆ. ಅವರೊಂದಿಗೆ ಚರ್ಚಿಸಿದ್ದನ್ನು ಹೇಳಲಾಗುವುದಿಲ್ಲ. ಮಂತ್ರಿ ಸ್ಥಾನಕ್ಕಾಗಿ ಲಾಬಿ ನಡೆಸುವಷ್ಟು ಸಣ್ಣ ಮನುಷ್ಯ ನಾನಲ್ಲ. ಹೀಗಿರುವಾಗ ನನ್ನನ್ನು ಮಂತ್ರಿ ಮಾಡಿರೆಂದು ಯಾರ ಮನೆ ಬಾಗಿಲಿಗೂ ಹೋಗುವುದಿಲ್ಲ’ ಎಂದರು.

‘ಫಡಣವಿಸ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಆಗಿದ್ದಾಗ, ಇಲ್ಲಿ ಆಪರೇಷನ್ ಕಮಲ ಮಾಡಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ತೆಗೆಯುವುದಾಗಿ ಮಾತು ಕೊಟ್ಟಿದ್ದೆ. ಆಗ ನಾನು ಹೇಳಿದ್ದು ನಡೆದಿರುವುದನ್ನು ಅವರಿಗೆ ನೆನಪಿಸಿದೆ. ಅವರು ನನ್ನ ಬೆನ್ನಿಗೆ ನಿಂತಿದ್ದಾರೆ’ ಎಂದರು.

‘ಮುಂಬೈಗೆ ಹೋಗಿದ್ದರಲ್ಲಿ ರಾಜಕಾರಣವಿದೆ. ಅದರಲ್ಲಿ ಮುಚ್ಚು–ಮರೆ ಏನಿಲ್ಲ. ಆದರೆ, ಸುತ್ತೂರು ಮಠಕ್ಕೆ ಹೋಗಿದ್ದರಲ್ಲಿ ರಾಜಕಾರಣವಿಲ್ಲ. ಅವರ ಪೂರ್ವಾಶ್ರಮದ ತಾಯಿ ನಿಧನರಾಗಿದ್ದರಿಂದ ಶ್ರೀಗಳನ್ನು ಮಾತನಾಡಿಸಲು ಹೋಗಿದ್ದೆ’ ಎಂದು ಪ್ರತಿಕ್ರಿಯಿಸಿದರು.

‘ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದು ನಿಜ. ಅದರಲ್ಲಿ ಎರಡು ಮಾತಿಲ್ಲ. ಆಂತರಿಕವಾಗಿ ಮಿತ್ರ ಮಂಡಳಿಯೊಂದಿಗೆ ಈ ಬಗ್ಗೆ ಮಾತನಾಡಿದ್ದೆ. ಅದು ಹೇಗೆ ಸೋರಿಕೆಯಾಯಿತೋ ಗೊತ್ತಿಲ್ಲ. ಇವತ್ತೇ ರಾಜೀನಾಮೆ ಕೊಡುತ್ತೇನೆ ಎಂದಲ್ಲ. 7–8 ದಿನಗಳು ಬಿಟ್ಟು ಎಲ್ಲವನ್ನೂ ತಿಳಿಸುವೆ ಎಂದರು.

‘ಒಂದು ವೇಳೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೂ ಬಿಜೆಪಿಯಲ್ಲೇ ಇರುತ್ತೇನೆ. ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್‌ನಲ್ಲಿ 20 ವರ್ಷ ಇದ್ದರೂ ಸಿಗದ ಪ್ರೀತಿ, ವಿಶ್ವಾಸ ಈ ಪಕ್ಷದಲ್ಲಿ ಸಿಕ್ಕಿದೆ. ನನ್ನ ರಾಜಕೀಯ ಜೀವನ ಬಿಜೆಪಿಯಲ್ಲೇ ಕೊನೆಗೊಳ್ಳುತ್ತದೆ’ ಎಂದರು.

ಬೆನ್ನಿಗೆ ಚೂರಿ: ‘ಪಕ್ಷದ ನಾಯಕರೇ ಬೆನ್ನಿಗೆ ಚೂರಿ ಹಾಕಿದರೇ’ ಎಂಬ ಪ್ರಶ್ನೆಗೆ, ‘ಪಕ್ಷ, ಸಂಘ ಪರಿವಾರ ಹಾಗೂ ದೆಹಲಿಯ ಹೈಕಮಾಂಡ್ ನನ್ನನ್ನು ಬಹಳ ಪ್ರೀತಿಯಿಂದ ನಡೆಸಿಕೊಂಡಿದೆ. ಕೆಲವೊಂದು ಜನ ಚೂರಿ ಹಾಕಿದ್ದಾರೆ. ಆ ಬಗ್ಗೆ ಮುಂದಿನ ದಿನಗಳಲ್ಲಿ ಹೇಳುತ್ತೇನೆ’ ಎಂದು ತಿಳಿಸಿದರು.

‘ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಆತುರದ ನಿರ್ಧಾರವಲ್ಲ. ನನ್ನ ಸಹೋದರರು ಶಾಸಕರಾಗಿದ್ದಾರೆ. ನನ್ನ ಮಕ್ಕಳಿದ್ದಾರೆ. ರಮೇಶ ಜಾರಕಿಹೊಳಿ ಮೂಲೆಗುಂಪು ಮಾಡಿದರೆ ಎಲ್ಲವೂ ಮುಗಿದು ಹೋಯಿತು ಎಂದು ನಮ್ಮ ವಿರೋಧಿಗಳು ತಿಳಿದಿರಬಹುದು. ಆದರೆ, ನಮ್ಮ ಮನೆಯಲ್ಲಿ ಹತ್ತು ಪಟ್ಟು ಹುಲಿಗಳಿವೆ. ನಾವು ಎಲ್ಲದಕ್ಕೂ ಸಿದ್ಧರಿದ್ದೇವೆ’ ಎಂದು ಪ್ರತಿಕ್ರಿಯಿಸಿದರು.

‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದು, ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ. ಮುಂದೆ ಹೈಕಮಾಂಡ್ ಏನು ನಿರ್ಧಾರ ಕೈಗೊಳ್ಳುತ್ತದೆಯೋ ನೋಡೋಣ’ ಎಂದರು.

‘ಮುಖ್ಯಮಂತ್ರಿ ಬದಲಾವಣೆಯ ಪರೀಕ್ಷೆ: ಶೀಘ್ರ ಫಲಿತಾಂಶ’

ಒಂದನೇ ಪುಟದಿಂದ

‘ನಾನೊಬ್ಬ ಜವಾಬ್ದಾರಿಯುತ ಸಚಿವನಾಗಿ ನನ್ನ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದೇನೆ. ವೈಯಕ್ತಿಕ ನೋವುಗಳು ಮತ್ತು ಸಮಸ್ಯೆಗಳನ್ನು ದೆಹಲಿ ನಾಯಕರ ಮುಂದೆ ಹೇಳಿಕೊಂಡಿದ್ದೇನೆ. ಅದರಿಂದ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾಗಬಾರದು ಎಂಬ ಕಾರಣ ನಾಲ್ಕು ಗೋಡೆಗಳ ಮಧ್ಯೆಯೇ ಮಾತನಾಡಿದ್ದೇನೆ’ ಎಂದು ತಿಳಿಸಿದರು.

ನಾಯಕರ ಹೊಂದಾಣಿಕೆ:‘ಹಳೇ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆ ಮಾಡಲು ನನಗೆ ತುಂಬಾ ತೊಂದರೆ ಆಗುತ್ತಿದೆ. ಇಲ್ಲಿ ನಮ್ಮ ಪಕ್ಷದ ನಾಯಕರು ಕಾಂಗ್ರೆಸ್ ಮತ್ತು ಜೆಡಿಎಸ್ ಜತೆ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ. ಅಡ್ಜೆಸ್ಟ್‌ಮೆಂಟ್ ರಾಜಕಾರಣಕ್ಕೆ ಕೊನೆ ಹಾಡಬೇಕು. ಈ ವಿಷಯದಲ್ಲಿ ರಾಜಿ ಪ್ರಶ್ನೆಯೇ ಇಲ್ಲ. ರಾಜ್ಯದಲ್ಲಿ ಅತಿ ಉತ್ತಮ ಸರ್ಕಾರ ಇರಬೇಕು. ಇತರ ಭಾಗಗಳಂತೆ ಹಳೇ ಮೈಸೂರು ಭಾಗದಲ್ಲೂ ಬಿಜೆಪಿ ಪ್ರಬಲವಾಗಿ ಬೇರೂರಬೇಕು ಎಂಬ ಅಪೇಕ್ಷೆ ತೋಡಿಕೊಂಡಿದ್ದೇನೆ’ ಎಂದರು.

ರಮೇಶ ರಾಜೀನಾಮೆ ಕೊಡಲ್ಲ:‘ನಾನು ಮತ್ತು ರಮೇಶ ಜಾರಕಿಹೊಳಿ 20 ವರ್ಷದ ಸ್ನೇಹಿತರು. ಅವರ ಇತ್ತೀಚಿನ ರಾಜಕೀಯ ನಿಲುವಿನ ಬಗ್ಗೆ ಚರ್ಚಿಸಿಲ್ಲ. ಅವರು ಪಕ್ಷಕ್ಕೆ ರಾಜೀನಾಮೆ ಕೊಡುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಯುದ್ಧನೌಕೆ ಮುಂದಿನ ವರ್ಷ ಲೋಕಾರ್ಪಣೆ

ಕೊಚ್ಚಿ (ಪಿಟಿಐ): ಸ್ವದೇಶಿ ನಿರ್ಮಿತ ಮೊದಲ ವಿಮಾನವಾಹಕ ಯುದ್ಧ ನೌಕೆಯನ್ನು (ಐಎಸಿ) ಮುಂದಿನ ವರ್ಷ ಲೋಕಾರ್ಪಣೆ ಮಾಡಲಾಗುವುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

ಐಎಸಿಯ ಯುದ್ಧ ಸಾಮರ್ಥ್ಯ, ತಲುಪುವಿಕೆ ಸೇರಿದಂತೆ ಅದರ ವಿವಿಧ ಆಯಾಮಗಳು ದೇಶದ ರಕ್ಷಣೆಯಲ್ಲಿ ಅಸಾಧಾರಣ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಕೊಚ್ಚಿ ಬಂದರಿನಲ್ಲಿ ನೌಕೆಯ ನಿರ್ಮಾಣದ ಪ್ರಗತಿಯನ್ನು ರಕ್ಷಣಾ ಸಚಿವರು ಶುಕ್ರವಾರ ಪರಿಶೀಲಿಸಿದ ಬಳಿಕ ಈ ಹೇಳಿಕೆ ನೀಡಿದ್ದು, ‘ಇದು ಭಾರತದ ಹೆಮ್ಮೆಯಾಗಿದ್ದು, ಆತ್ಮನಿರ್ಭರ ಭಾರತದ ಅತ್ಯುತ್ತಮ ನಿದರ್ಶನವಾಗಿದೆ’ ಎಂದು ಬಣ್ಣಿಸಿದ್ದಾರೆ.

‘ಮುಂದಿನ ವರ್ಷ ಈ ಯುದ್ಧ ನೌಕೆಯನ್ನು ಲೋಕಾರ್ಪಣೆಗೊಳಿಸಿ, ಕರ್ತವ್ಯಕ್ಕೆ ನಿಯೋಜಿಸಲಾಗುವುದು.’ ಎಂದು ಸಚಿವರು ತಿಳಿಸಿದ್ದಾರೆ.

ಡೆಲ್ಟಾ ಪ್ಲಸ್: ಕಂಟೈನ್‌ಮೆಂಟ್ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊರೊನಾ ವೈರಸ್‌ನ ಡೆಲ್ಟಾ ಪ್ಲಸ್ ತಳಿ ಪತ್ತೆಯಾಗಿರುವ ಜಿಲ್ಲೆಗಳಲ್ಲಿ ತಕ್ಷಣವೇ ಕಂಟೈನ್‌ಮೆಂಟ್ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಎಂಟು ರಾಜ್ಯಗಳಿಗೆ ಸೂಚಿಸಿದೆ.

ಈ ಬಗ್ಗೆ ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಪಂಜಾಬ್, ಆಂಧ್ರಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಗುಜರಾತ್ ಹಾಗೂ ಹರಿಯಾಣ ರಾಜ್ಯಗಳಿಗೆ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಪತ್ರ ಬರೆದಿದ್ದಾರೆ.


ಜನದಟ್ಟಣೆ ತಡೆಯಬೇಕು, ಪರೀಕ್ಷೆಯನ್ನು ವ್ಯಾಪಕವಾಗಿ ಕೈಗೊಳ್ಳಬೇಕು ಮತ್ತು ಲಸಿಕೆ ಹಾಕುವುದನ್ನು ಸಹ ಹೆಚ್ಚಿಸಬೇಕು ಎಂದು ಸೂಚಿಸಿದ್ದಾರೆ.

ಕಮಾಂಡರ್‌ಗಳ ಜತೆ ವಾಯುಪಡೆ ಮುಖ್ಯಸ್ಥರ ಸಭೆ

ಸಿದ್ಧತೆ ಗರಿಷ್ಠ ಮಟ್ಟದಲ್ಲಿಡಲು ಸೂಚನೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿಯಲ್ಲಿ ಚೀನಾದ ಸೇನೆಯ ಜತೆಗೆ ನಡೆದ ಸಂಘರ್ಷದ ಸಂದರ್ಭದಲ್ಲಿ ಪಶ್ಚಿಮ ಏರ್ ಕಮಾಂಡ್ (ಡಬ್ಲ್ಯುಎಸಿ) ಪ್ರದರ್ಶಿಸಿದ ಕ್ಷಿಪ್ರ ಪ್ರತಿಕ್ರಿಯೆಯನ್ನು ಸೇನಾಪಡೆಯ ಚೀಫ್ ಮಾರ್ಷಲ್ ಆರ್.ಎಸ್.ಕೆ. ಭದೌರಿಯಾ ಶ್ಲಾಘಿಸಿದ್ದಾರೆ. ಜತೆಗೆ ಕಾರ್ಯಾಚರಣೆಯ ಸಿದ್ಧತೆಯನ್ನು ಉನ್ನತಮಟ್ಟದಲ್ಲಿ ಇರಿಸುವಂತೆ ಸಲಹೆ ನೀಡಿದ್ದಾರೆ.

ಉತ್ತರ ಭಾರತದಲ್ಲಿ ಭಾರತದ ವಾಯುಪ್ರದೇಶದ ಸುರಕ್ಷತೆಯನ್ನು ನೋಡಿಕೊಳ್ಳುವ ಡಬ್ಲ್ಯುಎಸಿಯ ಉನ್ನತ ಮಟ್ಟದ ಕಮಾಂಡರ್‌ಗಳ ಎರಡು ದಿನಗಳ ಸಮಾವೇಶದಲ್ಲಿ ಅವರು ಮಾತನಾಡಿದರು. ಉತ್ತರ ಗಡಿ ಪ್ರದೇಶದ ಎಲ್ಲಾ ಸವಾಲುಗಳ ಬಗ್ಗೆ ಕಮಾಂಡರ್‌ಗಳು ವಾಯುಪಡೆಯ


ಭದೌರಿಯಾ

ಮುಖ್ಯಸ್ಥರಿಗೆ ಮಾಹಿತಿ ನೀಡಿದರು.

‘ಎದುರಾಗುತ್ತಿರುವ ಭದ್ರತಾ ಸವಾಲುಗಳನ್ನು ಸರಿಯಾಗಿ ವಿಶ್ಲೇಷಿಸಬೇಕು. ಶಸ್ತ್ರಾಸ್ತ್ರ ವ್ಯವಸ್ಥೆ ಹಾಗೂ ಇತರ ಎಲ್ಲಾ ವೇದಿಕೆಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಬೇಕು. ಭೌತಿಕ ಮತ್ತು ಸೈಬರ್ ಸುರಕ್ಷತೆಯತ್ತ ಗರಿಷ್ಠ ಗಮನ ಹರಿಸಬೇಕು’ ಎಂದು ಭದೌರಿಯಾ ಸಲಹೆ ನೀಡಿದರು.

ಕಳೆದ ವರ್ಷ ಪೂರ್ವ ಲಡಾಖ್‌ನಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿದ್ದರಿಂದ ಭಾರತೀಯ ವಾಯುಪಡೆಯು ತನ್ನ ಮುಂಚೂಣಿಯ ಯುದ್ಧ ವಿಮಾನಗಳು ಹಾಗೂ ದಾಳಿ ಹೆಲಿಕಾಪ್ಟರ್‌ಗಳನ್ನು ಲಡಾಖ್‌ನ ವಿಮಾನ ನಿಲ್ದಾಣದಲ್ಲಿ ಹಾಗೂ ವಾಸ್ತವ ಗಡಿ ರೇಖೆಯುದ್ದಕ್ಕೂ ಸನ್ನದ್ಧ ಸ್ಥಿತಿಯಲ್ಲಿ ಇರಿಸಿತ್ತು. ಸೆಪ್ಟೆಂಬರ್ ಬಳಿಕ ರಫೇಲ್ ಯುದ್ಧ ವಿಮಾನಗಳೂ ವಿವಿಧ ಮುಂಚೂಣಿ ಪ್ರದೇಶಗಳಿಗೆ ಹೋಗಿ ಬರುತ್ತಾ, ಭಾರತದ ಯುದ್ಧ ಸಿದ್ಧತೆಗೆ ಬಲತುಂಬಿವೆ.

ಡಬ್ಲ್ಯುಎಸಿಯ ವಾಯುಪ್ರದೇಶ ಭದ್ರತಾ ದಾಖಲೆಗಳ ಬಗ್ಗೆಯೂ ಭದೌರಿಯಾ ಶ್ಲಾಘನೆ ವ್ಯಕ್ತಪಡಿಸಿ, ಸುರಕ್ಷಿತ ಕಾರ್ಯಾಚರಣೆ ವಾತಾವರಣವನ್ನು ಮುಂದುವರಿಸುವಂತೆ ಸಲಹೆ ನೀಡಿದರು. ಸ್ವಾವಲಂಬನೆ, ದೇಶೀಯ ಉತ್ಪಾದನೆ ಹಾಗೂ ಕಾರ್ಯಾಚರಣೆ ಸಾಮರ್ಥ್ಯ ಹೆಚ್ಚಿಸುವ ಮೂಲಕ ಭಾರತದ ವಾಯುಪಡೆಯನ್ನು ಪ್ರಬಲ ಶಕ್ತಿಯಾಗಿಸಬೇಕು ಎಂದೂ ಅವರು ಹೇಳಿದರು.

‘ಡೆಲ್ಟಾಪ್ಲಸ್: ಸದ್ಯ ಆತಂಕವಿಲ್ಲ ಆದರೆ, ಎಚ್ಚರಿಕೆ ಅಗತ್ಯ’

ನವದೆಹಲಿ: ಭಾರತದಲ್ಲಿ ಪ್ರಸ್ತುತ ಲಭ್ಯವಿರುವ ಮೂರು ಕೋವಿಡ್ ಲಸಿಕೆಗಳು, ರೂಪಾಂತರಿ ಸೋಂಕು ಡೆಲ್ಟಾ ಪ್ಲಸ್ ವಿರುದ್ಧವೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿವೆಯೇ ಎಂಬುದನ್ನು ಭಾರತೀಯ ವಿಜ್ಞಾನಿಗಳು ಮುಂದಿನ ಒಂದು ವಾರದ ಅವಧಿಯಲ್ಲಿ ಗುರುತಿಸುವ ಸಂಭವವಿದೆ.

‘ಸದ್ಯದ ಸ್ಥಿತಿಯಲ್ಲಿ ಇದು ಆತಂಕದ ವಿಷಯವಲ್ಲ. ಆದರೆ, ಎಚ್ಚರಿಕೆ ಅಗತ್ಯ’ ಎಂದು ಕೋವಿಡ್ ಕುರಿತ ಸರ್ಕಾರದ ಸಲಹಾ ಮಂಡಳಿಯ ಸದಸ್ಯ ಸುಧಾಂಶು ವ್ರತಿ ಹೇಳಿದರು.

ಲಸಿಕೆಗಳ ಕುರಿತು ವಿವರಿಸಿರುವ ಐಸಿಎಂಆರ್ ಮಹಾನಿರ್ದೇಶಕ ಬಲರಾಮ್ ಭಾರ್ಗವ್ ಅವರು, ‘ಅಲ್ಫಾ, ಬೀಟಾ, ಗಾಮಾ ಮತ್ತು ಡೆಲ್ಟಾ ಕೊರೊನಾ ವೈರಸ್‌ನ ತಳಿಗಳು. ಕೋವಿಶೀಲ್ಡ್ ಅಲ್ಫಾ ತಳಿಯ ತೀವ್ರತೆಯನ್ನು 2.5 ಪಟ್ಟು ಕಡಿಮೆ ಮಾಡುತ್ತದೆ. ಡೆಲ್ಟಾ ತಳಿಗೆ ಕೋವ್ಯಾಕ್ಸಿನ್ ಪರಿಣಾಮಕಾರಿಯಾಗಿದೆ. ಆದರೆ, ಪ್ರತಿರೋಧಕ ಶಕ್ತಿಯನ್ನು ಅಲ್ಪಮಟ್ಟಿಗೆ ಕುಂದಿಸುತ್ತದೆ’ ಎಂದು ಹೇಳಿದ್ದಾರೆ.

‘ಡೆಲ್ಟಾ ಪ್ಲಸ್ ತಳಿ ಮೇಲೆ ಲಸಿಕೆಗಳು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿವೆ ಎನ್ನುವ ಬಗ್ಗೆ ಐಸಿಎಂಆರ್ ಪ್ರಯೋಗಾಲಯದಲ್ಲಿ ಅಧ್ಯಯನ ನಡೆಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಪ್ರಸ್ತುತ, 12 ದೇಶಗಳಲ್ಲಿ ಡೆಲ್ಟಾ ಪ್ಲಸ್ ಪತ್ತೆಯಾಗಿದೆ. ಭಾರತದ 12 ರಾಜ್ಯಗಳಲ್ಲಿ ಡೆಲ್ಟಾ ಪ್ಲಸ್ ಸೋಂಕಿನ 51 ಪ್ರಕರಣಗಳು ಪತ್ತೆಯಾಗಿವೆ. ಇಬ್ಬರು ಈ ಸೋಂಕಿನಿಂದ ಮೃತಪಟ್ಟಿದ್ದಾರೆ. ಈ ಸೋಂಕು ಮಹಾರಾಷ್ಟ್ರದಲ್ಲಿ ಗರಿಷ್ಠ ಅಂದರೆ ಒಟ್ಟು 22 ಪ್ರಕರಣಗಳು ಪತ್ತೆಯಾಗಿದ್ದು, ಉಳಿದಂತೆ ತಮಿಳುನಾಡು 9, ಮಧ್ಯಪ್ರದೇಶ 7, ಕೇರಳದಲ್ಲಿ 3 ಪ್ರಕರಣ ಪತ್ತೆಯಾಗಿವೆ.

ಉಳಿದಂತೆ ಕರ್ನಾಟಕ, ಪಂಜಾಬ್, ಗುಜರಾತ್, ಆಂಧ್ರಪ್ರದೇಶ, ರಾಜಸ್ಥಾನ, ಒಡಿಶಾ, ಜಮ್ಮು ಮತ್ತು ಕಾಶ್ಮೀರದಲ್ಲಿಯೂ ಈ ಸೋಂಕು ಪತ್ತೆಯಾಗಿದೆ.

ಪಿನಾಕಾ ರಾಕೆಟ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಬಲ್ಸೋರೆ, ಒಡಿಶಾ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ದೇಶೀಯವಾಗಿ ಅಭಿವೃದ್ಧಿಪಡಿಸಿರುವ, ವಿಸ್ತರಿಸಿದ ವ್ಯಾಪ್ತಿಯನ್ನು ಹೊಂದಿದ ‘ಪಿನಾಕಾ’ ರಾಕೆಟ್‌ನ ಪರೀಕ್ಷಾರ್ಥ ಪ್ರಯೋಗವನ್ನು ಶುಕ್ರವಾರ ಇಲ್ಲಿನ ಕರಾವಳಿ ತೀರದ ಚಾಂದಿಪುರ್‌ನಲ್ಲಿ ಯಶಸ್ವಿಯಾಗಿ ನಡೆಸಿತು.

ವಿವಿಧ ಹಂತದಲ್ಲಿ, ನಿಗದಿತ ಗುರಿಯತ್ತ ತ್ವರಿತಗತಿಯಲ್ಲಿ ಒಟ್ಟಾರೆ 25 ಪಿನಾಕಾ ರಾಕೆಟ್‌ಗಳ ಪ್ರಯೋಗವನ್ನು ಗುರುವಾರ ಮತ್ತು ಶುಕ್ರವಾರ ನಡೆಸಲಾಗಿದೆ.


122 ಎಂ.ಎಂ ಕ್ಯಾಲಿಬರ್ ರಾಕೆಟ್‌ಗಳನ್ನು ಬಹುಹಂತದ ರಾಕೆಟ್ ಉಡಾವಣಾ ವಾಹಕದಿಂದ (ಎಂಬಿಆರ್‌ಎಲ್) ರಾಕೆಟ್‌ಗಳನ್ನು ಪ್ರಯೋಗಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲ ರಾಕೆಟ್‌ಗಳು ನಿಗದಿತ ಗುರಿ


ಪಿನಾಕಾ ರಾಕೆಟ್‌ಗಳ ಪರೀಕ್ಷಾರ್ಥ ಪ್ರಯೋಗವನ್ನು ಶುಕ್ರವಾರ ಒಡಿಶಾದ ಬಲೇಶ್ವರದಲ್ಲಿ ನಡೆಸಿತು.

ಮುಟ್ಟಿದವು. ಸಾಮರ್ಥ್ಯ ವೃದ್ಧಿಪಡಿಸಲಾದ ಪಿನಾಕಾ ರಾಕೆಟ್‌ಗಳು 45 ಕಿ.ಮೀ ದೂರದವರೆಗೂ ನಿಗದಿತ ಗುರಿಯನ್ನು ನಾಶಪಡಿಸಬಲ್ಲವು ಎಂದು ಮೂಲಗಳು ತಿಳಿಸಿವೆ. ನಿಗದಿತ ಗುರಿಯನ್ನು ತಲುಪಲಿವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಎಲ್ಲ ರಾಕೆಟ್‌ಗಳನ್ನು ವಿವಿಧ ಪರಿಕರಗಳನ್ನು ಆಧರಿಸಿ ಪರೀಕ್ಷೆ ನಡೆಸಲಾಯಿತು ಎಂದು ಮೂಲಗಳು ವಿವರಿಸಿವೆ.

ಷೇರುಪೇಟೆ ವಹಿವಾಟು ▲226



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,790
ಇಂದಿನ ಅಂತ್ಯ	15,860
▲	69
ದಿನದ ಗರಿಷ್ಠ	15,870

ವಿನಿಮಯ ದರ

$ ಡಾಲರ್	74.2
£ ಪೌಂಡ್	103.19
€ ಯುರೊ	88.61
¥ ಯೆನ್ (100ಕ್ಕೆ)	67.04

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1390 (1410)
ಸೋಯಾ (ರಿಫೈನ್ಡ್)	₹1290(1295)
ಸೂರ್ಯಕಾಂತಿ (ರಿಫೈನ್ಡ್)	₹1350 (1340)
ಪಾಮೋಲಿನ್	₹1155 (1155)

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1800-2200
ಮಧ್ಯಮ	₹1500-1800
ಸಣ್ಣ	₹1000-1500

ಮುಂಬೈ ಧಾರಣೆ

ಶೇಂಗಾ

25-6-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9000-9050
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1400 (1420)
ಒಂದು ವಾರದ ಡೆಲಿವರಿ	1395 (1415)
ಸೋಯಾ ಕಚ್ಚಾ	1253 (1255)
ಪಾಮ್ ವಾರದ ಡೆಲಿವರಿ	1153 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1260)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,300 (47,300)
ಬೆಳ್ಳಿ ಕೆ.ಜಿ
68,450 (68,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದ್ವಿಚಕ್ರ ವಾಹನ: ಬೆಲೆ ತಗ್ಗಿಸಿದ ಹೀರೊ ಎಲೆಕ್ಟ್ರಿಕ್

ನವದೆಹಲಿ (ಪಿಟಿಐ): ಹೀರೊ ಎಲೆಕ್ಟ್ರಿಕ್ ಕಂಪನಿಯು ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಬೆಲೆಯನ್ನು ಗರಿಷ್ಠ ಶೇಕಡ 33ರವರೆಗೆ ಇಳಿಕೆ ಮಾಡಿದೆ. ಫೇಮ್–2 ಯೋಜನೆಯ ಅಡಿಯಲ್ಲಿ ಕೇಂದ್ರ ಸರ್ಕಾರವು ಕೆಲವು ಸಬ್ಸಿಡಿಗಳನ್ನು ಘೋಷಿಸಿದ ಬೆನ್ನಲ್ಲೇ ಕಂಪನಿ ಈ ಕ್ರಮ ಕೈಗೊಂಡಿದೆ.

ಬೆಲೆ ಇಳಿಕೆಯ ನಂತರ ಫೋಟೊನ್ ಎಚ್‌ಎಕ್ಸ್ ಮಾದರಿಯ ಬೆಲೆಯು ₹ 71,449 ಆಗಿದೆ (ಮೊದಲಿನ ಬೆಲೆ ₹ 79,940). ಮೂರು ಬ್ಯಾಟರಿಗಳು ಇರುವ ಎನ್‌ವೈಎಕ್ಸ್ ಎಚ್‌ಎಕ್ಸ್ ದ್ವಿಚಕ್ರ ವಾಹನದ ಬೆಲೆಯು ₹ 85,136ಕ್ಕೆ ತಗ್ಗಿದೆ (ಮೊದಲಿನ ಬೆಲೆ ₹ 1.13 ಲಕ್ಷ).


ಆಪ್ಟಿಮಾ ಇಆರ್ ಮಾದರಿಯ ಬೆಲೆಯು ₹ 58,980ಕ್ಕೆ ಇಳಿದಿದೆ ಎಂದು ಕಂಪನಿ ಹೇಳಿದೆ.

ಕೋವಿಡ್ ಚಿಕಿತ್ಸೆಗೆ ಪಡೆದ ಹಣಕ್ಕೆ ತೆರಿಗೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಂಪನಿಗಳು, ಉದ್ಯೋಗ ದಾತರು ತಮ್ಮ ನೌಕರರಿಗೆ ಕೋವಿಡ್–19 ಚಿಕಿತ್ಸೆಯ ಉದ್ದೇಶಕ್ಕೆ ನೀಡಿದ ಹಣವು ತೆರಿಗೆ ವಿನಾಯಿತಿ ಹೊಂದಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ. ಹಾಗೆಯೇ, ಕೋವಿಡ್ ನಿಂದಾಗಿ ನೌಕರರು ಮೃತಪಟ್ಟಾಗ ಅವರ ಕುಟುಂಬದ ಸದಸ್ಯರಿಗೆ ಕಂಪನಿಗಳು ನೀಡುವ ಹಣಕಾಸಿನ ನೆರವಿಗೆ ಆದಾಯ ತೆರಿಗೆ ಇರುವುದಿಲ್ಲ ಎಂದೂ ಕೇಂದ್ರವು ಹೇಳಿದೆ.

‘ಆದಾಯ ತೆರಿಗೆ ಪಾವತಿಸುವ ಹಲವರು ತಾವು ಕೆಲಸ ಮಾಡುವ ಕಂಪನಿಗಳಿಂದ, ತಮ್ಮ ಹಿತೈಷಿಗಳಿಂದ ಕೋವಿಡ್ ಚಿಕಿತ್ಸೆಗಾಗಿ ಹಣಕಾಸಿನ ನೆರವು ಪಡೆದಿದ್ದಾರೆ. ಈ ನೆರವಿಗೆ ಆದಾಯ ತೆರಿಗೆ ಪಾವತಿಸುವ ಸಂದರ್ಭ ಬರಬಾರದು ಎಂಬ ಕಾರಣದಿಂದಾಗಿ, 2019–20ನೆಯ ಹಣಕಾಸಿನ ವರ್ಷ ಹಾಗೂ ಅದರ ನಂತರದ ಹಣಕಾಸಿನ ವರ್ಷದಲ್ಲಿ ಆದಾಯ ತೆರಿಗೆ ಪಾವತಿದಾರರು ತಾವು ಕೆಲಸ ಮಾಡುವ ಕಂಪನಿಗಳಿಂದ ಅಥವಾ ಯಾವುದೇ ವ್ಯಕ್ತಿಗಳಿಂದ ಕೋವಿಡ್ ಚಿಕಿತ್ಸೆಗಾಗಿ ಪಡೆದ ಹಣಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲು ತೀರ್ಮಾನಿಸಲಾಗಿದೆ’ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.



‘ದುರದೃಷ್ಟದ ಸಂಗತಿಯೆಂದರೆ, ಆದಾಯ ತೆರಿಗೆ ಪಾವತಿದಾರರಲ್ಲಿ ಕೆಲವರು ಕೋವಿಡ್‌ನಿಂದಾಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಹೀಗೆ ಮೃತಪಟ್ಟವರ ಕುಟುಂಬಕ್ಕೆ ಅವರು ಕೆಲಸ ಮಾಡುತ್ತಿದ್ದ ಕಂಪನಿಗಳು ಮತ್ತು ಅವರ ಹಿತೈಷಿಗಳು ಹಣಕಾಸಿನ ನೆರವು ನೀಡಿದ್ದಾರೆ. ಇಂತಹ ಹಣಕ್ಕೆ ಕೂಡ ಆದಾಯ ತೆರಿಗೆಯಿಂದ ವಿನಾಯಿತಿ ಇದೆ’ ಎಂದು ಸಚಿವಾಲಯವು ಹೇಳಿದೆ. ನೌಕರ ಕೆಲಸ ಮಾಡುತ್ತಿದ್ದ ಕಂಪನಿಯಿಂದ ಆತನ ಕುಟುಂಬಕ್ಕೆ ಎಷ್ಟೇ ಮೊತ್ತ ನೀಡಿದ್ದರೂ ಅದಕ್ಕೆ ಆದಾಯ ತೆರಿಗೆ ಇಲ್ಲ. ಆದರೆ, ಇತರ ವ್ಯಕ್ತಿಗಳಿಂದ ಬರುವ ಒಟ್ಟು ₹ 10 ಲಕ್ಷದವರೆಗಿನ ನೆರವಿಗೆ ಮಾತ್ರ ಆದಾಯ ತೆರಿಗೆಯಿಂದ ವಿನಾಯಿತಿಇದೆ.

ತೆರಿಗೆ ವ್ಯಾಜ್ಯಗಳ ಇತ್ಯರ್ಥಕ್ಕೆ ರೂಪಿಸಲಾಗಿರುವ ವಿವಾದ್ ಸೆ ವಿಶ್ವಾಸ್ ಯೋಜನೆಯನ್ನು ಆಗಸ್ಟ್ 31ರವರೆಗೆ ವಿಸ್ತರಿಸಲಾಗಿದೆ. ತೆರಿಗೆ ಪಾವತಿದಾರರು ಅಕ್ಟೋಬರ್ 31ರವರೆಗೆ ಹೆಚ್ಚುವರಿ ಬಡ್ಡಿ ಸಹಿತವಾಗಿ ಪಾವತಿ ಮಾಡಲು ಅವಕಾಶ ನೀಡಲಾಗಿದೆ.

ಪ್ಯಾನ್–ಆಧಾರ್: ಗಡುವು ವಿಸ್ತರಣೆ

ಪ್ಯಾನ್ ಮತ್ತು ಆಧಾರ್ ಸಂಖ್ಯೆಯನ್ನು ಜೋಡಿಸುವುದಕ್ಕೆ ಇರುವ ಗಡುವನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಇದು ಜೂನ್ 30ಕ್ಕೆ ಕೊನೆಗೊಳ್ಳಬೇಕಿತ್ತು. ಕಂಪನಿಗಳು ತಮ್ಮ ನೌಕರರಿಗೆ ಫಾರ್ಮ್–16 ನೀಡಲು ಜುಲೈ 31ರವರೆಗೆ ಅವಕಾಶ ನೀಡಲಾಗಿದೆ.

‘ಸೆಸ್ ತಗ್ಗಿಸಲು ಸರ್ಕಾರಕ್ಕಿದೆ ಅವಕಾಶ’

ಮುಂಬೈ (ಪಿಟಿಐ): ಪೆಟ್ರೋಲ್ ಹಾಗೂ ಡೀಸೆಲ್ ಬಳಕೆಯಲ್ಲಿ ಏರಿಕೆ ಆದರೆ ಸರ್ಕಾರಕ್ಕೆ ಇಂಧನದ ಮೇಲಿನ ಸೆಸ್‌ಅನ್ನು ಲೀಟರಿಗೆ ₹ 4.5ರವರೆಗೆ ತಗ್ಗಿಸಲು ಅವಕಾಶ ಸಿಗುತ್ತದೆ ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಹೇಳಿದೆ.

2021–22ನೆಯ ಆರ್ಥಿಕ ವರ್ಷದಲ್ಲಿ ಪೆಟ್ರೋಲ್ ಬಳಕೆಯು ಶೇಕಡ 14ರಷ್ಟು, ಡೀಸೆಲ್ ಬಳಕೆಯು ಶೇ 10ರಷ್ಟು ಹೆಚ್ಚಳ ಆಗುವ ಅಂದಾಜು ಇದೆ ಎಂದು ಐಸಿಆರ್‌ಎ ಹೇಳಿದೆ. ಇದರಿಂದಾಗಿ ಸರ್ಕಾರಕ್ಕೆ ಹೆಚ್ಚುವರಿಯಾಗಿ ₹ 40 ಸಾವಿರ ಕೋಟಿ ಆದಾಯ ಸಿಗಲಿದೆ.

ಈ ಹೆಚ್ಚುವರಿ ಆದಾಯವನ್ನು ಬಿಟ್ಟುಕೊಡಲು ಸರ್ಕಾರ ಮನಸ್ಸು ಮಾಡಿದಲ್ಲಿ, ಅದು ತೈಲೋತ್ಪನ್ನಗಳ ಮೇಲಿನ ಸೆಸ್‌ಅನ್ನು ಲೀಟರಿಗೆ ₹ 4.5ರಷ್ಟು ಕಡಿಮೆ ಮಾಡಬಹುದು. ಆ ಮೂಲಕ ಹಣದುಬ್ಬರ ನಿಯಂತ್ರಿಸಲು ನೆರವು ನೀಡಬಹುದು ಎಂದು ಐಸಿಆರ್‌ಎ ಅಭಿಪ್ರಾಯ ವ್ಯಕ್ತಪಡಿಸಿದೆ.

2020ರಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಭಾರಿ ಇಳಿಕೆ ಕಂಡಾಗ ಸರ್ಕಾರವು ಹೆಚ್ಚುವರಿ ಆದಾಯ ಸಂಗ್ರಹಿಸುವ ಉದ್ದೇಶದಿಂದ ತೈಲೋತ್ಪನ್ನಗಳ ಮೇಲೆ ಸೆಸ್ ವಿಧಿಸಲು ಆರಂಭಿಸಿತು. ಈಗ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆ ಆಗಿದ್ದರೂ ಸರ್ಕಾರವು ಸೆಸ್ ಪ್ರಮಾಣವನ್ನು ತಗ್ಗಿಸಿಲ್ಲ. ಇದರಿಂದಾಗಿ ಗ್ರಾಹಕರಿಗೆ ತೈಲೋತ್ಪನ್ನಗಳು ತುಟ್ಟಿಯಾಗಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42000
ಹಳತು	42500-52000
ಭದ್ರಾವತಿ	
ರಾಶಿ	38399-42199
ಚಿತ್ರದುರ್ಗ	
ಆಪಿ	42629-43000
ಬೆಟ್ಟೆ	33639-34000
ರಾಶಿ	42119-42500
ಕೆಂಪುಗೋಟು	27600 28000
ದಾವಣಗೆರೆ	
ರಾಶಿ	33399-43099
ಕುಮಟಾ	
ಚಿಪ್ಪು	29569-31809
ಕೋಕ	19509-29369
ಹಳೆಚಾಲಿ	40189-41800
ಹೊಸಚಾಲಿ	36599-38499
ಫ್ಯಾಕ್ಟರಿ	14399-17199
ಮಂಗಳೂರು	
ಕೋಕ	32000-34500
ಕುಂದಾಪುರ	
ಹಳೆಚಾಲಿ	45000-52000
ಹೊಸಚಾಲಿ	35000-42000
ಪುತ್ತೂರು	
ಕೋಕ	9500-25000
ಹೊಸತು	29500-42100
ಶಿವಮೊಗ್ಗ	
ಬೆಟ್ಟೆ	42800-45089
ಗೊರಬಲು	16170-33509
ರಾಶಿ	38099-42599

ಸರಕು	48509-77170
ಸಿದ್ದಾಪುರ	
ಬಿಳಿಗೋಟು	22699-32509
ಚಾಲಿ	35299-38199
ಕೋಕ	22599-31899
ಕೆಂಪುಗೋಟು	24689-31089
ಶಿರಸಿ	
ಬೆಟ್ಟೆ	26119-39809
ಬಿಳಿಗೋಟು	16513-34809
ಚಾಲಿ	31209-38698
ರಾಶಿ	27099-42699
ಯಲ್ಲಾಪುರ	
ಬಿಳಿಗೋಟು	26899-33699
ಚಾಲಿ	33299-39505
ಕೋಕ	22126-31672
ಕೆಂಪುಗೋಟು	27212-32899
ರಾಶಿ	39890-45799
ತಟ್ಟಿಬೆಟ್ಟೆ	33699-39189

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	380
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	321-397
ದ್ವಿತಳಿ (ಬಿ.ವಿ)	350-476

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11,000	10,900	10,775	152.40
ಎಸಿ	4,730	4,400	4,125	
ಆರ್‌ಪಿ	5,400	5,450	5,400	ಲಂಡನ್
ಆರ್‌ಸಿ	3,300	3,200	3,225	1631

ಗರಿಷ್ಠ ಮಟ್ಟದಲ್ಲಿ ಸೆನ್ಸೆಕ್ಸ್

ಮುಂಬೈ (ಪಿಟಿಐ): ಬ್ಯಾಂಕ್ ಮತ್ತು ಲೋಹ ವಲಯದ ಷೇರುಗಳ ಮೌಲ್ಯವರ್ಧನೆಯು ಮುಂಬೈ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಲು ನೆರವಾಯಿತು. ಇದರಿಂದಾಗಿ ಬಿಎಸ್‌ಇ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನ ಕೊನೆಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತು.

226 ಅಂಶ ಏರಿಕೆ ಕಂಡ ಸೆನ್ಸೆಕ್ಸ್ 52,925 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 69 ಅಂಶ ಏರಿಕೆ ಕಂಡಿತು.

‘ಕೋವಿಡ್‌ನ ಮೂರನೆಯ ಅಲೆಯ ಅಪ್ಪಳಿಸುವ ಸಾಧ್ಯತೆಯು ಮಾರುಕಟ್ಟೆಯ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡಬಹುದು’ ಎಂದು ರೆಲಿಗೇರ್ ಬ್ರೋಕಿಂಗ್ ಕಂಪನಿಯ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ. ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ ಅಮೆರಿಕದ ಡಾಲರ್ ಎದುರು 2 ಪೈಸೆಯಷ್ಟು ಇಳಿಕೆ ಆಗಿದೆ.

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಸಾಧನೆ

ಭಾರತದ ಮಹಿಳೆಯರಿಗೆ ಕಂಚು

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಮನು ಭಾಕರ್, ಯಶಸ್ವಿನಿ ಸಿಂಗ್ ದೇಸ್ವಾಲ್ ಹಾಗೂ ರಾಹಿ ಸರ್ನೋಬತ್ ಅವರಿದ್ದ ಭಾರತ ಮಹಿಳಾ ತಂಡವು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಕಂಚಿನ ಪದಕದ ಸುತ್ತಿನಲ್ಲಿ ಭಾರತದ ಶೂಟರ್‌ಗಳು ಶುಕ್ರವಾರ 16–12 ಅಂತರದಲ್ಲಿ ಹಂಗರಿಯ ವೆರೋನಿಕಾ ಮೇಜೊರ್, ಮಿರಿಯಮ್ ಜಾಕೊ ಮತ್ತು ಸಾರಾ ರಾಹೆಲ್ ಫ್ಯಾಬಿಯನ್ ಅವರನ್ನು ಮಣಿಸಿದರು. ಅರ್ಹತಾ ಸುತ್ತಿನಲ್ಲಿ ಭಾರತ 573 ಸ್ಕೋರ್ ಕಲೆಹಾಕಿತ್ತು.



ಕಂಚಿನ ಪದಕ ವಿಜೇತ ರಾಹಿ ಸರ್ನೋಬತ್, ಮನು ಭಾಕರ್ ಮತ್ತು ಯಶಸ್ವಿನಿ ಸಿಂಗ್ ದೇಸ್ವಾಲ್ ಸಂಭ್ರಮ– ಟ್ವಿಟರ್ ಚಿತ್ರ

ಇದಕ್ಕೂ ಮೊದಲು 10 ಮೀ. ಏರ್ ರೈಫಲ್ ವಿಭಾಗದ ಕಂಚಿನ ಪದಕದ ಸ್ಪರ್ಧೆಯಲ್ಲಿ ಐಶ್ವರಿಪ್ರತಾಪ್ ಸಿಂಗ್ ತೋಮರ್, ದೀಪಕ್ ಕುಮಾರ್ ಮತ್ತು ದಿವ್ಯಾಂಶ್ ಸಿಂಗ್ ಅವರನ್ನೊಳಗೊಂಡ ಭಾರತ ಪುರುಷರ ತಂಡವು 14–16ರಿಂದ ಸರ್ಬಿಯಾ ತಂಡಕ್ಕೆ ಸೋತಿತ್ತು. ಈ ವಿಭಾಗದಲ್ಲಿ ಮಹಿಳೆಯರು ಅರ್ಹತಾ ಸುತ್ತನ್ನೂ ದಾಟಲಿಲ್ಲ.

ಅಂಜುಮ್ ಮೌದ್ಗಿಲ್, ಅಪೂರ್ವಿ ಚಾಂಡೇಲ ಮತ್ತು ಇಳವೆನ್ನಿಲಾ ವಾಳರಿವನ್ ಅವರಿದ್ದ ತಂಡವು ಅರ್ಹತಾ ಸುತ್ತಿನಲ್ಲಿ 1867.7 ಪಾಯಿಂಟ್ಸ್ ಸಂಗ್ರಹಿಸಿ 11ನೇ ಸ್ಥಾನ ಗಳಿಸಿತು.

ಮಹಿಳೆಯರ 10 ಮೀ. ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಮೂವರು ಮಹಿಳೆ ಯರು ಫೈನಲ್ ತಲುಪಲು ವಿಫಲರಾಗಿದ್ದರು.

ಆರ್ಚರಿ: ಫೈನಲ್‌ಗೆ ಭಾರತ ತಂಡ

ಪ್ಯಾರಿಸ್ (ಪಿಟಿಐ): ಶ್ರೇಷ್ಠ ಸಾಮರ್ಥ್ಯ ತೋರಿದ ಭಾರತ ಮಹಿಳಾ ರಿಕರ್ವ್ ಆರ್ಚರಿ ತಂಡವು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಮೂರನೇ ಹಂತದ ಟೂರ್ನಿಯಲ್ಲಿ ಶುಕ್ರವಾರ ಫೈನಲ್ ತಲುಪಿದೆ.

ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕೋಮಲಿಕಾ ಬಾರಿ ಅವರನ್ನೊಳಗೊಂಡ ತಂಡವು ಸೆಮಿಫೈನಲ್ ಹಣಾಹಣಿಯಲ್ಲಿ 6–2ರಿಂದ ಆರನೇ ಕ್ರಮಾಂಕದ ಫ್ರಾನ್ಸ್ ತಂಡವನ್ನು ಮಣಿಸಿತು. ಪಂದ್ಯದಲ್ಲಿ ಕೇವಲ ಒಂದು ಸೆಟ್‌ಅನ್ನು ಮಾತ್ರ ಭಾರತದ ಬಿಲ್ಗಾರರು ಕೈಚೆಲ್ಲಿದರು. ಲೀಸಾ ಬಾರ್ಬೆಲಿನ್, ಆಡ್ರೆ ಅಡಿಸಿಯೊಮ್ ಮತ್ತು ಆ್ಯಂಜೆಲಿನ್ ಕೊಹೆಂಡೆಟ್ ಎದುರಾಳಿ ತಂಡದಲ್ಲಿದ್ದರು.

ಭಾನುವಾರ ನಡೆದ ಒಲಿಂಪಿಕ್ಸ್ ಅರ್ಹತಾ ಪಂದ್ಯದಲ್ಲಿ ಭಾರತ ಮಹಿಳಾ ತಂಡವು ತಮಗಿಂತ ಕಡಿಮೆ ರ‍್ಯಾಂಕಿನ ಕೊಲಂಬಿಯಾ ಎದುರು ನಿರಾಸೆ ಅನುಭವಿಸಿತ್ತು. ಆದರೆ ಇಲ್ಲಿ ಎರಡನೇ ಅತ್ಯುತ್ತಮ ಸಾಮರ್ಥ್ಯ ತೋರುವ ಮೂಲಕ ಲಯಕ್ಕೆ ಮರಳಿತು.

ಫೈನಲ್‌ನಲ್ಲಿ ಮೆಕ್ಸಿಕೊ ತಂಡಕ್ಕೆ ಭಾರತದ ಮಹಿಳೆಯರ ಮುಖಾಮುಖಿಯಾಗಲಿದ್ದು, ಭಾನುವಾರ ಈ ಹಣಾಹಣಿ ನಡೆಯಲಿದೆ.

ಪುರುಷರ ತಂಡವು ಎಂಟರಘಟ್ಟದ ಪಂದ್ಯದ ಶೂಟ್ ಆಫ್‌ನಲ್ಲಿ ಜರ್ಮನಿ ಎದುರು ಸೋಲು ಅನುಭವಿಸಿತು.

‘ಒತ್ತಡವಿಲ್ಲ; ಒಗ್ಗಟ್ಟೇ ಬಲ’

ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಂಡ ಉತ್ತಮ ಲಯದಲ್ಲಿದ್ದಾಗಲೇ ಕೋವಿಡ್‌ನಿಂದಾಗಿ ಅಭ್ಯಾಸಕ್ಕೆ ತೊಂದರೆಯಾಯಿತು. ಆದರೆ ಈಗ ತರಬೇತಿ ಸುಸೂತ್ರವಾಗಿ ನಡೆಯುತ್ತಿದ್ದು ಯಾವ ರೀತಿಯ ಒತ್ತಡವೂ ಇಲ್ಲದೆ ಒಲಿಂಪಿಕ್ಸ್‌ಗೆ ತೆರಳಲು ಸಿದ್ಧವಾಗಿದೆ’ ಎಂದು ಭಾರತ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಹೇಳಿದರು. ಅವರ ಮಾತಿಗೆ ಕೋಚ್ ಗ್ರಹಾಂ ರೀಡ್ ದನಿಗೂಡಿಸಿದರು.

ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರು ಪ್ರಾದೇಶಿಕ ಕೇಂದ್ರದಿಂದ ಅವರು ಆನ್‌ಲೈನ್ ಮೂಲಕ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಉಪನಾಯಕ ಬೀರೇಂದ್ರ ಲಾಕ್ರ ಮತ್ತು ಡಿಫೆಂಡರ್ ಹರ್ಮನ್‌ಪ್ರೀತ್ ಸಿಂಗ್ ಕೂಡ ಪತ್ರಿಕಾಗೋಷ್ಠಿಯಲ್ಲಿದ್ದರು.



ಮನ್‌ಪ್ರೀತ್ ಸಿಂಗ್ –ಪ್ರಜಾವಾಣಿ ಚಿತ್ರ

‘ಮೂರನೇ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದು ತಂಡವನ್ನು ಮುನ್ನಡೆಸುವ ಅವಕಾಶ ಸಿಕ್ಕಿರುವುದು ಖುಷಿ ತಂದಿದೆ. ತಂಡದಲ್ಲಿ ಅನುಭವಿ ಆಟಗಾರರು ಇರುವುದರಿಂದ ನಾಯಕತ್ವ ದೊಡ್ಡ ಸವಾಲೇನೂ ಅಲ್ಲ. ತಂಡಕ್ಕೆ ಒಗ್ಗಟ್ಟಿನ ಬಲ ಇದೆ’ ಎಂದು ಮನ್‌ಪ್ರೀತ್ ಹೇಳಿದರು.

‘ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸುವುದು ಈಗ ತಂಡಕ್ಕೆ ಸುಲಭಸಾಧ್ಯವಾಗುತ್ತಿದೆ. ಡ್ರ್ಯಾಗ್ ಫ್ಲಿಕ್, ಸ್ಲ್ಯಾಪಿಂಗ್ ಮತ್ತು ಗೋಲು ಹೊಡೆಯುವುದರಲ್ಲಿ ಪಳಗಿದವರು ಇದ್ದಾರೆ. ಅವರನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದೇವೆ’ ಎಂದರು.

ಕೋಚ್ ಗ್ರಹಾಂ ರೀಡ್ ಅವರು ಆಕಾಶದೀಪ್ ಸಿಂಗ್ ಅವರಂಥ ಅನುಭವಿಗಳನ್ನು ಬದಿಗಿಟ್ಟು ಯುವ ಆಟಗಾರರನ್ನು ಒಲಿಂಪಿಕ್ಸ್‌ಗೆ ಆಯ್ಕೆ ಮಾಡಿರುವ ನಿರ್ಧಾರದ ಬಗ್ಗೆ ಹೆಚ್ಚೇನೂ ಹೇಳದೆ ‘ಯುವ ಆಟಗಾರರು ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಲು ಸಜ್ಜಾಗಿದ್ದಾರೆ’ ಎಂದಷ್ಟೇ ನುಡಿದರು.

ಕುಸ್ತಿ: ಬಜರಂಗ್ ಪೂನಿಯಾಗೆ ಗಾಯ

ನವದೆಹಲಿ (ಪಿಟಿಐ): ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಶುಕ್ರವಾರ ರಷ್ಯಾದ ಸ್ಥಳೀಯ ಟೂರ್ನಿಯೊಂದರಲ್ಲಿ ಸ್ಪರ್ಧಿಸುವ ವೇಳೆ ಮೊಣಕಾಲು ಗಾಯಕ್ಕೆ ತುತ್ತಾಗಿದ್ದಾರೆ. ಆದರೆ ಗಾಯದ ಗಂಭೀರತೆ ಕಡಿಮೆ ಇರುವ ಕಾರಣ ಚಿಂತಿಸುವ ಅಗತ್ಯವಿಲ್ಲ ಎಂದು ಅವರ ಕೋಚ್ ಶಾಕೊ ಬೆಂಟಿಡಿಸ್ ಅವರು ಭರವಸೆ ವ್ಯಕ್ತಪಡಿಸಿದ್ದಾರೆ.

ಅಲಿ ಅಲ್‌ಯೇವ್ ಟೂರ್ನಿಯ ಸೆಮಿಫೈನಲ್ ಬೌಟ್‌ನಲ್ಲಿ ಎ. ಕುದೆಯೆವ್ ಎದುರು ಬಜರಂಗ್ ಕಣಕ್ಕಿಳಿದಿದ್ದರು. ಹಣಾಹಣಿಯಲ್ಲಿ ಮುಂದಿದ್ದ ಭಾರತದ ಪೈಲ್ವಾನ ಎದುರಾಳಿಯ ಬಲಗಾಲು ಗುರಿಯಾಗಿರಿಸಿಕೊಂಡು ದಾಳಿಗಿಳಿದರು. ಪ್ರತಿಯಾಗಿ ಕುದೆಯೆವ್ ಕೂಡ ಬಜರಂಗ್ ಅವರ ಬಲಗಾಲು ಹಿಡಿದು ಎಳೆದರು. ಈ ವೇಳೆ ಮ್ಯಾಟ್ ಮೇಲೆ ಬಿದ್ದ ಬಜರಂಗ್ ನೋವಿನಿಂದ ನರಳಿದರು. ಬಳಿಕ ಬೌಟ್ ಬಿಟ್ಟುಕೊಟ್ಟರು.

ಒಲಿಂಪಿಕ್ ಅರ್ಹತೆ ಗಳಿಸಿರುವ ಬಜರಂಗ್, ಪದಕ ಗೆಲ್ಲುವ ನೆಚ್ಚಿನ ಪೈಲ್ವಾನರಲ್ಲಿ ಒಬ್ಬರಾಗಿದ್ದಾರೆ

ಇಂಗ್ಲೆಂಡ್‌ಗೆ ಸರಣಿ

ಕಾರ್ಡಿಫ್ (ಎಪಿ): ಇಂಗ್ಲೆಂಡ್ ತಂಡ ಶ್ರೀಲಂಕಾ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಗುರುವಾರ 5 ವಿಕೆಟ್‌ಗಳಿಂದ ಜಯ ಸಾಧಿಸಿತು. ಈ ಮೂಲಕ ಸರಣಿಯನ್ನು ಗೆದ್ದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 7ಕ್ಕೆ 111 (ಕುಶಲ್ ಪೆರೇರ 21, ಕುಶಲ್ ಮೆಂಡಿಸ್ 39; ಸ್ಯಾಮ್ ಕರನ್ 8ಕ್ಕೆ1, ಮಾರ್ಕ್ ವುಡ್ 18ಕ್ಕೆ2, ಆದಿಲ್ ರಶೀದ್ 24ಕ್ಕೆ2); ಇಂಗ್ಲೆಂಡ್ (ಪರಿಷ್ಕೃತ ಗುರಿ–18 ಓವರ್‌ಗಳಲ್ಲಿ 103): 16.1 ಓವರ್‌ಗಳಲ್ಲಿ 5ಕ್ಕೆ 108 (ಜೇಸನ್ ರಾಯ್ 17, ಏಯಾನ್ ಮಾರ್ಗನ್ 11, ಸ್ಯಾಮ್ ಬಿಲಿಂಗ್ಸ್ 24, ಲಿಯಾಮ್ ಲಿವಿಂಗ್‌ಸ್ಟನ್ ಔಟಾಗದೆ 29; ದುಷ್ಮಂತ ಚಮೀರ 29ಕ್ಕೆ1, ಬಿನೂರ ಫೆರ್ನಾಂಡೊ 17ಕ್ಕೆ1, ವನಿಂದು ಹಸರಂಗ 20ಕ್ಕೆ2). ಫಲಿತಾಂಶ: ಇಂಗ್ಲೆಂಡ್‌ಗೆ 5 ವಿಕೆಟ್ ಜಯ. ಸರಣಿಯಲ್ಲಿ 2–0 ಮುನ್ನಡೆ.

ವಿಂಬಲ್ಡನ್: ಹಲೆಪ್ ಅಲಭ್ಯ

ಲಂಡನ್ (ಎಪಿ/ಎಎಫ್‌ಪಿ): ಮೀನಖಂಡದ ಗಾಯದಿಂದಾಗಿ ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ರುಮೇನಿಯಾದ ಆಟಗಾರ್ತಿ ಸಿಮೊನಾ ಹಲೆಪ್ ಶುಕ್ರವಾರ ತಿಳಿಸಿದ್ದಾರೆ. ಅವರು ಈ ಕೂಟದ ಮಹಿಳಾ ಸಿಂಗಲ್ಸ್ ಹಾಲಿ ಚಾಂಪಿಯನ್ ಆಗಿದ್ದಾರೆ.

29 ವರ್ಷದ ಹಲೆಪ್, ಮೇ ತಿಂಗಳ ಮಧ್ಯದಲ್ಲಿ ಇಟಾಲಿಯನ್ ಓಪನ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯದಿಂದ ಹಿಂದೆ ಸರಿದಿದ್ದರು. ನಂತರ ಅವರು ಗಾಯದ ಸಮಸ್ಯೆಯಿಂದ ಕ್ಷಮತೆ ಕಾಪಾಡಿಕೊಳ್ಳಲು ಪರದಾಡುತ್ತಿದ್ದಾರೆ.

‘ಮೀನ ಖಂಡದ ಗಾಯದಿಂದ ಪೂರ್ಣ ಚೇತರಿಸಿಕೊಂಡಿಲ್ಲ. ವಿಂಬಲ್ಡನ್‌ನಿಂದ ಹಿಂದೆ ಸರಿಯುತ್ತಿದ್ದೇನೆ ಎಂದು ಅತೀವ ಬೇಸರದಿಂದ ಪ್ರಕಟಿಸುತ್ತಿದ್ದೇನೆ’ ಎಂದಿದ್ದಾರೆ ಹಲೆಪ್.



ಸಿಮೊನಾ ಹಲೆಪ್

ಜೊಕೊ-ಫೆಡರರ್ ಮುಖಾಮುಖಿ?: ವಿಂಬಲ್ಡನ್ ಟೂರ್ನಿಯ ಪುರುಷರ ಸಿಂಗಲ್ಸ್ ಡ್ರಾ ಶುಕ್ರವಾರ ಪ್ರಕಟವಾಗಿದ್ದು, ಪ್ರಮುಖ ಆಟಗಾರರಾದ ರೋಜರ್ ಫೆಡರರ್ ಮತ್ತು ನೊವಾಕ್ ಜೊಕೊವಿಚ್ ಅವರು ಫೈನಲ್ ಪಂದ್ಯದಲ್ಲಿ ಮಾತ್ರ ಮುಖಾಮುಖಿಯಾಗುವ ಸಾಧ್ಯತೆಯಿದೆ. ಒಂದು ವೇಳೆ ಹೀಗಾದರೆ ಅದು 2019ರ ಆವೃತ್ತಿಯ ದೀರ್ಘ ಫೈನಲ್‌ನ ಮರುಸೃಷ್ಟಿ ನಿರೀಕ್ಷಿಸಬಹುದಾಗಿದೆ. ಪುರುಷರ ಸಿಂಗಲ್ಸ್ ಡ್ರಾನಲ್ಲಿ ಸ್ವಿಟ್ಜರ್ಲೆಂಡ್‌ನ ಫೆಡರರ್ ಮತ್ತು ಸರ್ಬಿಯಾದ ಜೊಕೊವಿಚ್ ಪರಸ್ಪರ ವಿರುದ್ಧ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ.

ಸೋಮವಾರದಿಂದ ಟೂರ್ನಿ ನಡೆಯಲಿದೆ.

ಮುಖ್ಯ ಸುತ್ತಿಗೆ ಜಾಂಗ್ ಜಿಜೇನ್: ಜಾಂಗ್ ಜಿಜೇನ್ ಅವರು ಟೂರ್ನಿಯ ಮುಖ್ಯ ಸುತ್ತಿಗೆ ಪ್ರವೇಶಿಸಿದ್ದಾರೆ. ವಿಂಬಲ್ಡನ್ ಟೂರ್ನಿಯಲ್ಲಿ ಈ ಸಾಧನೆ ಮಾಡಿದ ಚೀನಾದ ಮೊದಲ ಆಟಗಾರ ಅವರು. ಮೂರು ಅರ್ಹತಾ ಪಂದ್ಯಗಳಲ್ಲಿ ಅವರು ಜಯ ಸಾಧಿಸಿದರು.

ಜೂಡೊ: ಸುಶೀಲಾಗೆ ಒಲಿಂಪಿಕ್ ಟಿಕೆಟ್




ಸುಶೀಲಾ ದೇವಿ

ನವದೆಹಲಿ (ಪಿಟಿಐ): ಭಾರತದ ಜೂಡೊ ಪಟು ಸುಶೀಲಾ ದೇವಿ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆದುಕೊಂಡಿದ್ದಾರೆ. ಏಷ್ಯಾದ ಕೋಟಾ ಅಡಿ ಅವರು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ ಎಂದು ಅಂತರರಾಷ್ಟ್ರೀಯ ಜೂಡೊ ಫೆಡರೇಷನ್ ಶುಕ್ರವಾರ ತಿಳಿಸಿದೆ.

48 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ಸುಶೀಲಾ 989 ಪಾಯಿಂಟ್ ಹೊಂದಿದ್ದು ಏಷ್ಯಾದ ಜೂಡೊ ಪಟುಗಳ ಪಟ್ಟಿಯಲ್ಲಿ ಏಳನೇ ಸ್ಥಾನ ಗಳಿಸಿದ್ದಾರೆ. ಏಷ್ಯಾದಿಂದ 10 ಮಂದಿಗೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಅವಕಾಶವಿದೆ. ಸುಶೀಲಾ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವತಾರ್ ಸಿಂಗ್ ಭಾರತದ ಪರವಾಗಿ ಪಾಲ್ಗೊಂಡ ಏಕೈಕ ಜೂಡೊ ಪಟು.

ಒಲಿಂಪಿಕ್ಸ್ ಅರ್ಹತೆಯತ್ತ ಭಾರತ ಪುರುಷರ ರಿಲೆ ತಂಡ



ಮೊಹಮ್ಮದ್ ಅನಾಸ್

ಪಟಿಯಾಲ (ಪಿಟಿಐ): ಭಾರತದ ಪುರುಷರ 4x400 ಮೀಟರ್ಸ್ ರಿಲೇ ತಂಡ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವತ್ತ ಹೆಜ್ಜೆ ಇರಿಸಿದೆ. ಶುಕ್ರವಾರ ಇಲ್ಲಿ ಆರಂಭಗೊಂಡ ರಾಷ್ಟ್ರೀಯ ಅಥ್ಲೆಟಿಕ್ಸ್‌ನ ಹೀಟ್ಸ್‌ನಲ್ಲಿ ತಂಡ 3 ನಿಮಿಷ 01.89 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ತಂಡ ಭರವಸೆ ಮೂಡಿಸಿತು.

ಮೊಹಮ್ಮದ್ ಅನಾಸ್ ಯಾಹಿಯಾ, ಅಮೋಜ್ ಜೇಕಬ್, ಆರೋಗ್ಯ ರಾಜೀವ್ ಮತ್ತು ನೋಹ್ ನಿರ್ಮಲ್ ಅವರ ಈ ಸಾಧನೆಯಿಂದಾಗಿ ತಂಡ 16ನೇ ಸ್ಥಾನದಿಂದ 13ನೇ ಸ್ಥಾನಕ್ಕೆ ಏರಲಿದೆ. ಅಗ್ರ 16 ಸ್ಥಾನಗಳಲ್ಲಿರುವ ತಂಡಗಳು ಟೋಕಿಯೊ ಒಲಿಂಪಿಕ್ಸ್‌ನ ರಿಲೇಯಲ್ಲಿ ಪಾಲ್ಗೊಳ್ಳಲಿವೆ. ಅರ್ಹತೆ ಗಳಿಸಲು ಜೂನ್ 29 ಕೊನೆಯ ದಿನವಾಗಿದೆ. ಮಹಿಳೆಯರ 4x100 ಮೀ. ರಿಲೇಯಲ್ಲಿ ಅರ್ಚನಾ ಸುಶೀಂದ್ರನ್, ಹಿಮಾ ದಾಸ್, ಧನಲಕ್ಷ್ಮಿ ಮತ್ತು ದ್ಯುತಿ ಚಾಂದ್ ಅವರಿಗೆ ನಿರ್ದಿಷ್ಟ ಅವಧಿಯಲ್ಲಿ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. 43.05 ಸೆಕೆಂಡುಗಳ ಸಾಧನೆ ಮಾಡಿದ್ದರೆ ತಂಡ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುತ್ತಿತ್ತು. ಆದರೆ 0.45 ಸೆಕೆಂಡುಗಳಲ್ಲಿ ಹಿಂದೆ ಉಳಿಯಿತು. ಪಾರುಲ್ ಚೌಧರಿ ಮಹಿಳೆಯರ ಐದು ಸಾವಿರ ಮೀ. ಓಟದಲ್ಲಿ ಚಿನ್ನ ಗಳಿಸಿದರು.



ಚೆಂಡಿನ ಮೇಲೆ ಹಿಡಿತ ಸಾಧಿಸಲು ಉರುಗ್ವೆಯ ನಹಿತಾನ್ ನಾಂಡೆಜ್ (ಎಡ) ಮತ್ತು ಬೊಲಿವಿಯಾದ ಜುವಾನ್ ಕಾರ್ಲೋಸ್ ಪ್ರಯತ್ನಿಸಿದ ಸಂದರ್ಭ –ಎಎಫ್‌ಪಿ ಚಿತ್ರ

ವೇಲ್ಸ್–ಡೆನ್ಮಾರ್ಕ್ ಮುಖಾಮುಖಿ

ಆ್ಯಮ್‌ಸ್ಟರ್‌ಡ್ಯಾಂ (ಎಪಿ): ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯಗಳು ಶನಿವಾರ ಆರಂಭವಾಗಲಿವೆ. ಮೊದಲ ಪಂದ್ಯದಲ್ಲಿ ವೇಲ್ಸ್ ಮತ್ತು ಡೆನ್ಮಾರ್ಕ್ ಮುಖಾಮುಖಿಯಾಗಲಿವೆ.

ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ ಫಿನ್ಲೆಂಡ್ ಮತ್ತು ಬೆಲ್ಜಿಯಂ ವಿರುದ್ಧ ಸೋತಿದ್ದ ಡೆನ್ಮಾರ್ಕ್ ನಂತರ ರಷ್ಯಾವನ್ನು 4–1ರಲ್ಲಿ ಮಣಿಸಿ ‘ಬಿ’ ಗುಂಪಿನಲ್ಲಿ ಎರಡನೇ ಸ್ಥಾನದೊಂದಿಗೆ ನಾಕೌಟ್ ಹಂತಕ್ಕೆ ತಲುಪಿತ್ತು.

ಟರ್ಕಿ ವಿರುದ್ಧ ಜಯ ಗಳಿಸಿದ ನಂತರ ಸ್ವಿಟ್ಜರ್ಲೆಂಡ್ ಎದುರು ಡ್ರಾ ಸಾಧಿಸಿದ ವೇಲ್ಸ್ ನಂತರ ಇಟಲಿ ವಿರುದ್ಧ 0–1ರಲ್ಲಿ ಸೋತಿತ್ತು. ‘ಎ’ ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿ ನಾಕೌಟ್ ಹಂತಕ್ಕೇರಿತ್ತು.

ಪಂದ್ಯ ಆರಂಭ: ರಾತ್ರಿ 9.30 (ಭಾರತೀಯ ಕಾಲಮಾನ). ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಕ್ವಾರ್ಟರ್ ಫೈನಲ್‌ಗೆ ಉರುಗ್ವೆ: ಉರುಗ್ವೆ ಮತ್ತು ಪರಾಗ್ವೆ ತಂಡಗಳು ಕೋಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸಿದವು. ಸಾವೊ ಪೌಲೊದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಉರುಗ್ವೆ ಬೊಲಿವಿಯಾವನ್ನು 2–0ಯಿಂದ ಮತ್ತು ಪರಾಗ್ವೆ 2–0ಯಿಂದ ಚಿಲಿಯನ್ನು ಸೋಲಿಸಿದವು.

ಈಜು: ಶ್ರೀಹರಿಗೆ ತಪ್ಪಿದ ‘ಎ’ ಅರ್ಹತೆ

ನವದೆಹಲಿ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರೂ ಒಲಿಂಪಿಕ್ಸ್ ‘ಎ’ ಅರ್ಹತೆ ಗಳಿಸುವಲ್ಲಿ ವಿಫಲರಾದರು. ಇಟಲಿಯ ರೋಮ್‌ನಲ್ಲಿ ನಡೆಯುತ್ತಿರುವ ಸೆಟ್ಟೆ ಕೊಲ್ಲಿ ಟ್ರೋಫಿ ಈಜು ಚಾಂಪಿಯನ್‌ಷಿಪ್‌ನ 100 ಮೀಟರ್ ಬ್ಯಾಕ್‌ಸ್ಟ್ರೋಕ್ ವಿಭಾಗದ ಸ್ಪರ್ಧೆಯನ್ನು ಕರ್ನಾಟಕದ ಈಜುಪಟು 53.90 ಸೆಕೆಂಡುಗಳಲ್ಲಿ ಕೊನೆಗೊಳಿಸಿದರು.

ಆದರೆ ಈ ವಿಭಾಗದಲ್ಲಿ ಒಲಿಂಪಿಕ್ಸ್ ‘ಎ’ ಅರ್ಹತೆಗೆ 53.85 ಸೆಕೆಂಡುಗಳ ಮಾನದಂಡವನ್ನು ನಿಗದಿಪಡಿಸಲಾಗಿದೆ. ಶ್ರೀಹರಿ ಅವರಿಗೆ ‘ಎ’ ಅರ್ಹತೆ ಗಳಿಸಲು ಇದು ಕೊನೆಯ ಅವಕಾಶವಾಗಿತ್ತು. ಅವರು ಈ ಹಿಂದೆ 54.45 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ದಾಖಲೆ ನಿರ್ಮಿಸಿದ್ದರು.

ಭಾರತದ ಇನ್ನೋರ್ವ ಈಜುಪಟು ಅದ್ವೈತ್ ಪಾಗೆ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಯ 1500 ಮೀ ಫ್ರೀಸ್ಟೈಲ್ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ಇದರೊಂದಿಗೆ ಒಲಿಂಪಿಕ್ಸ್ ‘ಬಿ’ ಅರ್ಹತೆ ಗಳಿಸಿದರು. 15 ನಿಮಿಷ 23.66 ಸೆಕೆಂಡುಗಳಲ್ಲಿ ಅವರು ಗುರಿ ಕ್ರಮಿಸಿದರು.

ಸಂಕ್ಷಿಪ್ತ ಸುದ್ದಿ

ಗೂಗಲ್, ಅಮೆಜಾನ್: ಉತ್ಪನ್ನಗಳ ನಕಲಿ ವಿಮರ್ಶೆ- ತನಿಖೆ

ಲಂಡನ್ (ಎಪಿ): ಗೂಗಲ್ ಮತ್ತು ಅಮೆಜಾನ್ ಆಡಳಿತಗಳು ವಿವಿಧ ಉತ್ಪನ್ನ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ನಕಲಿ ವಿಮರ್ಶೆಗಳನ್ನು ತಡೆಯಲು ಅಗತ್ಯ ಕ್ರಮಕೈಗೊಳ್ಳುತ್ತಿಲ್ಲ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಬ್ರಿಟನ್‌ನ ತನಿಖಾ ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟನ್‌ನ ಕಾಂಪಿಟೇಷನ್ ಅಂಡ್ ಮಾರ್ಕೆಟ್ ಅಥಾರಿಟಿ ಅಧಿಕಾರಿಗಳು, ‘ಈ ಎರಡೂ ಕಂಪನಿಗಳು ಬ್ರಿಟನ್‌ನ ಗ್ರಾಹಕ ಕಾಯ್ದೆಯನ್ನು ಉಲ್ಲಂಘಿಸಿದ್ದು, ಗ್ರಾಹಕರ ಹಿತಾಸಕ್ತಿ ರಕ್ಷಿಸಲು ವಿಫಲವಾಗಿವೆ ಎಂಬ ಅಭಿಪ್ರಾಯವಿದೆ. ಅಧಿಕಾರಿಗಳು ಎರಡೂ ಸಂಸ್ಥೆಗಳಲ್ಲಿನ ಬಂದಿರುವ ನಕಲಿ ವಿಮರ್ಶೆಗಳ ಪರಿಶೀಲನೆ ನಡೆದಿದೆ’ ಎಂದು ತಿಳಿಸಿದ್ದಾರೆ.

‘ಆನ್‌ಲೈನ್ ಮೂಲಕ ಉತ್ಪನ್ನಗಳನ್ನು ಖರೀದಿಸುವ ಅಸಂಖ್ಯ ಗ್ರಾಹಕರಿಗೆ ತಪ್ಪು ಮಾಹಿತಿ, ಶಿಫಾರಸುಗಳ ಮೂಲಕ ವಂಚಿಸಲಾಗುತ್ತಿದೆ ಎಂಬುದೇ ನಮ್ಮ ಆತಂಕ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆ ಕುರಿತಂತೆ ಬ್ರಿಟನ್‌ನ ಅಧಿಕಾರಿಗಳ ಜೊತೆಗೆ ಅಗತ್ಯ ಸಹಕಾರ ನೀಡಲಾಗುವುದು ಎಂದು ಗೂಗಲ್ ಮತ್ತು ಅಮೆಜಾನ್ ಪ್ರತಿಕ್ರಿಯಿಸಿವೆ.

‘ರಾಣಾ ಪ್ರಕರಣ: ಜುಲೈ 15ರೊಳಗೆ ದಾಖಲೆ ಸಲ್ಲಿಸಿ’

ಲಾಸ್ ಏಂಜಲೀಸ್ (ಎಪಿ): ಮುಂಬೈ ಭಯೋತ್ಪಾದನಾ ದಾಳಿಯ (2008) ಪ್ರಮುಖ ಆರೋಪಿ, ಪಾಕಿಸ್ತಾನ ಮೂಲದ ಕೆನಡಾದ ಉದ್ಯಮಿ ತಹವ್ವೂರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 15ರೊಳಗೆ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವಂತೆ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರು ಪ್ರತಿವಾದಿ ವಕೀಲರು ಮತ್ತು ಪ್ರಾಸಿಕ್ಯೂಟರ್‌ಗಳಿಗೆ ಆದೇಶಿಸಿದ್ದಾರೆ.

ಅಲ್ಲಿಯವರೆಗೂ ರಾಣಾನನ್ನು ಫೆಡರಲ್ ಕಸ್ಟಡಿಯಲ್ಲಿಯೇ ಇರಿಸಲು ಸೂಚನೆ ನೀಡಲಾಗಿದೆ.